ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

# ಜನತಾ ವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಶುಕ್ರವಾರ, ನವೆಂಬರ್ 19, 2021

ಸಂಪುಟ : 48 ಸಂಚಿಕೆ : 188 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 4.00 www.janathavani.com janathavani@mac.com

## ಬಿಟ್ ಕಾಯಿನ್‌ನಲ್ಲಿ ಮುಳುಗಿದ ಸರ್ಕಾರ



### ಅಕಾಲಿಕ ಮಳೆ ಹಾನಿ ಬಗ್ಗೆ ಗಮನವಿಲ್ಲ

ಬೆಂಗಳೂರು, ನ. 18 - ಬಿಟ್ ಕಾಯಿನ್ ಹಗರಣದ ಆರೋಪಗಳ ವಿಷಯದಲ್ಲಿ ತೊಡಗಿರುವ ರಾಜ್ಯ ಸರ್ಕಾರ ಅಕಾಲಿಕ ಮಳೆಯಿಂದ ಆಗಿರುವ ಭಾರೀ ಹಾನಿ ಕಡೆ ಗಮನವನ್ನೇ ನೀಡುತ್ತಿಲ್ಲ.

ಕಳೆದ ಒಂದು ತಿಂಗಳಿಂದ ರಾಜ್ಯದ ಮೇಲೆ ಚಂಡಮಾರುತ ಹಾಗೂ ಅಕಾಲಿಕ ಮಳೆಯಿಂದಾಗಿ ಲಕ್ಷಾಂತರ ಹೆಕ್ಟೇರ್ ಪ್ರದೇಶದಲ್ಲಿನ ಬೆಳೆಗಳು ಹಾಳಾಗಿ ಹೋಗಿವೆ. ಇದರಿಂದ ರೈತರು ಕೋಟ್ಯಂತರ ರೂ. ನಷ್ಟ ಅನುಭವಿಸಿದ್ದಾರೆ.

ಬಹಳ ವರ್ಷಗಳ ನಂತರ ಕೆರೆಗಳು ಭರ್ತಿಯಾಗಿ ಕೋಡಿ ಹರಿದು, ಕೆಳ ಭಾಗದಲ್ಲಿನ ಬೆಳೆಗಳ ಜೊತೆಗೆ ಸತತ ಮಳೆಯಿಂದಾಗಿ ಮನೆಗಳೂ ಬಿದ್ದಿವೆ.

ಇಷ್ಟಾದರೂ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಆಗಲೀ, ಕೃಷಿ, ಕಂದಾಯ ಸಚಿವರಾಗಲೀ ಇದುವರೆಗೂ ಅಧಿಕಾರಿಗಳ ಸಭೆ ನಡೆಸಿಲ್ಲ, ಹಾನಿಗೊಳಗಾದ ಪ್ರದೇಶಗಳಿಗೂ ಭೇಟಿ ನೀಡಿಲ್ಲ. ಮಳೆ ಹಾನಿಗೂ, ತಮಗೂ ಸಂಬಂಧ ಇಲ್ಲವೆಂಬಂತೆ ಸಚಿವರುಗಳು ವರ್ತಿಸುತ್ತಿದ್ದಾರೆ.

ಅತಿವೃಷ್ಟಿ, ಅನಾವೃಷ್ಟಿ ಸಂದರ್ಭದಲ್ಲಿ ಕಂದಾಯ ಇಲಾಖೆ ಹೊಣೆ ಹೊತ್ತವರು, ಹಿರಿಯ ಅಧಿಕಾರಿಗಳ ಸಭೆ ನಡೆಸಿ, ಜಿಲ್ಲಾಡಳಿತದೊಂದಿಗೆ ಸಂಪರ್ಕ ಸಾಧಿಸಿ, ತಕ್ಷಣ ಪರಿಹಾರ ಕಾರ್ಯ ಕೈಗೊಳ್ಳಬೇಕಿತ್ತು.

ಹಾನಿಗೊಳಗಾದ ಪ್ರದೇಶಗಳಿಗೆ ಭೇಟಿ ನೀಡುವುದಿರಲಿ, ಅಧಿಕಾರಿಗಳ ಸಭೆಯನ್ನೂ ನಡೆಸಿಲ್ಲ. ಸುದ್ದಿಗಾರರು ಮಳೆ ಪರಿಸ್ಥಿತಿ ಗಮನಕ್ಕೆ ತಂದ ನಂತರ, ಮುಖ್ಯಮಂತ್ರಿ ಬೊಮ್ಮಾಯಿ ಪ್ರತಿಕ್ರಿಯಿಸಿದ್ದು, ನಾಳೆ ಈ ಬಗ್ಗೆ (2ನೇ ಪುಟಕ್ಕೆ)

## ಫಸಲ್ ಭಿಮಾ: ಮಾರ್ಗಸೂಚಿ ಪರಿಷ್ಕರಿಸಿ



ನವದೆಹಲಿ, ನ.18- ರೈತರ ಬೆಳೆಗಳು ಪ್ರಕೃತಿ ವಿಕೋಪದಿಂದ ಹಾನಿಗೊಳಗಾದ ಸಂದರ್ಭದಲ್ಲಿ ಕೇಂದ್ರ ಸರ್ಕಾರ ಪ್ರಧಾನಮಂತ್ರಿ ಫಸಲ್ ಬಿಮಾ ಯೋಜನೆಯಡಿ ಪರಿಹಾರ ಕಲ್ಪಿಸಲು ಅವಕಾಶ ಕಲ್ಪಿಸಿದೆ. ಆದರೆ, ಈ ವಿಮಾ ಯೋಜನೆಯಡಿ ಪರಿಹಾರ ನಿಗದಿಪಡಿಸುವಾಗ ಥ್ರೆಶ್ ಹೋಲ್ಡ್ ಸರಾಸರಿ ಇಳುವರಿಯನ್ನು ಪರಿಗಣಿ ಸುವುದರಿಂದ ಸಾಕಷ್ಟು ರೈತರಿಗೆ ನ್ಯಾಯಯುತ ಪರಿಹಾರ ಲಭ್ಯವಾಗುತ್ತಿಲ್ಲ. ಈ ಹಿನ್ನೆಲೆಯಲ್ಲಿ ಪ್ರಧಾನಮಂತ್ರಿ ಫಸಲ್ ಬಿಮಾ ಯೋಜನೆಯ ಮಾರ್ಗಸೂಚಿಯನ್ನು ಪರಿಷ್ಕರಣೆ ಮಾಡುವ ಅವಶ್ಯಕತೆ ಇದೆ ಎಂದು ವಾಣಿಜ್ಯ ಸಂಸದೀಯ ಸ್ಥಾಯಿ ಸಮಿತಿ ಸದಸ್ಯರಾಗಿರುವ, ಸಂಸದ ಜಿ.ಎಂ. ಸಿದ್ದೇಶ್ವರ ಒತ್ತಾಯಿಸಿದ್ದಾರೆ.

ದೆಹಲಿಯಲ್ಲಿ ಇತ್ತೀಚೆಗೆ ನಡೆದ ವಾಣಿಜ್ಯ ಸಂಸದೀಯ ಸ್ಥಾಯಿ ಸಮಿತಿ ಸಭೆಯಲ್ಲಿ ಭಾಗವಹಿಸಿದ್ದ ಸಂಸದರು, ಭತ್ತಕ್ಕೆ ನಿಗದಿಪಡಿಸುವ ಕನಿಷ್ಟ ಬೆಂಬಲ ಬೆಲೆ, ಭತ್ತ ಖರೀದಿ ಕೇಂದ್ರಗಳ ತೆರೆಯುವಿಕೆ, ಅಡಿಕೆ ಆಮದು ಮತ್ತು ರಫ್ತು ವಿಚಾರಗಳ ಬಗ್ಗೆ ಸುದೀರ್ಘವಾಗಿ ಚರ್ಚೆ ನಡೆಸಿದರು.

ಭತ್ತ ಬೆಳೆದ ರೈತರು ಭತ್ತ ಮಾರಾಟ ಮಾಡಿದ ಮೇಲೆ ಕನಿಷ್ಟ ಬೆಂಬಲ ಬೆಲೆ ನಿಗದಿಪಡಿಸಲಾಗುತ್ತದೆ, ಬೆಂಬಲ ಬೆಲೆ ಘೋಷಣೆ ಮಾಡುವ ಸಮಯಕ್ಕೆ ರೈತರ ಬಳಿ ಭತ್ತವೇ ದಾಸ್ತಾನಿರುವುದಿಲ್ಲ, ಸರಿಯಾದ ಸಮಯದಲ್ಲಿ ಭತ್ತಕ್ಕೆ ಬೆಂಬಲ ಬೆಲೆ ಘೋಷಣೆ ಮಾಡಬೇಕು ಅದೇ ರೀತಿ ಭತ್ತ ಖರೀದಿ ಕೇಂದ್ರಗಳನ್ನು ಸಕಾಲದಲ್ಲಿ (2ನೇ ಪುಟಕ್ಕೆ)

# ಐಸಿಯುನಲ್ಲಿರುವ ಕಾಂಗ್ರೆಸ್

## ಒಳಜಗಳದಿಂದಲೇ ನಾಶವಾಗುತ್ತದೆ: ಮಾಜಿ ಸಿಎಂ ಜಗದೀಶ್ ಶೆಟ್ಟರ್



ದಾವಣಗೆರೆ, ನ. 18 - ರಾಜ್ಯದಲ್ಲಿ ಕಾಂಗ್ರೆಸ್ ಐ.ಸಿ.ಯು.ನಲ್ಲಿದೆ. ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ಹಾಗೂ ಕಾಂಗ್ರೆಸ್ ರಾಜ್ಯಾಧ್ಯಕ್ಷ ಡಿ.ಕೆ. ಶಿವಕುಮಾರ್ ನಡುವಿನ ಒಳಜಗಳದಿಂದಾಗಿ ಆ ಪಕ್ಷ ನಾಶವಾಗಲಿದೆ ಎಂದು ಮಾಜಿ ಮುಖ್ಯಮಂತ್ರಿ ಹಾಗೂ ಬಿಜೆಪಿ ಹಿರಿಯ ನಾಯಕ ಜಗದೀಶ್ ಶೆಟ್ಟರ್ ಹೇಳಿದ್ದಾರೆ.

ಬಿಜೆಪಿ ವತಿಯಿಂದ ನಗರದ ಶಾಮನೂರು ಶಿವಶಂಕರಪ್ಪ ಪಾರ್ವತಮ್ಮ ಕಲ್ಯಾಣ ಮಂಟಪದಲ್ಲಿ ಆಯೋಜಿಸಲಾಗಿದ್ದ ಬಿಜೆಪಿ ಜನ ಸ್ವರಾಜ್ ಸಮಾವೇಶ ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು. ಸ್ಥಳೀಯ ಸಂಸ್ಥೆಗಳ ಮೂಲಕ ಪರಿಷತ್‌ಗೆ ನಡೆಯಲಿರುವ ಚುನಾವಣೆ ಹಿನ್ನೆಲೆಯಲ್ಲಿ ಜನ ಸ್ವರಾಜ್ ಅಭಿಯಾನ ಆರಂಭಿಸಲಾಗಿದೆ.

2023ರಲ್ಲಿ ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರಲಿದೆ ಎಂಬ ಭ್ರಮೆಯಿಂದ ಸಿದ್ದರಾಮಯ್ಯ ಹಾಗೂ ಶಿವಕುಮಾರ್ ಮುಖ್ಯಮಂತ್ರಿ ಸ್ಥಾನಕ್ಕೆ ಸೆಣಸಾಟ ನಡೆಸಿದ್ದಾರೆ. ಆದರೆ, ಕಾಂಗ್ರೆಸ್‌ನದ್ದು ಮುಗಿದ ಅಧ್ಯಾಯ ಎಂದು ಶೆಟ್ಟರ್ ಹೇಳಿದರು.

ಮೊನ್ನೆ ನಡೆದ ಸಭೆಯಲ್ಲಿ 'ಡಿ.ಕೆ. - ಡಿ.ಕೆ.' ಎಂಬ ಘೋಷಣೆಯಿಂದ ಸಿದ್ದರಾಮಯ್ಯ ಭಾಷಣ ಮಾಡಲು ಬಿಡಲಿಲ್ಲ. ಇದರಿಂದಾಗಿ ಸಿದ್ದರಾಮಯ್ಯ ಸಿಟ್ಟಿಗೆದ್ದು ಸಭಾತ್ಯಾಗ ಮಾಡಿ, ಈಗ ಸಬೂಬು ಹೇಳುತ್ತಿದ್ದಾರೆ. ಇವರ ಒಳಜಗಳದಿಂದ ಕಾಂಗ್ರೆಸ್ ನಾಶವಾಗಲಿದೆ ಎಂದವರು ತಿಳಿಸಿದರು.

ಪಂಜಾಬ್‌ನಲ್ಲಿ ಒಬ್ಬ ಸಿಧು ಇದ್ದರೆ, ಕರ್ನಾಟಕದಲ್ಲೂ ಇನ್ನೊಬ್ಬ ಸಿಧು ಇದ್ದಾರೆ. ಇವರಿಬ್ಬರಿಂದ ಕಾಂಗ್ರೆಸ್ ಕುಸಿಯುತ್ತಿದೆ. ಕಾಂಗ್ರೆಸ್ ಮುಗಿದ ಅಧ್ಯಾಯವಾಗಿದ್ದರೆ, ಬಿಜೆಪಿ ಇಂದಿನ ಹಾಗೂ ಭವಿಷ್ಯದ ಪಕ್ಷ ಎಂದವರು ಹೇಳಿದರು.

ದಾವಣಗೆರೆ ಜಿಲ್ಲೆಯಲ್ಲಿ ಪರಿಷತ್ ಸದಸ್ಯರ ಕೊರತೆ ಇದೆ. ಸ್ಥಳೀಯ ಸಂಸ್ಥೆಗಳಿಗೆ ಆಯ್ಕೆಯಾದ ಪಕ್ಷದ ಸದಸ್ಯರು, ಬಿಜೆಪಿ ಅಭ್ಯರ್ಥಿಯನ್ನು ಗೆಲ್ಲಿಸುವ ಜವಾಬ್ದಾರಿ ಹೊಂದಿದ್ದಾರೆ ಎಂದವರು ತಿಳಿಸಿದರು. ಆರೋಗ್ಯ ಸಚಿವ ಡಾ. ಕೆ. ಸುಧಾಕರ್ ಮಾತನಾಡಿ, ಇಂದಿರಾ ಗಾಂಧಿ ಹಾಗೂ ಲಾಲ್ ಬಹದ್ದೂರ್ ಶಾಸ್ತ್ರಿ ಕಾಲದಲ್ಲಿದ್ದ ಜೈ ಹಿಂದ್ ಘೋಷಣೆ ಬಿಟ್ಟು ಈಗ ಜಾತಿಗಳನ್ನು ಒಡೆಯುವ ಅಹಿಂದ ಘೋಷಣೆ ಕೂಗಲಾಗುತ್ತಿದೆ. ಆದರೆ, ಪ್ರಧಾನ ಮಂತ್ರಿ ನರೇಂದ್ರ ಮೋದಿಯವರಿಗಿಂತ ದೊಡ್ಡ ಅಹಿಂದ ನಾಯಕರಿಲ್ಲ ಎಂದರು.

ಬಲವಂತದ (2ನೇ ಪುಟಕ್ಕೆ)

### ಅಭ್ಯರ್ಥಿ ಘೋಷಿಸಿದ ಎಸ್‌ವಿಆರ್ !

ಪರಿಷತ್ ಚುನಾವಣೆಗಾಗಿ ಬಿಜೆಪಿ ಅಭ್ಯರ್ಥಿಗಳ ಪಟ್ಟಿಗೆ ವರಿಷ್ಠರು ಇನ್ನೂ ಅನುಮತಿ ನೀಡಿಲ್ಲ. ಅಷ್ಟರಲ್ಲೇ ಕೆ.ಎಸ್. ನವೀನ್ ಅವರು ಬಿಜೆಪಿಯ ಪರಿಷತ್ ಚುನಾವಣಾ ಅಭ್ಯರ್ಥಿ ಎಂದು ಶಾಸಕ ಎಸ್.ವಿ. ರಾಮಚಂದ್ರ ಘೋಷಿಸಿದ್ದಾರೆ!

ಕಳೆದ ಎರಡು ಚುನಾವಣೆಗಳಲ್ಲಿ ಸೋತಿದ್ದ ನವೀನ್, ಆ ನೋವಿಗೆ ಸಿಲುಕದೇ ಈ ಬಾರಿಯೂ ಜಗಳೂರು ಕಡೆ ಪ್ರಚಾರ ಮಾಡುತ್ತಿದ್ದಾರೆ. ಅವರು ಈ ಬಾರಿ ಗೆಲ್ಲಲಿದ್ದಾರೆ ಎಂದು ರಾಮಚಂದ್ರ ಹೇಳಿದರು. ಅಭ್ಯರ್ಥಿ ಹೆಸರು ಇನ್ನೂ ಅಂತಿಮವಾಗಿಲ್ಲ ಎಂದು ಸಭೆಯಲ್ಲಿದ್ದವರು ಹೇಳಿದಾಗ, ಬಾಯಿ ಹರಕೆಯಿಂದ ಅವರೇ ಅಭ್ಯರ್ಥಿಯಾಗಲಿ ಎಂದು ಪ್ರತಿಕ್ರಿಯಿಸಿದಾಗ ಸಭೆಯಲ್ಲಿ ನಗೆಯ ಅಲೆ ಎದ್ದಿತ್ತು.

### ಮೋದಿ ಎರಡು ಅಲೆಗಳನ್ನು ನಿಯಂತ್ರಿಸಿದ್ದಾರೆ: ಶೆಟ್ಟರ್

ಮುಂದುವರೆದ ದೇಶಗಳಲ್ಲಿ ಕೊರೊನಾದ ಹಲವಾರು ಅಲೆಗಳು ಬರುತ್ತಿವೆ. ಆದರೆ, ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ದೇಶದಲ್ಲಿ ಬಂದ ಎರಡು ಕೊರೊನಾ ಅಲೆಗಳನ್ನು ನಿಯಂತ್ರಿಸಿದ್ದಾರೆ ಎಂದು ಮಾಜಿ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ಹೇಳಿದ್ದಾರೆ.

ಲಸಿಕೆ ಉತ್ಪಾದಿಸುವ ಕಂಪನಿಗಳಿಗೆ ಪ್ರೋತ್ಸಾಹ ಕೊಟ್ಟು, ದೇಶದಲ್ಲೇ ಲಸಿಕೆ ಉತ್ಪಾದನೆ ಮಾಡಿಸಿ, ಇಡೀ ದೇಶದಲ್ಲಿ ಲಸಿಕೆ ಹಾಕಿಸುವ ಕೆಲಸ ಪ್ರಧಾನ ಮಂತ್ರಿಯಿಂದ ಆಗಿದೆ. ಪ್ರತಿ ಲಸಿಕೆಗೆ 750 ರೂ.ಗಳಿಗೂ ಹೆಚ್ಚು ವೆಚ್ಚವಾಗುತ್ತದೆ. ಮೋದಿ ಸರ್ಕಾರದಲ್ಲಿ ಇಡೀ ದೇಶದ 130 ಕೋಟಿ ಜನರಿಗೆ ಉಚಿತವಾಗಿ ಲಸಿಕೆ ಕೊಡಲಾಗುತ್ತಿದೆ. ಇಲ್ಲಿಯವರೆಗೆ 100 ಕೋಟಿಗೂ ಹೆಚ್ಚು ಜನರಿಗೆ ಉಚಿತವಾಗಿ ಲಸಿಕೆ ಕೊಡಲಾಗಿದೆ. ಮೋದಿ ಅವರಿಂದಾಗಿ ನಾವು ನಿರಾಳವಾಗಿ ಇರಲು ಸಾಧ್ಯವಾಗಿದೆ. ಆದರೂ, ಮಾಸ್ಕ್ ಹಾಗೂ ಸಾಮಾಜಿಕ ಅಂತರವನ್ನು ಬಿಡಬಾರದು ಎಂದವರು ತಿಳಿಸಿದರು.

## ಅಕಾಲಿಕ ಮಳೆ: ಬೆಳೆ ಹಾನಿ ಜಂಟಿ ಸರ್ವೆಗೆ ಸೂಚನೆ

### ಕುಂಬಳೂರು : ಬೆಳೆ ಹಾನಿ ವೀಕ್ಷಿಸಿದ ಡಿಸಿ ಮಹಾಂತೇಶ್ ಬೀಳಗಿ ಹೇಳಿಕೆ



ಮಲೇಬೆನ್ನೂರು, ನ.18- ಅಕಾಲಿಕ ಮಳೆಯಿಂದಾಗಿ ಕಟಾವಿಗೆ ಬಂದಿದ್ದ ಸುಮಾರು 2 ಸಾವಿರ ಎಕರೆ ಭತ್ತದ ಬೆಳೆ ನೆಲಕಚ್ಚಿರುವ ಮಾಹಿತಿ ಇದ್ದು, ಬೆಳೆ ಹಾನಿ ಕುರಿತು ಶುಕ್ರವಾರ ಸಂಜೆಯೊಳಗೆ ವರದಿ ನೀಡುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ತಿಳಿಸಿದರು.

ಅವರು ಗುರುವಾರ ಬೆಳಿಗ್ಗೆ ಭಾಸ್ಕರ್‌ರಾವ್ ಕ್ಯಾಂಪ್, ಕುಂಬಳೂರು, ನಿಟ್ಟೂರು, ಆದಾಪುರ ಗ್ರಾಮಗಳಲ್ಲಿ ಮಳೆಯಿಂದಾಗಿ ನೆಲಕಚ್ಚಿರುವ ಭತ್ತದ ಬೆಳೆಯನ್ನು ವೀಕ್ಷಿಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದರು.

ಇಡೀ ಜಿಲ್ಲೆಯಲ್ಲಿ ವಾಡಿಕೆಗಿಂತ ಹೆಚ್ಚು ಮಳೆ ಆಗಿದ್ದು, ಜಗಳೂರು ತಾಲ್ಲೂಕಿನಲ್ಲಿ ಮೆಕ್ಕೆಜೋಳಕ್ಕೆ ಮತ್ತು ಹರಿಹರ ತಾಲ್ಲೂಕಿನಲ್ಲಿ (2ನೇ ಪುಟಕ್ಕೆ)

## ಮಳೆಯಿಂದಾಗಿ ಮತ್ತೆ ಭರ್ತಿಯಾದ ಭದ್ರಾ

### ಮುಂಗಾರು ನಂತರ ಡ್ಯಾಂ ತುಂಬಿರುವುದು ಇದೇ ಮೊದಲು



ಶಿವಮೊಗ್ಗ, ನ.18- ಭದ್ರಾ ಜಲಾಶಯವು ಇದೇ ಮೊದಲ ಬಾರಿಗೆ ಮುಂಗಾರು ಹಂಗಾಮಿನ ನಂತರವೂ ಗರಿಷ್ಟ ಮಟ್ಟದಲ್ಲಿ ನೀರು ಸಂಗ್ರಹ ಆಗುವ ಮೂಲಕ ಹೊಸ ದಾಖಲೆ ಸೃಷ್ಟಿಸಿದೆ.

ಪ್ರತಿ ವರ್ಷ ಮುಂಗಾರು ಹಂಗಾಮಿಗೆ ಭದ್ರಾ ಜಲಾಶಯದಿಂದ ಕಾಲುವೆ ಮೂಲಕ ಕುಡಿಯುವ ನೀರಿಗಾಗಿ 2.0582 ಟಿಎಂಸಿ, ನದಿ ಮೂಲಕ ಕುಡಿಯುವ ನೀರಿಗಾಗಿ 3.3874 ಟಿಎಂಸಿ, ನದಿ ಮೂಲಕ ಕೈಗಾರಿಕೆಗಳಿಗಾಗಿ 1.6028 ಟಿಎಂಸಿ, ಜೂನ್‌ನಿಂದ ಡಿಸೆಂಬರ್‌ವರೆಗೆ ಆವಿಯಾಗುವ ನೀರಿನ ಪ್ರಮಾಣ 1.50 ಟಿಎಂಸಿ, ಭದ್ರಾ ಮೇಲ್ದಂಡೆ ಕಾಲುವೆಗೆ 6.11 ಟಿಎಂಸಿ ಮತ್ತು ಭದ್ರಾ ಅಚ್ಚುಕಟ್ಟು ಪ್ರದೇಶಕ್ಕೆ 38 ಟಿಎಂಸಿ ನೀರು ಸೇರಿ ಒಟ್ಟು 49.13 ಟಿಎಂಸಿ ನೀರಿನ ಅವಶ್ಯಕತೆ ಇರುತ್ತದೆ. ಈ ಬಾರಿ ವಿಶೇಷ ಅಂದರೆ ಭದ್ರಾ ಜಲಾಶಯದಿಂದ ಮುಂಗಾರು ಹಂಗಾಮಿಗೆ ನೀರು ಹರಿಸುವ ಬಗ್ಗೆ ಚರ್ಚಿಸಲು ಭದ್ರಾ ಕಾಡಾ ಸಭೆ ಕರೆದಾಗ ಜಲಾಶಯದಲ್ಲಿ (ದಿನಾಂಕ 14.07.2021ಕ್ಕೆ) 157 ಅಡಿ ನೀರಿತ್ತು.

ನೀರು ಸಂಗ್ರಹ ಪ್ರಮಾಣ 40.484 ಟಿಎಂಸಿ ಮಾತ್ರ ಇತ್ತು. ಡೆಡ್ ಸ್ಟೋರೇಜ್ 8.50 ಟಿಎಂಸಿ ಹಾಗೂ (2ನೇ ಪುಟಕ್ಕೆ)

### ಸಿರಿಗೆರೆಯಲ್ಲಿ ಸಾಧು ಸದ್ಧರ್ಮ ವೀರಶೈವ ಸಂಘದ ಸಭೆ ಇಂದು



ಶ್ರೀಮತ್ ಸಾಧು ಸದ್ಧರ್ಮ ವೀರಶೈವ ಸಂಘದ ವತಿಯಿಂದ ಸಮಾಜದ ಸಭೆಯನ್ನು ಸಿರಿಗೆರೆಯ ಶ್ರೀ ಗುರುಶಾಂತೇಶ್ವರ ದಾಸೋಹ ಮಂಟಪದಲ್ಲಿ ಇಂದು ಬೆಳಿಗ್ಗೆ 11 ಗಂಟೆಗೆ ಕರೆಯಲಾಗಿದೆ ಎಂದು ಸಂಘದ ಅಧ್ಯಕ್ಷರೂ ಆಗಿರುವ ರಾಜ್ಯ ಸಭೆ ಮಾಜಿ ಸದಸ್ಯ ಕೆ.ಆರ್. ಜಯದೇವಪ್ಪ ತಿಳಿಸಿದ್ದಾರೆ.

ತರಳಬಾಳು ಜಗದ್ಗುರು ಶ್ರೀ ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ ಏರ್ಪಾಡಾಗಿರುವ ಈ ಸಭೆಯಲ್ಲಿ ಎಲ್ಲಾ ತಾಲ್ಲೂಕುಗಳ ಅಧ್ಯಕ್ಷರು, ಪದಾಧಿಕಾರಿಗಳು, ಸಮಾಜದ ಹಿರಿಯರು, ಯುವಕರು ಭಾಗವಹಿಸುವಂತೆ ಅವರು ಕೋರಿದ್ದಾರೆ.

ಮಾಧ್ಯಮಗಳಲ್ಲಿ ಕೆಲವರು ಶ್ರೀ ತರಳಬಾಳು ಮಠ ಮತ್ತು ಸಮಾಜದ (2ನೇ ಪುಟಕ್ಕೆ)


## ಮೊದಲ ದಿನವೇ ಪೇಟಿಎಂ ಷೇರು ಮೌಲ್ಯ ಶೇ.27ರಷ್ಟು ಕುಸಿತ

ನವದೆಹಲಿ, ನ. 18 - ಪೇಟಿಎಂ ಮಾತೃಸಂಸ್ಥೆಯಾದ ಒನ್97 ಕಮ್ಯುನಿಕೇಷನ್ಸ್ ಷೇರುಗಳು ಮಾರುಕಟ್ಟೆ ಪ್ರವೇಶಿಸಿದ ದಿನದಂದು ನೀರಸ ಸ್ವಾಗತ ಪಡೆದಿವೆ. ದಿನದ ವಹಿವಾಟಿನಲ್ಲಿ ಷೇರು ಮೌಲ್ಯ ಶೇ.27ರಷ್ಟು ಕುಸಿದಿದೆ.

ಷೇರಿನ ಆರಂಭಿಕ ಬೆಲೆ 2,150 ರೂ. ಆಗಿತ್ತು. ಸೇರ್ಪಡೆಯಾಗುವಾಗ 1,955 ರೂ.ಗೆ ಇಳಿಕೆಯಾಯಿತು. ಅಂತಿಮವಾಗಿ ಅದರ ಮೌಲ್ಯ ಶೇ.27.25ರಷ್ಟು ಕುಸಿದು 1,564 ರೂ.ಗಳಿಗೆ ಇಳಿಯಿತು. ಎನ್.ಎಸ್.ಇ.ನಲ್ಲಿ ಷೇರು ಮೌಲ್ಯ 1,950 ರೂ.ಗಳಿಗೆ ದಾಖಲಾಗಿ, ನಂತರ 1,562 ರೂ.ಗಳಿಗೆ ಇಳಿಕೆಯಾಗಿದೆ. ಪೇಟಿಎಂ ದುರ್ಬಲ ಆರಂಭ ಕಂಡ ಅತಿ ದೊಡ್ಡ ಐ.ಪಿ.ಒ.ಗಳಲ್ಲಿ ಒಂದಾಗಿದೆ. ನಮ್ಮ ನಿರೀಕ್ಷೆಯ ಮಟ್ಟದಲ್ಲಿ ಬೆಳವಣಿಗೆ ಇಲ್ಲ ಎಂದು ಸ್ವಸ್ತಿಕ್ ಇನ್ವೆಸ್ಟ್‌ಮಾರ್ಟ್ ಮುಖ್ಯ ಸಂಶೋಧಕ ಸಂತೋಷ್ ಮೀನ ಹೇಳಿದ್ದಾರೆ.

ಆಂಟ್ ಗ್ರೂಪ್ ಬೆಂಬಲಿತ ಪೇಟಿಎಂ ಐ.ಪಿ.ಒ.18,300 ಕೋಟಿ ರೂ.ಗಳದ್ದಾಗಿತ್ತು. ಕೊನೆಯ ದಿನ ಅದು 1.89 ಪಟ್ಟು ಹೆಚ್ಚು ಬುಕ್ಕಿಂಗ್ ಆಗಿತ್ತು. ಇದು ಕೋಲ್ ಇಂಡಿಯಾ ಕಂಪನಿಯ 15 ಸಾವಿರ ಕೋಟಿ ರೂ.ಗಳಿಗಿಂತ ಹೆಚ್ಚಾಗಿತ್ತು.


## ರಕ್ತನಾಳ ಶಸ್ತ್ರ ಚಿಕಿತ್ಸಾ ತಜ್ಞರು ದಾವಣಗೆರೆಯಲ್ಲಿ ಲಭ್ಯವಿರುತ್ತಾರೆ



**ಡಾ|| ರಾಜೇಂದ್ರ ಪ್ರಸಾದ್ ಬಿ.,**
ಎಂಬಿಬಿಎಸ್, ಎಂ.ಎಸ್, ಡಿಎನ್‌ಬಿ (ರಕ್ತನಾಳ ಶಸ್ತ್ರ ಚಿಕಿತ್ಸೆ), ಎಫ್‌ವಿಇಎಸ್(ಆಸ್ಟ್ರಿಯಾ)
ರಕ್ತನಾಳ ಶಸ್ತ್ರ ಚಿಕಿತ್ಸಾ ತಜ್ಞರು ಮತ್ತು ಮಧುಮೇಹ, ಕಾಲಿನ ತೊಂದರೆಗಳ ತಜ್ಞರು.
ಎಲ್ಲಾ ರೀತಿಯ ಕಾಲಿನ ರಕ್ತನಾಳಗಳ ತೊಂದರೆಗಳು, ವೆರಿಕೋಸ್ ವೇಯ್ನ್ಸ್ ಕಾಯಿಲೆ ಮತ್ತು ಡಯಾಲಿಸಿಸ್ ರೋಗಿಗಳು ಭೇಟಿ ಮಾಡಿ ಸಲಹೆ ಪಡೆಯಬಹುದು.

ಭೇಟಿ ಮಾಡುವ ಸ್ಥಳ :
**ಆರೈಕೆ ಆಸ್ಪತ್ರೆ**
ಹದಡಿ ರಸ್ತೆ, ಸ್ಟೇಡಿಯಂ ಎದುರು, ದಾವಣಗೆರೆ.

ಪ್ರತಿ ತಿಂಗಳ ಮೂರನೇ ಶನಿವಾರ ಸಂಜೆ 7 ರಿಂದ 8 ಮತ್ತು ಭಾನುವಾರ ಬೆಳಿಗ್ಗೆ 10 ರಿಂದ 1 ಗಂಟೆಯವರೆಗೆ.

ಫೋ.: 81922 33446, 84315 41487



## 9ನೇ ವರ್ಷದ ಪುಣ್ಯಸ್ಮರಣೆ



ಜನನ : 16-02-1945
ಮರಣ : 19-11-2012

**ದಿ|| ಹೊನ್ನೂರು ಈರಣ್ಣನವರು**

ನೀವು ನಮ್ಮನ್ನಗಲಿ ಇಂದಿಗೆ ಒಂಬತ್ತು ವರ್ಷಗಳಾದವು.
ಸದಾ ನಿಮ್ಮ ಸ್ಮರಣೆಯಲ್ಲಿರುವ ಹಾಗೂ ನೀವು ಹಾಕಿಕೊಟ್ಟ
ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿರುವ,

ಪತ್ನಿ : ಶ್ರೀಮತಿ ಸರೋಜಮ್ಮ ಹೊನ್ನೂರು ಈರಣ್ಣ ಮತ್ತು ಮಕ್ಕಳು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಬಂಧು-ಮಿತ್ರರು, ಹೊನ್ನೂರು.



## ರಾಜ್ ಶಿವಕುಮಾರ್ ನಿಧನ



ದಾವಣಗೆರೆ ಕುವೆಂಪು ಬಡಾವಣೆ, # 3365/3, ಚಾಮುಂಡೇಶ್ವರಿ ನಿಲಯ,
18ನೇ ಮೇನ್, 5ನೇ ಕ್ರಾಸ್ ವಾಸಿ **ರಾಜ್ ಶಿವಕುಮಾರ್**
ಅವರು, ದಿನಾಂಕ : 17.11.2021ರ ಬುಧವಾರ ರಾತ್ರಿ 11.50ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ ಸುಮಾರು 51 ವರ್ಷ ವಯಸ್ಸಾಗಿತ್ತು.
ಮೃತರ ಪಾರ್ಥಿವ ಶರೀರವನ್ನು ದಿನಾಂಕ 19.11.2021 ರ ಶುಕ್ರವಾರ ಬೆಳಿಗ್ಗೆ 8 ರಿಂದ ಮಧ್ಯಾಹ್ನ 2ರವರೆಗೆ ಅವರ ಸ್ವಗೃಹದಲ್ಲಿ ಇರಿಸಲಾಗುವುದು. ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ
ಮೃತರ ಅಂತ್ಯಕ್ರಿಯೆಯನ್ನು ದಿನಾಂಕ : 19.11.2021ರ ಶುಕ್ರವಾರ ಮಧ್ಯಾಹ್ನ 2.30ಕ್ಕೆ ಶಾಮನೂರು ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬ ವರ್ಗ. ಮೊಬೈಲ್ : 94801 42774

# ಬೆಳೆ ಹಾನಿ ಜಂಟಿ ಸರ್ವೆಗೆ ಸೂಚನೆ

**(1ನೇ ಪುಟದಿಂದ)** ಭತ್ತದ ಬೆಳೆಗೆ ಹಾನಿಯಾಗಿದೆ. ಹಾನಿ ಕುರಿತು ತಕ್ಷಣ ವರದಿ ನೀಡುವಂತೆ ಕೃಷಿ, ತೋಟಗಾರಿಕೆ ಮತ್ತು ಕಂದಾಯ ಇಲಾಖೆಗಳ ಜಂಟಿ ಸರ್ವೆಗೆ ಸೂಚನೆ ನೀಡಿದ್ದೇನೆ. ಬೆಳೆ ಹಾನಿಯಾಗಿರುವ ರೈತರ ಖಾತೆಗೆ ಪರಿಹಾರ ನೀಡಲಾಗುವುದು. ಲ್ಯಾವಣಿ ಮೇಲೆ ಹೊಲ ಮಾಡುತ್ತಿರುವ ರೈತರಿಗೆ ನೇರವಾಗಿ ಪರಿಹಾರ ನೀಡಲು ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಅವರು ರೈತರಿಗೆ ಭರವಸೆ ನೀಡಿದರು.

ಈ ವೇಳೆ ಸಾವಯವ ಕೃಷಿಕ ಎ.ಎನ್. ಆಂಜನೇಯ ಅವರು, ಶೇ. 40 ರೈತರು ಲ್ಯಾವಣಿ ಹೊಲ ಮಾಡುತ್ತಿದ್ದು, ಹೊಲಗಳಲ್ಲೇ ಹೆಚ್ಚು ಹಾನಿಯಾಗಿದೆ. ಹೊಲ ಮಾಡುವವರಿಗೆ ನೇರವಾಗಿ ಪರಿಹಾರ ನೀಡುವಂತೆ ಡಿಸಿ ಅವರಿಗೆ ಮನವಿ ಮಾಡಿದರು.

ಕುಂಬಳೂರಿನಲ್ಲಿ ರೈತ ಕೋಣನತಂಬಿಗಿ ಕರಿಯಪ್ಪ ಅವರು 10 ಎಕರೆ ಲ್ಯಾವಣಿ ಹೊಲ ಮಾಡಿದ್ದು, ಭತ್ತದ ಬೆಳೆ ಬಹಳ ಚನ್ನಾಗಿಯೇ ಇತ್ತು, ಆದರೀಗ ಪೂರ್ತಿ ಹೊಲ ನೆಲಕಚ್ಚಿದೆ ಎಂದು ಡಿಸಿ ಎದುರು ಕಣ್ಣೀರಿಟ್ಟರು.

ನಾಗೋಳ್ ಧನಂಜಯ 11 ಎಕರೆ, ಕೆ. ಆಂಜನೇಯ 10 ಎಕರೆ, ಲೋಕಾಪುರ ಆಂಜನೇಯ 10 ಎಕರೆ ಮತ್ತು ವಿನಾಯಕನಗರ ಕ್ಯಾಂಪಿನ ಹಲಗೇರಿ ಕರಿಬಸಪ್ಪ 7 ಎಕರೆ ಲ್ಯಾವಣಿ ಹೊಲ ಮಾಡಿದ್ದರು.

ಮಳೆಯಿಂದಾಗಿ ಬಹಳ ನಷ್ಟವಾಗಿದೆ ಸರ್ ಎಂದು ಡಿಸಿ ಅವರಿಗೆ ತಿಳಿಸಿದರು. ರೈತರನ್ನು ಸಮಾಧಾನಪಡಿಸಿದ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಅವರು, ಪ್ರಕೃತಿ ವಿಕೋಪಕ್ಕೆ ಯಾರೂ ಹೊಣೆ ಅಲ್ಲ. ನಿಮಗೆ ಪರಿಹಾರ ನೀಡಲು ಪ್ರಯತ್ನಿಸುತ್ತೇನೆಂದರು.

ಗ್ರೇಡ್-2 ತಹಶೀಲ್ದಾರ್ ಶಶಿಧರಯ್ಯ, ಡಿಸಿ ಆಪ್ತ ಸಹಾಯಕ ಬಿ.ಡಿ. ಮರುಳಸಿದ್ದಪ್ಪ, ಉಪತಹಶೀಲ್ದಾರ್ ಆರ್. ರವಿ, ಕಂದಾಯ ನಿರೀಕ್ಷಕ ಆನಂದ್, ಗ್ರಾಮ ಲೆಕ್ಕಾಧಿಕಾರಿಗಳಾದ ಶ್ರೀಧರ್, ಅಣ್ಣಪ್ಪ, ಗ್ರಾಮ ಸಹಾಯಕ ಮಾರುತಿ, ರೈತರಾದ ಕರಡಿ ಸೋಮಶೇಖರ್, ಕೋಟ್ಯಾಳ್ ಸಿದ್ದಪ್ಪ, ಸಾಲಿ ಹನುಮಂತಪ್ಪ, ರುದ್ರಣ್ಣರ ಹನುಮೇಶ್, ಕೆಂಚಪ್ಪರ ಷಣ್ಮುಖಪ್ಪ, ಕ್ಯಾಂಪಿನ ಕುಂಬಾರ್ ಬಸವರಾಜ್ ಈ ವೇಳೆ ಹಾಜರಿದ್ದರು.

# ಫಸಲ್ ಬಿಮಾ: ಮಾರ್ಗಸೂಚಿ ಪರಿಷ್ಕರಿಸಿ

**(1ನೇ ಪುಟದಿಂದ)** ತೆರೆಯಲು ಅಗತ್ಯ ಕ್ರಮಕೈಗೊಳ್ಳಬೇಕು ಎಂದು ಸಮಿತಿಯ ಅಧ್ಯಕ್ಷ ವಿಜಯಸಾಯಿ ರೆಡ್ಡಿ ಮತ್ತು ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯದ ಕಾರ್ಯದರ್ಶಿಗಳಲ್ಲಿ ಮನವಿ ಮಾಡಿದರು. ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯಡಿ ಪರಿಹಾರ ನೀಡುವಾಗ ಸರಾಸರಿ ಇಳುವರಿ ಪರಿಗಣಿಸುವುದರಿಂದ ನ್ಯಾಯಯುತ ಪರಿಹಾರ ಲಭ್ಯವಾಗುತ್ತಿಲ್ಲ. ಬೆಳೆ ಹಾನಿಯಾದ ವರ್ಷದಲ್ಲಿಯೇ ರೈತರಿಗೆ ಬೆಳೆ ಪರಿಹಾರ ಸಿಗದೇ ಇದ್ದರೆ ರೈತರು ವಿಮಾ ಕಂತು ತುಂಬಲು ಹಿಂದೇಟು ಹಾಕುತ್ತಾರೆ. ಈ ಹಿನ್ನೆಲೆಯಲ್ಲಿ ನನ್ನ ಲೋಕಸಭಾ ಕ್ಷೇತ್ರದಲ್ಲಿ ಗಣನೀಯ ಪ್ರಮಾಣದಲ್ಲಿ ರೈತರು ವಿಮೆ ಮಾಡಿಸಲು ಮುಂದೆ ಬರುತ್ತಿಲ್ಲ. ಫಸಲ್ ಬಿಮಾ ಯೋಜನೆಯ ಮಾರ್ಗಸೂಚಿಯನ್ನು ಪರಿಷ್ಕರಣೆ ಮಾಡುವ ಅವಶ್ಯಕತೆಯನ್ನು ಒತ್ತಿ ಹೇಳಿದರು.

2019 ರಂದು ದೆಹಲಿಯ ಕೆಂಪು ಕೋಟೆಯ ಮೇಲೆ ಮಾನ್ಯ ಪ್ರಧಾನಮಂತ್ರಿಗಳು ದೇಶದ ಪ್ರತಿಯೊಂದು ಜಿಲ್ಲೆಗಳು ರಫ್ತು ಕೇಂದ್ರಗಳಾಗಬೇಕು ಎಂದು ಘೋಷಣೆ ಮಾಡಿದ್ದರು. ಇದಕ್ಕೆ ಪೂರಕವಾಗಿ ಸುಮಾರು 730 ಜಿಲ್ಲೆಗಳಲ್ಲಿ 'ಒಂದು ಜಿಲ್ಲೆ ಒಂದು ಬೆಳೆ' ಯೋಜನೆಯಡಿ ಈಗಾಗಲೇ ಬೆಳೆಗಳನ್ನು ಗುರುತಿಸಿ ಬೆಳೆಗಳನ್ನು ಪ್ರೋತ್ಸಾಹಿಸುವ ಕೆಲಸ ನಡೆಯುತ್ತಿದೆ ಎಂದು ಕಾರ್ಯದರ್ಶಿಗಳು ಸಭೆಗೆ ಮಾಹಿತಿ ನೀಡಿದರು.

ದೇಶದಲ್ಲಿ ಪ್ರಧಾನಮಂತ್ರಿ ಕಿರು ಆಹಾರ ಘಟಕಗಳ ಪುನರುಜ್ಜೀವನಕ್ಕಾಗಿ ಯೋಜನೆ ಜಾರಿಗೆ ತರಲಾಗಿದ್ದು, ಆಹಾರ ಸಂಸ್ಕರಣ ಘಟಕ ಸ್ಥಾಪನೆ ಮಾಡುವ ಉದ್ದೇಶದಿಂದ ನನ್ನ ಕ್ಷೇತ್ರದಲ್ಲಿ ಅರ್ಜಿ ಸಲ್ಲಿಸಿದ 49 ಅರ್ಜಿಗಳಲ್ಲಿ 18 ಅರ್ಜಿಗಳು ತಿರಸ್ಕೃತಗೊಂಡಿವೆ. ಇದಕ್ಕೆ ಕಾರಣ ಬ್ಯಾಂಕುಗಳಲ್ಲಿ ಸಿಬಿಲ್ ಸ್ಕೋರ್ ಕಡಿಮೆ ಇರುವುದಾಗಿದೆ. ಈ ರೀತಿ ಆದರೆ ಯಾರೂ ಕೂಡ ಆಹಾರ ಸಂಸ್ಕರಣ ಘಟಕಗಳ ಸ್ಥಾಪನೆಗೆ ಮುಂದೆ ಬರುವುದಿಲ್ಲ. ಯೋಜನೆ ಜಾರಿಗೊಳಿಸುವಲ್ಲಿ ಏನಾದರೂ ಅಡೆತಡೆಗಳು ಬಂದಲ್ಲಿ ಅದರ ಪರಿಹಾರಕ್ಕೆ ಎಲ್ಲರೂ ಪ್ರಾಮಾಣಿಕ ಪ್ರಯತ್ನ ಮಾಡಬೇಕು ಎಂಬುದನ್ನು ಸಭೆಯ ಗಮನಕ್ಕೆ ತಂದರು.

# ಹೊನ್ನಾಳಿ : ತುಂಗಾ ಪತ್ತಿನ ಅಧ್ಯಕ್ಷರಾಗಿ ಜಯಮ್ಮ ಬಸವರಾಜ್ ಆಯ್ಕೆ



ಹೊನ್ನಾಳಿ, ನ.18- ಪಟ್ಟಣದ ತುಂಗಾ ಪತ್ತಿನ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಜಯಮ್ಮ ಬಸವರಾಜ್, ಉಪಾಧ್ಯಕ್ಷರಾಗಿ ಅರಬಗಟ್ಟೆ ನಾಗರಾಜ್ ಇವರು ಇಂದು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ತುಂಗಾ ಪತ್ತಿನ ಮಾಜಿ ಅಧ್ಯಕ್ಷರು ಹಾಗೂ ಸಂಘದ ಸದಸ್ಯರು ಉಪಸ್ಥಿತರಿದ್ದರು.

# ಬೆಳೆ ಹಾನಿ ಪರಿಹಾರಕ್ಕೆ ಮನವಿ



ಮಲೇಬೆನ್ನೂರು, ನಂ. 18- ಭಾರೀ ಮಳೆಯಿಂದಾಗಿ ಹರಿಹರ ತಾಲ್ಲೂಕಿನಲ್ಲಿ ಭತ್ತದ ಬೆಳೆ ಹಾನಿಯಾಗಿ ರೈತರಿಗೆ ತೊಂದರೆ ಆಗಿರುವ ಬಗ್ಗೆ ಮುಖ್ಯಮಂತ್ರಿಗಳು ಮತ್ತು ಕೃಷಿ ಹಾಗೂ ಕಂದಾಯ ಸಚಿವರುಗಳಿಗೆ ಮತ್ತು ಜಿಲ್ಲಾಧಿಕಾರಿಗಳ ವರದಿ ಸಮೇತ ತಿಳಿಸಿ, ಹೆಚ್ಚಿನ ಪರಿಹಾರ ನೀಡುವಂತೆ ಮನವಿ ಮಾಡುವುದಾಗಿ ಮಾಜಿ ಶಾಸಕ ಬಿ.ಪಿ. ಹರೀಶ್ ತಿಳಿಸಿದ್ದಾರೆ.

ನಿಟ್ಟೂರು, ಆದಾಪುರ, ಕುಂಬಳೂರು ಮತ್ತು ಜಿಗಳಿ ಗ್ರಾಮಕ್ಕೆ ಭೇಟಿ ನೀಡಿ ಭತ್ತದ ಬೆಳೆ ಹಾನಿ ವೀಕ್ಷಿಸಿದ ನಂತರ ಸರ್ಕಾರದಿಂದ ಪರಿಹಾರ ಕೊಡಿಸುವುದಾಗಿ ರೈತರಿಗೆ ಭರವಸೆ ನೀಡಿದರು.

ಅಕಾಲಿಕ ಮಳೆಗೆ ಯಾರು ಹೊಣೆಗಾರರು. ಆದರೆ ಪದೇ ಪದೇ ರೈತರಿಗೆ ತೊಂದರೆ ಆಗುತ್ತಿರುವುದು ಬೇಸರ ತಂದಿದೆ ಎಂದು ಹೇಳಿದರು.

ಹರಿಹರ ತಾ.ಗ್ರಾಮಾಂತರ ಬಿಜೆಪಿ ಅಧ್ಯಕ್ಷ ಹಿಂಡಸಘಟ್ಟಿ ಲಿಂಗರಾಜ್, ಪ್ರಧಾನ ಕಾರ್ಯದರ್ಶಿ ಆದಾಪುರ ವೀರೇಶ್, ಮುಖಂಡ ನಿಟ್ಟೂರು ಇ.ಎಂ ಮರುಳಸಿದ್ದೇಶ್ ಹಾಗೂ ರೈತರು ಇದ್ದರು.

# ಬಿಟ್ ಕಾಯಿನ್‌ನಲ್ಲಿ ಮುಳುಗಿದ ಸರ್ಕಾರ

**(1ನೇ ಪುಟದಿಂದ)** ಸಭೆ ನಡೆಸುವುದಾಗಿ ತಿಳಿಸಿದ್ದಾರೆ.

ಕೊರೊನಾ ಸಂದರ್ಭದಲ್ಲೂ ರಾಜ್ಯದಲ್ಲಿ ಸತತ ಎರಡು ವರ್ಷಗಳ ಕಾಲ ಬಂಪರ್ ಆಹಾರ ಉತ್ಪಾದನೆಯಾಗಿತ್ತು. ಈ ವರ್ಷ ದಾಖಲೆಯ ಆಹಾರ ಉತ್ಪಾದನೆ ಆಗುತ್ತದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದರು. ಆದರೆ, ಕಳೆದ 15 ದಿನಗಳಿಂದ ಸುರಿಯುತ್ತಿರುವ ಮಳೆಯಿಂದಾಗಿ ಹಳೆ ಮೈಸೂರು ಭಾಗದಲ್ಲಿ ಬೆಳೆದು ನಿಂತ ರಾಗಿ ರೈತನ ಕೈಗೆ ಸಿಗದೆ ಹೊಲದಲ್ಲೇ ಕೊಳೆಯುವ ಪರಿಸ್ಥಿತಿ ನಿರ್ಮಾಣವಾಗಿದೆ.

ಇನ್ನು ಉತ್ತರ ಕರ್ನಾಟಕ ಭಾಗದಲ್ಲಿ ಜೋಳ, ಎಣ್ಣೆಕಾಳು, ಈರುಳ್ಳಿ, ಮೆಣಸು ಸೇರಿದಂತೆ ತೋಟಗಾರಿಕೆ ಬೆಳೆಗಳು ಅತಿಯಾದ ಮಳೆಯಿಂದ ಹಾನಿಗೊಳಗಾಗಿವೆ.

ಇನ್ನು ಸಾವಿರಾರು ಕುಟುಂಬಗಳು ಮಳೆಯಿಂದಾಗಿ ಮನೆ ಕಳೆದುಕೊಂಡಿವೆ, ಗ್ರಾಮೀಣ ರಸ್ತೆಗಳು ಗುಂಡಿಗಳಾಗಿ ಪರಿವರ್ತಿತಗೊಂಡಿವೆ.

ಈ ಮಧ್ಯೆ ಸಾಂಕ್ರಾಮಿಕ ರೋಗಗಳು ಜನರನ್ನು ಬಾಧಿಸುತ್ತಿವೆ, ಇಷ್ಟಾದರೂ ಸರ್ಕಾರ ಮಾತ್ರ ಬಿಟ್ ಕಾಯಿನ್ ಸಮಸ್ಯೆಯಲ್ಲೇ ಬಗ್ಗೆಯೇ ದಿನ ಕಳೆಯುತ್ತಿದೆ.

# ಹೆಚ್ಚು ಬೆಳೆ ಹಾನಿ : ಪರಿಹಾರಕ್ಕೆ ಶಾಸಕ ರಾಮಪ್ಪ ಒತ್ತಾಯ

ಮಲೇಬೆನ್ನೂರು, ನ.18- ಮಳೆಯಿಂದಾಗಿ ಬೆಳೆ ಹಾನಿ ಆಗಿರುವ ಬಗ್ಗೆ ಕೂಡಲೇ ವರದಿ ತರಿಸಿಕೊಂಡು ರೈತರಿಗೆ ಪರಿಹಾರ ನೀಡುವಂತೆ ಶಾಸಕ ಎಸ್. ರಾಮಪ್ಪ ಜಿಲ್ಲಾಧಿಕಾರಿಗಳಿಗೆ ಮನವಿ ಮಾಡಿದ್ದಾರೆ.

ಗುರುವಾರ ಬನ್ನಿಕೋಡು, ಕೆ. ಬೇವಿನಹಳ್ಳಿ, ಕಡ್ಲೆಗೊಂದಿ, ದೇವರಬೆಳಕೆರೆ, ಕುಂಬಳೂರು, ಜಿಗಳಿ, ಹಾಲಿವಾಣ, ಹರಳಹಳ್ಳಿ ಮತ್ತು ಲಕ್ಕಶೆಟ್ಟಿಹಳ್ಳಿಗೆ ಭೇಟಿ ನೀಡಿ, ಭತ್ತದ ಬೆಳೆ ನೆಲಕಚ್ಚಿರುವುದನ್ನು ವೀಕ್ಷಿಸಿದ ನಂತರ 'ಜನತಾವಾಣಿ'ಯೊಂದಿಗೆ ಅವರು ಮಾತನಾಡಿದರು.

ಕಟಾವಿಗೆ ಬಂದಿರುವ ಭತ್ತದ ಗದ್ದೆಗಳಲ್ಲಿ ನಿಂತಿರುವ ನೀರಿನಲ್ಲಿ ಭತ್ತದ ಗೊನೆ ಮುಳಗಿರುವುದರಿಂದ ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲ ಎಂಬಂತಾಗಿದೆ.ಇದರಿಂದಾಗಿ ರೈತರಿಗೆ ಬಹಳ ನಷ್ಟವಾಗಿದ್ದು, ಸರ್ಕಾರ ಹೆಚ್ಚಿನ ಪ್ರಮಾಣದಲ್ಲಿ ಪರಿಹಾರ ನೀಡಬೇಕೆಂದು ಶಾಸಕ ರಾಮಪ್ಪ ಒತ್ತಾಯಿಸಿದರು.

ಎಲ್ಲಾ ಹಳ್ಳಿಗಳಲ್ಲಿ ರೈತರು ತಮ್ಮ ಸಂಕಷ್ಟ ಹೇಳಿಕೊಂಡಾಗ ಶಾಸಕರು ಸಮಾಧಾನದಿಂದ ಕೇಳಿ ಪರಿಹಾರ ಕೊಡಿಸುವ ಭರವಸೆ ನೀಡಿದರು.





ಜಿಗಳಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಬಿ. ಅಬಿದ್ ಅಲಿ, ಸಮಾಜ ಸೇವಕ ನಂದಿಗಾವಿ ಶ್ರೀನಿವಾಸ್, ಗ್ರಾಮದ ಮುಖಂಡರಾದ ಜಿ. ಆನಂದಪ್ಪ, ಬಿ.ಎಂ. ದೇವೇಂದ್ರಪ್ಪ, ಬಿಳಸನೂರು ಚಂದ್ರಪ್ಪ, ಡಿ.ಎಂ. ಹರೀಶ್, ಬಿ. ಸೋಮಶೇಖರಚಾರಿ, ಶಿವಾನಂದಪ್ಪ, ಮಲೇಬೆನ್ನೂರಿನ ಕೆ.ಪಿ. ಗಂಗಾಧರ್, ದೇವರಬೆಳಕೆರೆ ಮಹೇಶ್ವರಪ್ಪ ಹಾಜರಿದ್ದರು.

# ಮತ್ತೆ ಭರ್ತಿಯಾದ ಭದ್ರಾ ಡ್ಯಾಂ

**(1ನೇ ಪುಟದಿಂದ)** ಎಂ.ಡಿ.ಡಿ.ಎಲ್ 13.832 ಟಿಎಂಸಿ ಹೊರೆತುಪಡಿಸಿ, ಬಳಕೆಗೆ ಬರುವ ನೀರಿನ ಪ್ರಮಾಣ 26.652 ಟಿಎಂಸಿ ಆಗಿತ್ತು.

ಮುಂಗಾರು ಹಂಗಾಮಿಗೆ ಅವಶ್ಯವಿರುವ 49.13 ಟಿಎಂಸಿ ನೀರಿನಲ್ಲಿ 22.478 ಟಿಎಂಸಿ ನೀರಿನ ಕೊರತೆ ಇತ್ತು.

ನೀರಿನ ಕೊರತೆ ನಡುವೆಯೂ ಮುಂಗಾರು ಹಂಗಾಮಿಗೆ ಸತತವಾಗಿ 120 ದಿನ ನೀರು ಹರಿಸಲು ಭದ್ರಾ ಕಾಡಾ ಅಧ್ಯಕ್ಷರಾದ ಶ್ರೀಮತಿ ಪವಿತ್ರ ರಾಮಯ್ಯ ನೇತೃತ್ವದ ಕಾಡಾ ಸಭೆ ನಿರ್ಧಾರ ಕೈಗೊಂಡಿತ್ತು. ಮಳೆದೇವನ ಕೃಪೆಯಿಂದ ಎಲ್ಲರ ನಿರೀಕ್ಷೆಯಂತೆ ಜುಲೈ 31ಕ್ಕೆ ಜಲಾಶಯ ಭರ್ತಿಯಾಗುವ ಹಂತ ತಲುಪಿತ್ತು. ಅಲ್ಲಿಂದ ಇಲ್ಲಿಯವರೆಗೂ ಜಲಾಶಯದಿಂದ ಬಲ ಮತ್ತು ಎಡದಂಡೆ ಕಾಲುವೆಗಳಿಗೆ ಸತತವಾಗಿ ನೀರು ಹರಿದಿದೆ. ಭದ್ರಾ ಮೇಲ್ದಂಡೆ ಕಾಲುವೆಗೂ ನೀರು ಹರಿಸಲಾಗಿದೆ.

ಆದರೂ ನಿರಂತರ ಒಳ ಹರಿವಿನಿಂದಾಗಿ ಜಲಾಶಯದಲ್ಲಿ ಗುರುವಾರದ ವರದಿ ಪ್ರಕಾರ ನೀರಿನ ಮಟ್ಟ 186 ಅಡಿಗಳಾಗಿರುತ್ತದೆ. ಗುರುವಾರ ಜಲಾಶಯಕ್ಕೆ 7609 ಕ್ಯೂಸೆಕ್ಸ್ ಒಳ ಹರಿವು ಇದ್ದು, ನದಿಗೆ 5 ಸಾವಿರ ಕ್ಯೂಸೆಕ್ಸ್ ನೀರನ್ನು ಬೀಡಲಾಗಿದೆ. ಎಡ ಮತ್ತು ಬಲ ದಂಡೆ ನಾಲೆಗಳಿಗೆ ನೀರನ್ನು ಬಂದ್ ಮಾಡಲಾಗಿದೆ.

ಕಳೆದ ವರ್ಷ ಈ ದಿನ ಜಲಾಶಯದಲ್ಲಿ 181 ಅಡಿ ನೀರಿತ್ತು. ಭದ್ರಾ ಅಚ್ಚುಕಟ್ಟಿನ ಬೇಸಿಗೆ ಬೆಳೆಗೆ ನೀರಿನ ಯಾವುದೇ ತೊಂದರೆ ಇಲ್ಲ. ಆದರೆ, ಈಗ ಅಕಾಲಿಕವಾಗಿ ಸುರಿದ ಮಳೆಯಿಂದಾಗಿ ಭತ್ತದ ಉತ್ತಮ ಬೆಳೆ ನಿರೀಕ್ಷೆ ಮಾಡಿದ್ದ ಅಚ್ಚುಕಟ್ಟಿನ ರೈತರಿಗೆ ತೀವ್ರ ತೊಂದರೆ ಆಗಿದ್ದು, ರೈತ ಸಂಕಷ್ಟಕ್ಕೆ ಸಿಲುಕಿದ್ದಾನೆ. ಹವಾಮಾನ ಇಲಾಖೆ ಪ್ರಕಾರ ಇನ್ನೂ 2 ದಿನ ಮಳೆ ಬರುವ ಸಾಧ್ಯತೆ ಇದೆ ಎಂಬ ವರದಿ ರೈತರ ನಿದ್ದೆಗೆಡಿಸಿದೆ.

# ಕಸಾಪ ಜಾತಿ ಆಧಾರಿತವಾಗಬಾರದು

## ಹರಪನಹಳ್ಳಿಯಲ್ಲಿ ಬಳ್ಳಾರಿ ಜಿಲ್ಲೆಯ ಕಸಾಪ ಅಭ್ಯರ್ಥಿ ಕೆ. ಜಗದೀಶ್ ಬಳ್ಳಾರಿ



ಹರಪನಹಳ್ಳಿ, ನ.18- ಕನ್ನಡ ಸಾಹಿತ್ಯ ಪರಿಷತ್ ಜಾತಿ ಆಧಾರಿತ ವಾಗಬಾರದು ಎಂದು ಬಳ್ಳಾರಿ ಜಿಲ್ಲೆಯ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಚುನಾವಣೆಗೆ ಸ್ಪರ್ಧಿಸಿರುವ ಕೆ. ಜಗದೀಶ್ ಬಳ್ಳಾರಿ ಹೇಳಿದರು.

ಪಟ್ಟಣದ ನಂದಿಬೇವೂರು ಗ್ರಾಮ ಪಂಚಾಯ್ತಿ ಉಪಾಧ್ಯಕ್ಷರಾದ ಲಕ್ಷ್ಮೀ ಚಂದ್ರಶೇಖರ್ ಅವರ ನಿವಾಸದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು.

ಸರ್ಕಾರಿ ಉದ್ಯೋಗದಲ್ಲಿರುವವರು ಸಾಹಿತ್ಯ ಪರಿಷತ್‌ನಲ್ಲಿ ಸೇವೆ ಮಾಡುವುದು ವಿರಳ. ನಾನು ನಿವೃತ್ತ ಬ್ಯಾಂಕ್ ಅಧಿಕಾರಿಯಾಗಿ ಸದಾ ಕನ್ನಡ ಸೇವೆಗೆ ಸಿದ್ದನಿದ್ದೇನೆ. ರಂಗಭೂಮಿಯಲ್ಲಿ ಕಳೆದ 43 ವರ್ಷಗಳ ಕಾಲ ಸುದೀರ್ಘ ಸೇವೆ ಸಲ್ಲಿಸಿ ಇದುವರೆಗೆ 785 ನಾಟಕಗಳನ್ನು ಪ್ರದರ್ಶನ ಮಾಡಿದ ಅನುಭವವಿದೆ ಎಂದರು.

ನಗರದ ಹಂಪಿ ಉತ್ಸವವನ್ನು ಪ್ರತಿವರ್ಷ ನಡೆಸಲು ಸರ್ಕಾರದ ಮಟ್ಟದಲ್ಲಿ ಪ್ರಯತ್ನಿಸುತ್ತೇನೆ. ಬಳ್ಳಾರಿ ಮತ್ತು ವಿಜಯ ನಗರ ಜಿಲ್ಲೆಯಲ್ಲಿ ಲಕ್ಷ ಕನ್ನಡ ಸಾಹಿತ್ಯ ಪರಿಷತ್ ಸದಸ್ಯತ್ವ ಅಭಿಯಾನ, ಕ್ರಿಯಾಶೀಲ ಗ್ರಾಮಗಳಲ್ಲಿ ಬಯಲು ರಂಗಮಂದಿರ ನಿರ್ಮಾಣ ಸೇರಿದಂತೆ, ತಾವು ಅಧ್ಯಕ್ಷರಾದ ನಂತರ ಮಾಡಬೇಕೆಂದಿರುವ ಕೆಲಸಗಳ ಮಾಹಿತಿ ನೀಡಿದರು.

ಈ ವೇಳೆ ಗೋವರ್ಧನ ರೆಡ್ಡಿ, ಕಣಿವಿಹಳ್ಳಿ ಚಂದ್ರಶೇಖರ್, ವಿ.ಬಿ. ಮಲ್ಲಪ್ಪ ಇನ್ನಿತರರಿದ್ದರು.

# ಜಗಳೂರು : ಶ್ಯಾನುಭೋಗ ಕೆ. ವೆಂಕಟರಾವ್ ಟ್ರಸ್ಟ್‌ನಿಂದ ವಿದ್ಯಾರ್ಥಿಗಳಿಗೆ ಬ್ಯಾಗ್ ವಿತರಣೆ



ಜಗಳೂರು, ನ.18- ತಾಲ್ಲೂಕಿನ ಗುತ್ತಿದುರ್ಗ ಗ್ರಾಮದ ಶ್ಯಾನುಭೋಗ್ ಕೆ. ವೆಂಕಟರಾವ್ ಸೇವಾ ಟ್ರಸ್ಟ್ ಪ್ರತಿಷ್ಠಾನದ ವತಿಯಿಂದ ತಾಲ್ಲೂಕಿನ ಹೊಸೂರು (ಚಿಕ್ಕರಕೆರೆ) ಗ್ರಾಮದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ಮಕ್ಕಳಿಗೆ ಉಚಿತ ಬ್ಯಾಗ್ ಮತ್ತು ಲೇಖನ ಸಾಮಗ್ರಿಗಳನ್ನು ವಿತರಿಸಲಾಯಿತು.

ನ್ಯಾಯಾಂಗ ಇಲಾಖೆಯ ನಿವೃತ್ತ ಶಿರಸ್ತೇದಾರ್ ಹಾಗೂ ಪ್ರತಿಷ್ಠಾನದ ಕಾರ್ಯದರ್ಶಿ ಜಿ.ಕೆ. ನಾಗರಾಜ್ ರಾವ್, ಅಧ್ಯಕ್ಷ ಜಿ.ವಿ. ಕೃಷ್ಣಮೂರ್ತಿ ರಾವ್ ಮತ್ತು ಸದಸ್ಯರಾದ ಜಿ.ಕೆ. ಸ್ವರೂಪ್ ವಿತರಿಸಿದರು.

ಶಾಲೆಯ ಬುದ್ಧಿಮಾಂದ್ಯ ವಿದ್ಯಾರ್ಥಿನಿ ಕೆ. ಸ್ಪಂದನಾಗೆ ದಿ. ರತ್ನಮ್ಮ ವೆಂಕಟರಾವ್ ಹೆಸರಿನಲ್ಲಿ ಧನ ಸಹಾಯ ನೀಡಲಾಯಿತು. ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷ ಟಿ. ನಾಗರಾಜ್ ಅಧ್ಯಕ್ಷತೆ ವಹಿಸಿದ್ದರು. ಸದಸ್ಯರಾದ ಅರುಣ್ ಕುಮಾರ್, ಸ್ವಾಮಿ, ಮಂಜುನಾಥ್, ಎಂ.ಬಿ. ಚನ್ನಬಸಪ್ಪ ಉಪಸ್ಥಿತರಿದ್ದರು.

ಶಾಲಿನಿ ಮತ್ತು ಪಿ. ಮೇಘ ಪ್ರಾರ್ಥಿಸಿದರು. ಎಂ. ತಿಮ್ಮೇಶ್ ಸ್ವಾಗತಿಸಿದರು. ಮುಖ್ಯ ಶಿಕ್ಷಕ ಎಂ. ರಾಜು ಪ್ರಾಸ್ತಾವಿಕ ನುಡಿಗಳನ್ನಾಡಿದರು. ಸಹ ಶಿಕ್ಷಕ ಎಂ. ತಿಮ್ಮೇಶ್ ವಂದಿಸಿದರು.

# ನಗರದಲ್ಲಿ ಇಂದು ಜಿಲ್ಲಾ ವಿಜ್ಞಾನ ಶಿಕ್ಷಕರ ಕಾರ್ಯಾಗಾರ

ಕರ್ನಾಟಕ ವಿಜ್ಞಾನ ಮತ್ತು ತಂತ್ರ ವಿದ್ಯಾ ಮಂಡಳಿ, ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್, ದಾವಣಗೆರೆ ವಿಜ್ಞಾನ ಕೇಂದ್ರ, ಬಿ.ಇ.ಎ. ಶಿಕ್ಷಣ ಮಹಾವಿದ್ಯಾಲಯದ ಐಕ್ಯೂಎಸಿ ವಿಭಾಗ ಇವರುಗಳ ಸಂಯಕ್ತಾಶ್ರಯದಲ್ಲಿ ಜಿಲ್ಲಾ ಮಟ್ಟದ ಪ್ರೌಢಶಾಲಾ ವಿಜ್ಞಾನ ಶಿಕ್ಷಕರ ಕಾರ್ಯಾಗಾರವನ್ನು ಬಿ.ಇ.ಎ. ಶಿಕ್ಷಣ ಮಹಾವಿದ್ಯಾಲಯದಲ್ಲಿ ಇಂದು ಮತ್ತು ನಾಳೆ ನಡೆಯಲಿದೆ. ಇಂದು ಬೆಳಿಗ್ಗೆ 10.30 ಕ್ಕೆ ಕಾರ್ಯಾಗಾರದ ಉದ್ಘಾಟನಾ ಸಮಾರಂಭ ನಡೆಯಲಿದ್ದು, ಜಿ.ಆರ್. ತಿಪ್ಪೇಶಪ್ಪ ಉದ್ಘಾಟನೆ ನೆರವೇರಿಸುವರು. ಮುಖ್ಯ ಅತಿಥಿಗಳಾಗಿ ಪ್ರೊ. ವೈ. ವೃಷಭೇಂದ್ರಪ್ಪ, ಡಾ. ಹೆಚ್.ವಿ. ವಾಮದೇವಪ್ಪ, ಅಂಗಡಿ ಸಂಗಪ್ಪ, ಶ್ರೀಮತಿ ಆರ್.ಬಿ. ವಸಂತಕುಮಾರಿ ಆಗಮಿಸುವರು. ಅಧ್ಯಕ್ಷತೆಯನ್ನು ಡಾ. ಎ.ಜೆ. ನೀತಾ ವಹಿಸುವರು.

# ಐಸಿಯುನಲ್ಲಿರುವ ಕಾಂಗ್ರೆಸ್

**(1ನೇ ಪುಟದಿಂದ)** ಮತಾಂತರ ತಡೆ, ಗೋಹತ್ಯೆ ನಿಷೇಧ ಕಾಯ್ದೆಗೆ ತಿದ್ದುಪಡಿಯಂತಹ ಮಸೂದೆಗಳನ್ನು ಜಾರಿಗೆ ತರಬೇಕಾದರೆ, ಪರಿಷತ್‌ನಲ್ಲಿ ಬಿಜೆಪಿ ಬಹುಮತ ಬೇಕಿದೆ. ಈ ಚುನಾವಣೆಯಲ್ಲಿ ಹೆಚ್ಚಿನ ಗೆಲುವು ಸಾಧಿಸುವ ಮೂಲಕ ಪರಿಷತ್ತಿನಲ್ಲಿ ಬಹುಮತ ಗಳಿಸಬೇಕಿದೆ ಎಂದವರು ಹೇಳಿದರು.

ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್ ಮಾತನಾಡಿ, ಜಿಲ್ಲಾಸ್ಪತ್ರೆಗೆ ಎಂ.ಆರ್.ಐ. ಉಪಕರಣ ಶೀಘ್ರದಲ್ಲೇ ಬರಲಿದೆ. ಹದಿನೈದು ದಿನಗಳಲ್ಲಿ ಡಯಾಲಿಸಿಸ್‌ಗೆ ಅಗತ್ಯವಾಗಿರುವ ಔಷಧಿಗಳ ಕೊರತೆ ನೀಗಿಸಲಾಗುವುದು. ಮಳೆಯಿಂದ ತೋಟ - ಕೃಷಿ ಬೆಳೆಗೆ ಆಗಿರುವ ಹಾನಿಯ ಸಮಗ್ರ ವರದಿ ಪಡೆದು ಪರಿಹಾರ ಕಲ್ಪಿಸಲಾಗುವುದು. ಮೆಕ್ಕೆಜೋಳ - ಭತ್ತದ ಖರೀದಿ ಕೇಂದ್ರ ತೆರೆಯಲಾಗುವುದು ಎಂದರು.

ಸಂಸದ ಜಿ.ಎಂ. ಸಿದ್ದೇಶ್ವರ ಮಾತನಾಡಿ, ಕಳೆದ ಬಾರಿ ಬಿಜೆಪಿ ಅಭ್ಯರ್ಥಿ ಪರಿಷತ್ ಚುನಾವಣೆಯಲ್ಲಿ ಅತಿ ಕಡಿಮೆ ಮತಗಳ ಅಂತರದಿಂದ ಸೋತಿದ್ದರು. ಈ ಬಾರಿ ಪರಿಷತ್ ಚುನಾವಣೆಯಲ್ಲಿ ಗೆಲ್ಲಲೇಬೇಕಿದೆ. ಈ ಚುನಾವಣೆ ಸ್ಥಳೀಯ ಸಂಸ್ಥೆಗಳ ಪ್ರತಿನಿಧಿಗಳ ಸಮಸ್ಯೆಗಳನ್ನು ಪರಿಷತ್‌ನಲ್ಲಿ ಪ್ರಸ್ತಾಪಿಸಲು ನಡೆಸಲಾಗುತ್ತಿರುವ ಚುನಾವಣೆ ಎಂದರು.

ಬಿಜೆಪಿ ಉಪಾಧ್ಯಕ್ಷ ಬಿ.ವೈ. ವಿಜಯೇಂದ್ರ ಮಾತನಾಡಿ, ಈ ಬಾರಿ ಪರಿಷತ್ ಚುನಾವಣೆಯಲ್ಲಿ ಬಿಜೆಪಿಗೆ ಅಭೂತಪೂರ್ವ ಬೆಂಬಲ ಸಿಗುತ್ತಿದೆ. ಬಿಜೆಪಿಯ ಕಾರ್ಯಕ್ರಮಗಳನ್ನು ಜಾರಿಗೆ ತರಲು ಹಾಗೂ ಗ್ರಾಮೀಣಾಭಿವೃದ್ಧಿಗಾಗಿ ಬಿಜೆಪಿ ಅಭ್ಯರ್ಥಿಯನ್ನು ಗೆಲ್ಲಿಸಬೇಕಿದೆ ಎಂದರು.

ವೇದಿಕೆಯ ಮೇಲೆ ಅಬಕಾರಿ ಸಚಿವ ಗೋಪಾಲಯ್ಯ, ಶಾಸಕರಾದ ಎಸ್.ಎ. ರವೀಂದ್ರನಾಥ್, ಪ್ರೊ. ಲಿಂಗಣ್ಣ, ಮೇಯರ್ ಎಸ್.ಟಿ. ವೀರೇಶ್, ಬಯಲು ಸೀಮೆ ನಿಗಮದ ಅಧ್ಯಕ್ಷ ಅಣಬೇರು ಜೀವನಮೂರ್ತಿ, ರಾಜ್ಯ ಬಿಜೆಪಿ ಪ್ರಧಾನ ಕಾರ್ಯದರ್ಶಿ ಮಹೇಶ್ ತೆಂಗಿನಕಾಯಿ, ದೂಡಾ ಅಧ್ಯಕ್ಷ ದೇವರಮನಿ ಶಿವಕುಮಾರ್, ಪರಿಷತ್ ಮಾಜಿ ಮುಖ್ಯ ಸಚೇತಕ ಡಾ|| ಎ.ಹೆಚ್. ಶಿವಯೋಗಿಸ್ವಾಮಿ, ಮುಖಂಡರಾದ ಸುಧಾ ಜಯರುದ್ರೇಶ್, ಬಸವರಾಜನಾಯ್ಕ, ಬಿ.ಪಿ. ಹರೀಶ್, ಯಶವಂತರಾವ್ ಜಾಧವ್, ಶ್ರೀನಿವಾಸ ದಾಸಕರಿಯಪ್ಪ ಮತ್ತಿತರರು ಉಪಸ್ಥಿತರಿದ್ದರು.

ಜಿಲ್ಲಾ ಬಿಜೆಪಿ ಅಧ್ಯಕ್ಷ ಹನಗವಾಡಿ ವೀರೇಶ್ ಸ್ವಾಗತಿಸಿದರು. ಬಿಜೆಪಿ ಪ್ರಧಾನ ಕಾರ್ಯದರ್ಶಿ ಬಿ.ಎಸ್. ಜಗದೀಶ್ ನಿರೂಪಿಸಿದರು.


## ಶ್ರೀಮತಿ ಅಂಬುಜಾ ಹನಗೋಡಿ ಮಠ ನಿಧನ



ದಾವಣಗೆರೆ ನಗರದ ಎಸ್.ಎಸ್. ಬಡಾವಣೆ, ಲಕ್ಷ್ಮಿ ಫ್ಲೋರ್‌ಮಿಲ್ ಹಿಂಭಾಗದ 4ನೇ ಕ್ರಾಸ್ ನಿವಾಸಿ ಹೆಚ್.ಎಂ. ಸತೀಶ್ ಇವರ ಧರ್ಮಪತ್ನಿ

**ಶ್ರೀಮತಿ ಅಂಬುಜಾ ಹನಗೋಡಿ ಮಠ**

ಇವರು, ದಿನಾಂಕ 18.11.2021ರ ಗುರುವಾರ ಬೆಳಿಗ್ಗೆ 10.10ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ ಸುಮಾರು 58 ವರ್ಷ ವಯಸ್ಸಾಗಿತ್ತು. ಪತಿ, ಓರ್ವ ಪುತ್ರ, ಓರ್ವ ಪುತ್ರಿ, ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 18.11.2021ರ ಗುರವಾರದಂದೇ ಸಂಜೆ 5.30ಕ್ಕೆ ನಗರದ ವೀರಶೈವ ರುದ್ರಭೂಮಿಯಲ್ಲಿ ನೆರವೇರಿಸಲಾಯಿತು.

**ಮೃತರ ಕೈಲಾಸ ಶಿವಗಣಾರಾಧನೆಯನ್ನು ದಿನಾಂಕ 22.11.2021ರ ಸೋಮವಾರ ಬೆಳಿಗ್ಗೆ 11 ಗಂಟೆಗೆ ಮೃತರ ಸ್ವಗೃಹದಲ್ಲಿ ಏರ್ಪಡಿಸಲಾಗಿದೆ.**

**ದುಃಖತಪ್ತ ಕುಟುಂಬ ವರ್ಗ**

**ಮೊ: 94481 17715, 78990 72294**

## ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 17.11.2021ರ ಬುಧವಾರ ನಿಧನರಾದ ಓಂ ಟ್ರಾನ್ಸ್‌ಪೋರ್ಟ್ ಕಂಪನಿ ಮಾಲೀಕರೂ ನಮ್ಮ ಆತ್ಮೀಯರೂ ಆದ

**ಶ್ರೀ ರಾಜ್ ಶಿವಕುಮಾರ್**

ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ.

ಮೃತರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಹಾಗೂ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ದಯಪಾಲಿಸಲಿ ಎಂದು ಭಗವಂತನಲ್ಲಿ ಪ್ರಾರ್ಥನೆ.

- ✦ ಹೆಚ್. ನಾಗರಾಜ್
- ✦ ಎನ್.ಎಂ. ಕಡೇಕೊಪ್ಪ ಮತ್ತು ಮಕ್ಕಳು
- ✦ ಶಿವಕುಮಾರ್ ಬಿ.ಹೆಚ್.(ಇಂಜಿನಿಯರ್)
- ✦ ಸಚಿನ್ ಐನಳ್ಳಿ
- ✦ ಹೆಚ್.ವಿ. ಹಾಲೇಶ್, ಕಾಯಿಪೇಟೆ.
- ✦ ರಾಜಣ್ಣ ಬೇತೂರು
- ✦ ಬೆಳ್ಳೂಡಿ ಶಿವಕುಮಾರ್

## ಡಿ.ಎಸ್. ಮಂಜುನಾಥ್ ನಿಧನ



ದಾವಣಗೆರೆ ನಿಟುವಳ್ಳಿ ಹೆಚ್.ಕೆ.ಆರ್ ಸರ್ಕಲ್ ಹತ್ತಿರದ ವಾಸಿ, ಬಾಪೂಜಿ ಆಸ್ಪತ್ರೆ ನೌಕರರಾದ

**ಡಿ.ಎಸ್. ಮಂಜುನಾಥ್**

ಇವರು ದಿನಾಂಕ 18.11.2021ರ ಗುರುವಾರ ರಾತ್ರಿ 7.53ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 55 ವರ್ಷ ವಯಸ್ಸಾಗಿತ್ತು. ಪತ್ನಿ, ಇಬ್ಬರು ಪುತ್ರರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 19.11.2021ರ ಶುಕ್ರವಾರ ಮಧ್ಯಾಹ್ನ 2.30ಕ್ಕೆ ಬೂದಾಳ್ ರಸ್ತೆಯಲ್ಲಿರುವ ವೀರಶೈವ ರುದ್ರಭೂಮಿಯಲ್ಲಿ ನೆರವೇರಲಿದೆ.

**ದುಃಖತಪ್ತ ಕುಟುಂಬವರ್ಗ: 85539 06721, 95901 99704**

## ಭಾವಪೂರ್ಣ ಶ್ರದ್ಧಾಂಜಲಿ



ನನ್ನ ಆತ್ಮೀಯರು, ಸ್ನೇಹ ಪರರಾದ ಓಂ ಟ್ರಾನ್ಸ್‌ಪೋರ್ಟ್ ಕಂಪನಿ ಮಾಲೀಕರಾದ

**ಜಿ. ರಾಜ್ ಶಿವಕುಮಾರ್‌ರವರು**

ದೈವಾಧೀನರಾದರೆಂದು ತಿಳಿದು ಬಹಳ ದುಃಖವಾಯಿತು. ಅವರ ಆತ್ಮಕ್ಕೆ ಚಿರಶಾಂತಿ ಸಿಗಲಿ, ಅವರ ಕುಟುಂಬ ವರ್ಗಕ್ಕೆ ದುಃಖವನ್ನು ಭರಿಸುವ ಶಕ್ತಿಯನ್ನು ಭಗವಂತ ನೀಡಲಿ ಎಂದು ಪ್ರಾರ್ಥಿಸುತ್ತೇವೆ.

**ಶ್ರೀಶೈಲ ಮಲ್ಲಿಕಾರ್ಜುನ ಟ್ರಾನ್ಸ್‌ಪೋರ್ಟ್ (ರಿ)**

ದಾವಣಗೆರೆ, ರಾಣೇಬೆನ್ನೂರು ಸಿಬ್ಬಂದಿ ವರ್ಗ

**94481 19815, 94836 19185**


# ಅತ್ತಿಗೆರೆ ಕೃಷಿ ಪತ್ತಿನ ಸಂಘದ ಅಧ್ಯಕ್ಷರಾಗಿ ಬಸವರಾಜ್



ದಾವಣಗೆರೆ, ನ.18 - ಅತ್ತಿಗೆರೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ಅಧ್ಯಕ್ಷರಾಗಿ ಜಿ.ಎಂ. ಬಸವರಾಜ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

# ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಪಿ.ಬಿ. ರಸ್ತೆ, ಕೆಎಸ್‌ಆರ್‌ಟಿಸಿ ಹಾಗೂ ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 5 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

# ವೀರಶೈವ ಸಂಘದ ಸಭೆ ಇಂದು

**(1ನೇ ಪುಟದಿಂದ)** ಗೌರವ - ಘನತೆಗೆ ದಕ್ಕೆ ಬರುವಂತಹ ರೀತಿಯಲ್ಲಿ ಸುಳ್ಳು ಆರೋಪ ಹಾಗೂ ನಿಂದನೆಯ ಮಾತುಗಳನ್ನಾಡಿರುವ ಹಿನ್ನೆಲೆಯಲ್ಲಿ ಈ ಸಭೆ ಆಯೋಜನೆಗೊಂಡಿದೆ ಎಂದು ಅವರು ವಿವರಿಸಿದ್ದಾರೆ.

# ರಾಜ್ಯದ ಶೇ. 60ರಷ್ಟು ಪ್ರದೇಶದಲ್ಲಿ ಕುಡಿಯುವ ನೀರಿನಲ್ಲಿ ಅಗತ್ಯ ಪ್ರಮಾಣಕ್ಕಿಂತ ಹೆಚ್ಚು ಫ್ಲೋರೈಡ್

## 'ಶುದ್ಧ ಜಲ' ಅಭಿಯಾನ ಕಾರ್ಯಕ್ರಮದಲ್ಲಿ 'ಶುದ್ಧ ಗಂಗಾ' ಮೇಲ್ವಿಚಾರಕ ಫಕ್ಕೀರಪ್ಪ ಬೆಲ್ಲಾಮುದ್ದಿ

ದಾವಣಗೆರೆ, ನ. 18- ರಾಜ್ಯದಲ್ಲಿ ಶೇಕಡ 60ರಷ್ಟು ಪ್ರದೇಶದಲ್ಲಿ ಕುಡಿಯುವ ನೀರಿನಲ್ಲಿ ಅಗತ್ಯ ಪ್ರಮಾಣಕ್ಕಿಂತ ಹೆಚ್ಚು ಫ್ಲೋರೈಡ್, ಶೇ. 20ರಷ್ಟು ಅತ್ಯಧಿಕ ನೈಟ್ರೇಟ್, ಮತ್ತು ಶೇ. 38ರಷ್ಟು ಸೂಕ್ಷ್ಮಾಣುಗಳಿಂದ ಕಲುಷಿತವಾಗಿ ಜನರು ರೋಗ-ರುಜಿನಗಳಿಗೆ ತುತ್ತಾಗುತ್ತಿದ್ದಾರೆ. ಆದ್ದರಿಂದ ಪ್ರತಿಯೊಬ್ಬರೂ ಶುದ್ಧ ನೀರನ್ನು ಬಳಸಿ ಆರೋಗ್ಯವನ್ನು ಕಾಪಾಡಿಕೊಳ್ಳಬೇಕು ಎಂದು ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ 'ಶುದ್ಧ ಗಂಗಾ' ಮೇಲ್ವಿಚಾರಕ ಫಕ್ಕೀರಪ್ಪ ಬೆಲ್ಲಾಮುದ್ದಿ ತಿಳಿಸಿದರು.

ಕುಂದವಾಡ ಅಜ್ಜಯ್ಯನ ಮಠದ ಆವರಣದಲ್ಲಿ ನಡೆದ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ 'ಶುದ್ಧ ಜಲ' ಅಭಿಯಾನ ಕಾರ್ಯಕ್ರಮದ ಮೂಲಕ ನಡೆದ ರಸ್ತೆ ಜಾಥಾ ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಅವರು ಮಾತನಾಡಿದರು.

ಡಾ॥ ವೀರೇಂದ್ರ ಹೆಗ್ಗಡೆಯವರು ಹಾಗೂ ಹೇಮಾವತಿ ಅಮ್ಮನವರು ಸಮುದಾಯದ ಅಭಿವೃದ್ಧಿಯ ಆಶಯವನ್ನಿಟ್ಟುಕೊಂಡು ಹಲವಾರು ಕಾರ್ಯಕ್ರಮಗಳಿಗೆ ಪ್ರೇರೇಪಣೆ ಮತ್ತು ಮಾರ್ಗದರ್ಶನ ನೀಡುತ್ತಿದ್ದಾರೆ. ಇಂತಹ ಆಶಯ ದೊಂದಿಗೆ ಪ್ರಾರಂಭಗೊಂಡ ಕಾರ್ಯಕ್ರಮವೇ ಶುದ್ಧ ಗಂಗಾ ಕಾರ್ಯಕ್ರಮವಾಗಿದೆ ಎಂದರು.

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಮೂಲಕ ಈಗಾಗಲೇ ನಾವು 324 ಶುದ್ಧ ನೀರಿನ ಘಟಕಗಳನ್ನು ಪ್ರಾರಂಭ ಮಾಡಿ ಪ್ರತಿ ಲೀಟರ್ ಗೆ 15 ಪೈಸೆಯಲ್ಲಿ 81756 ಬಳಕೆದಾರರಿಗೆ ಪ್ರತಿದಿನ ಶುದ್ಧ ನೀರನ್ನು ಪೂರೈಸುತ್ತಿದ್ದೇವೆ ಎಂದು ತಿಳಿಸಿದರು.

ಅಶುದ್ಧ ನೀರು ಸೇವನೆಯಿಂದ ಆರೋಗ್ಯ ಕೆಡುವುದು, ಕರಳು ಬೇನೆ, ವಾಂತಿ, ವಿಷಮ ಶೀತ, ಜ್ವರ, ಕಿಡ್ನಿ ಸ್ಟೋನ್, ಕ್ಯಾನ್ಸರ್, ಅಧಿಕ ಅವಧಿಯವರೆಗೆ ಅನಾರೋಗ್ಯ, ಪಾರ್ಶ್ವ ವಾಯು, ಹೊಟ್ಟೆನೋವು, ಗ್ಯಾಸ್ಟ್ರಿಕ್, ಹೃದಯದ ರಕ್ತದ ಒತ್ತಡ ಹೆಚ್ಚಲು ಕಾರಣವಾಗುತ್ತದೆ, ಆದ್ದರಿಂದ ಪ್ರತಿಯೊಬ್ಬರು ಶುದ್ಧ ನೀರನ್ನು ಬಳಸಬೇಕೆಂದು ಯೋಜನೆಯ ಜ್ಞಾನವಿಕಾಸ ಸಮನ್ವಯಾಧಿಕಾರಿ ಗಾಯತ್ರಿ ತಿಳಿಸಿದರು.

ಕಾರ್ಯಕ್ರಮದಲ್ಲಿ ಶುದ್ಧಗಂಗಾ ಪ್ರೇರಕರಾದ ಟಿ. ಆರ್. ಮಂಜುಳಾ, ಸೇವಾ ಪ್ರತಿನಿಧಿ ಆಶಾ, ಸ್ವಸಹಾಯ ಸಂಘದ ಆಶಾ ಭಾಗವಹಿಸಿದ್ದರು, ಪುಷ್ಪಾ ನಿರೂಪಿಸಿದರು.

# ಮಕ್ಕಳು ಹಿರಿಯರಿಗೆ, ಶಿಕ್ಷಕರಿಗೆ ಗೌರವ ನೀಡಬೇಕು



### ಹರಿಹರ : ಮಕ್ಕಳ ಹಕ್ಕುಗಳ ಅರಿವು ಕಾರ್ಯಕ್ರಮದಲ್ಲಿ ನ್ಯಾ॥ ಯಶವಂತ್ ಕುಮಾರ್ ಕರೆ

ಹರಿಹರ, ನ.18- ಮಕ್ಕಳು ಯಾವಾಗಲೂ ಹಿರಿಯರಿಗೆ ಮತ್ತು ಶಿಕ್ಷಕರಿಗೆ ಗೌರವ ನೀಡಬೇಕು, ಮಕ್ಕಳು ತಮ್ಮ ಹಕ್ಕುಗಳ ಬಗ್ಗೆ ಅರಿವು ಹೊಂದಿರಬೇಕು ಎಂದು ಜೆಎಂಎಫ್‌ಸಿ ನ್ಯಾಯಾಲಯದ ನ್ಯಾಯಾಧೀಶರಾದ ಆರ್. ಯಶವಂತ್ ಕುಮಾರ್ ತಿಳಿಸಿದರು.

ನಗರದ ತಾಲ್ಲೂಕು ಕಾನೂನು ಸೇವಾ ಸಮಿತಿ, ವಕೀಲರ ಸಂಘ ಮತ್ತು ಶ್ರೀ ಗುರು ತಿಪ್ಪೇರುದ್ರಸ್ವಾಮಿ ಹಿರಿಯ ಪ್ರಾಥಮಿಕ ಶಾಲೆ ಇವರುಗಳ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿದ್ದ ಮಕ್ಕಳ ದಿನಾಚರಣೆ ಹಾಗೂ ಮಕ್ಕಳ ಹಕ್ಕುಗಳ ಅರಿವು ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಮಕ್ಕಳು ತಮ್ಮ ಹಕ್ಕುಗಳ ಬಗ್ಗೆ ಅರಿವು ಹೊಂದಿರಬೇಕು. ಜೊತೆಗೆ ಹೆತ್ತವರಿಗೆ ಮತ್ತು ಪಾಠ ಕಲಿಸಿದ ಶಿಕ್ಷಕರಿಗೆ ವಿಶೇಷ ಗೌರವ ನೀಡಿ, ನಿಮ್ಮ ವಿದ್ಯಾರ್ಥಿ ಜೀವನ ಸಾರ್ಥಕ ಪಡಿಸಿಕೊಳ್ಳಿ ಎಂದರು.

ಪ್ರಧಾನ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರಾದ ಮಹದೇವ ಕಾನಟಿ, ವಕೀಲರ ಸಂಘದ ಉಪಾಧ್ಯಕ್ಷರಾದ ಶ್ರೀಮತಿ ಸಾಕಮ್ಮ, ಸಂಘದ ಕಾರ್ಯದರ್ಶಿ ಗಣೇಶ್ ಕೆ. ದುರ್ಗದ, ಮುಖ್ಯ ಅತಿಥಿಗಳಾಗಿ ಸರ್ಕಾರಿ ಸಹಾಯಕ ಅಭಿಯೋಜಕ ಪ್ರವೀಣ್‌ಕುಮಾರ್, ವಕೀಲ ಕೆ. ಚಂದ್ರಾಚಾರಿ ಮತ್ತು ಇತರರು ಉಪಸ್ಥಿತರಿದ್ದರು.

ಸಂಪನ್ಮೂಲ ವ್ಯಕ್ತಿಗಳಾಗಿ ವಕೀಲರಾದ ಶ್ರೀಮತಿ ಭಾಗೀರಥಿ, ಶ್ರೀಮತಿ ಲೋಹಿತಾ ವಿ. ಮಕ್ಕಳ ಹಕ್ಕುಗಳ ಬಗ್ಗೆ ಉಪನ್ಯಾಸ ನೀಡಿದರು. ವಕೀಲರ ಸಂಘದ ಅಧ್ಯಕ್ಷ ರುದ್ರಗೌಡ ಅಧ್ಯಕ್ಷತೆ ವಹಿಸಿದ್ದರು.

ಕಾರ್ಯಕ್ರಮದಲ್ಲಿ ಶಾಲೆಯ ಮುಖ್ಯಶಿಕ್ಷಕ ಬಿ.ಬಿ. ರೇವಣನಾಯ್ಕ, ಸಹ ಶಿಕ್ಷಕರಾದ ಎಂ.ನಾಗರಾಜ್, ಗಿರಿಜ, ಕೆ.ಇ.ಹೊನಕೇರಪ್ಪ, ಎಂ.ಮಂಜುನಾಥ್, ಸಿ.ಮಂಜುನಾಥಪ್ಪ, ಆರ್.ಜಿ.ಮುರುಘರಾಜೇಂದ್ರ, ಶಿಕ್ಷಣ ಸಂಯೋಜಕರಾದ ತೀರ್ಥಪ್ಪ, ಲಿಂಗರಾಜು, ಗಿರೀಶ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

# ಕಡಲೆ ಬೆಳೆ ನಿರ್ವಹಣೆ : ರೈತರಿಗೆ ಸಲಹೆ

ದಾವಣಗೆರೆ, ನ. 18- ಕಡಲೆ ಬೆಳೆಯಲ್ಲಿ ನಿರ್ವಹಣಾ ತಾಂತ್ರಿಕತೆಗಳ ಬಗ್ಗೆ ಕೃಷಿ ಇಲಾಖೆಯು ರೈತರಿಗೆ ಸಲಹೆಗಳನ್ನು ನೀಡಿದೆ.

ಹಿಂಗಾರು ಹಂಗಾಮು ಆರಂಭವಾಗಿದ್ದು, ದಾವಣಗೆರೆ ಜಿಲ್ಲೆಯಾದ್ಯಂತ ಕಡಲೆ ಬೆಳೆ ಬೆಳವಣಿಗೆಯಿಂದ ಕಾಯಿಕಟ್ಟುವ ಹಂತದಲ್ಲಿದೆ. ಈ ಸಮಯದಲ್ಲಿ ರೈತರು ಕೆಲವು ನಿರ್ವಹಣಾ ತಾಂತ್ರಿಕತೆಗಳನ್ನು ಅಳವಡಿಸಿಕೊಳ್ಳುವುದರಿಂದ ಹೆಚ್ಚಿನ ಇಳುವರಿ ಪಡೆಯಲು ಸಹಕಾರಿಯಾಗುತ್ತದೆ.

ಕಡಲೆ ಬೆಳೆ 30 ರಿಂದ 40 ದಿನಗಳ ಬೆಳೆಯಿದ್ದಾಗ ಕುಡಿ ಚಿವುಟುವುದರಿಂದ ಕವಲುಗಳ ಸಂಖ್ಯೆ ಹೆಚ್ಚಾಗಿ ಹೆಚ್ಚಿನ ಇಳುವರಿ ನಿರೀಕ್ಷಿಸಬಹುದು.

ಬಿತ್ತನೆಯಾದ 35 ದಿನಗಳ ನಂತರ ನ್ಯಾಫ್ತಾಲಿಕ್ ಅಸಿಟಿಕ್ ಆಸಿಡ್ (ಎನ್.ಎ.ಎ.) 20 ಪಿ.ಪಿ.ಎಂ. ನ್ನು 100 ಲೀಟರ್ ನೀರಿಗೆ 2 ಮಿ.ಲೀ. ಬೆರೆಸಿ ಬೆಳೆಗೆ ಸಿಂಪಡಿಸುವುದರಿಂದ ಬೆಳೆ ಸದೃಢ, ಆರೋಗ್ಯಕರ ಬೆಳವಣಿಗೆ ಹೊಂದುತ್ತದೆ. ಬಿತ್ತನೆಯಾದ 35 ದಿನಗಳ ನಂತರ ಸಸ್ಯವರ್ಧಕವಾದ ಟ್ರೈಕೊಂಟಿನಾಲ್ 1 ಮಿ.ಲೀ. ನ್ನು 1 ಲೀಟರ್ ನೀರಿಗೆ ಬೆರೆಸಿ ಸಿಂಪಡಿಸುವುದರಿಂದ ಹೂವು ಮತ್ತು ಕಾಯಿಗಳ ಸಂಖ್ಯೆ ಹೆಚ್ಚುವುದು. ಸಾವಯವ ರೈತರು ಬೀಜಾಮೃತ ಸಿಂಪರಣೆ ಕೈಗೊಳ್ಳಬಹುದು.

ಸಸ್ಯ ಸಂರಕ್ಷಣೆಗೆ ಸಂಬಂಧಿಸಿದಂತೆ ಕಾಯಿಕೊರಕದ ಬಾಧೆ ಕಂಡುಬಂದಲ್ಲಿ 1 ರಿಂದ 1.5 ಮಿ.ಲೀ. ಅಜಾಡಿರೆಕ್ಟಿನ್ ಅನ್ನು 1 ಲೀಟರ್ ನೀರಿಗೆ ಬೆರೆಸಿ ಸಿಂಪಡಿಸಬೇಕು. ಅಥವಾ 0.5 ಗ್ರಾಂ. ಇಮಾಮೆಕ್ಟಿನ್ ಬೆನ್ಜೋಯೇಟ್ 5 ಎಸ್.ಜಿ. ಅಥವಾ 0.2- 0.4 ಮಿ.ಲೀ. ಕ್ಲೋರಂಟ್ರನಿಲಿಪ್ರೋಲ್ ಅನ್ನು 18.5 ಎಸ್.ಸಿ ಯನ್ನು 1 ಲೀ. ನೀರಿಗೆ ಬೆರೆಸಿ ಸಿಂಪಡಿಸಬೇಕು.

ನಿರ್ವಹಣಾ ಕ್ರಮವಾಗಿ ಜಮೀನಿನಲ್ಲಿ ಕವಲೊಡೆದ ಕೊಂಬೆಗಳನ್ನು ನೆಟ್ಟು ಜಮೀನಿನಲ್ಲಿ ಹಾಗೂ ಸುತ್ತಲೂ ಮಂಡಕ್ಕಿ ಅಥವಾ ಅನ್ನ ಚೆಲ್ಲುವುದರಿಂದ ಪಕ್ಷಿಗಳು ಆಕರ್ಷಿತವಾಗಿ ರೆಂಬೆ ಮೇಲೆ ಕುಳಿತುಕೊಳ್ಳುತ್ತದೆ. ಹಾಗೆಯೇ ಬೆಳೆಯಲ್ಲಿರುವ ಕೀಟಗಳನ್ನು ಹಿಡಿದು ತಿನ್ನುತ್ತದೆ.

ಮೇಲ್ಕಂಡಂತೆ ನಿರ್ವಹಣಾ ಕ್ರಮಗಳನ್ನು ಅನುಸರಿಸುವುದರಿಂದ ಕಡಲೆಯಲ್ಲಿ ನಿರೀಕ್ಷಿತ ಇಳುವರಿ ಪಡೆಯಲು ಸಾಧ್ಯವಾಗುತ್ತದೆ ಎಂದು ಜಂಟಿ ಕೃಷಿ ನಿರ್ದೇಶಕರು ತಿಳಿಸಿದ್ದಾರೆ.

# ಯುನೈಟೆಡ್ ಇಂಟರ್‌ನ್ಯಾಷನಲ್ ಸ್ಕೂಲ್‌ನಲ್ಲಿ ರಾಜ್ಯೋತ್ಸವ



ದಾವಣಗೆರೆ, ನ.18- ನಗರದ ಯುನೈಟೆಡ್ ಇಂಟರ್‌ನ್ಯಾಷನಲ್ ಸ್ಕೂಲ್‌ನಲ್ಲಿ ಕರ್ನಾಟಕ ರಾಜ್ಯೋತ್ಸವ ಆಚರಿಸಲಾಯಿತು.

ಶಾಲೆಯ ಅಧ್ಯಕ್ಷ ಬಿ. ದಾದಾಪೀರ್ ತಮ್ಮ ಭಾಷಣದಲ್ಲಿ ಕನ್ನಡ ನಾಡು, ನುಡಿ ಕುರಿತು ಮಾತನಾಡಿದರು. ಶಿಕ್ಷಕಿ ಜಿ. ಜ್ಯೋತಿ ಒನಕೆ ಓಬವ್ವ ಕುರಿತು ಮಾತನಾಡಿದರು. ವಿದ್ಯಾರ್ಥಿನಿಯರಾದ ಬಿ.ಬಿ. ಸಕೀನಾ ಕುವೆಂಪು ಕುರಿತು ಮಾತನಾಡಿದಳು. ಜುಹಾ ನಿತ್ಯೋತ್ಸವ ಗೀತೆ ಹಾಡಿದರು. ನೂರ್ ಮದನಿ ಕಿತ್ತೂರು ರಾಣಿ ಚೆನ್ನಮ್ಮ ವೇಶ ಧರಿಸಿ ಮಾತನಾಡಿದಳು. ವಿದ್ಯಾರ್ಥಿ ಆದಿ ಶಾರೀಕ್ ಖಾನ್ ಪುನೀತ್ ರಾಜಕುಮಾರ್ ಪಾತ್ರಾಭಿನಯ ಮಾಡಿದರು.

ಶಾಲೆಯ ನಿರ್ದೇಶಕರಾದ ಫಸೀಹಾ ಬಾನು ಖಾನ್, ಪ್ರಾಂಶುಪಾಲ ಎಂ. ವಾಸೀಂ ಪಾಷ ಕಾರ್ಯಕ್ರಮ ಕುರಿತು ಮಾತನಾಡಿದರು. ಟ್ರಸ್ಟಿ ಫಿರ್ದೋಸ್ ಸಿದ್ಧಿಕಿ, ನಿರ್ವಾಹಕ ಶಾರೀಖ್ ಖಾನ್, ಪ್ರಾಂಶುಪಾಲ ಎಂ. ವಾಸೀಮ್ ಪಾಷಾ, ಸಂಯೋಜಕರಾದ ಶರಫುನ್ನೀಸಾ ಮತ್ತು ಇತರರು ಉಪಸ್ಥಿತರಿದ್ದರು.

# ಹರಪನಹಳ್ಳಿ: ಕರ್ನಾಟಕ ರಕ್ಷಣಾ ವೇದಿಕೆಗೆ ಆಯ್ಕೆ



ಹರಪನಹಳ್ಳಿ, ನ.18 - ಕರ್ನಾಟಕ ರಕ್ಷಣಾ ವೇದಿಕೆಯ ವಿಜಯ ನಗರ ಜಿಲ್ಲಾ ಸಂಘಟನೆ ಕಾರ್ಯದರ್ಶಿಯಾಗಿ ಎಚ್. ಬಾಲಾಜಿ ನೇಮಕಗೊಂಡಿದ್ದಾರೆ ಎಂದು ವಿಜಯ ನಗರ ಜಿಲ್ಲಾಧ್ಯಕ್ಷ ತಾರಿಹಳ್ಳಿ ಹನುಮಂತಪ್ಪ ತಿಳಿಸಿದ್ದಾರೆ.

# ಶಿಸ್ತು - ಸ್ವಚ್ಛತೆ ರೂಢಿಸಿಕೊಳ್ಳಬೇಕು

## ಹರಪನಹಳ್ಳಿ : ತರಳಬಾಳು ಶಾಲೆ ಕಾರ್ಯಕ್ರಮದಲ್ಲಿ ವಿದ್ಯಾರ್ಥಿನಿ ರುಚಿತಾ




ಹರಪನಹಳ್ಳಿ, ನ.18- ಮಕ್ಕಳು ಶಿಸ್ತು ಮತ್ತು ಸ್ವಚ್ಛತೆಯನ್ನು ಕಾಪಾಡಿಕೊಂಡು ವಿದ್ಯಾಭ್ಯಾಸ ಮಾಡಿದರೆ ಉನ್ನತ ಮಟ್ಟಕ್ಕೆ ಏರಲು ಸಾಧ್ಯ ಎಂದು 10ನೇ ತರಗತಿ ವಿದ್ಯಾರ್ಥಿನಿ ಕು. ಬಿ. ರುಚಿತಾ ಪ್ರತಿಪಾದಿಸಿದರು.

ಪಟ್ಟಣದ ತರಳಬಾಳು ಆಂಗ್ಲ ಮಾಧ್ಯಮ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನಡೆದ ಮಕ್ಕಳ ದಿನಾಚರಣೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ರುಚಿತಾ ಮಾತನಾಡಿದರು.

ಮುಖ್ಯ ಅತಿಥಿಗಳಾಗಿ ಶಾಲೆಯ ವಿದ್ಯಾರ್ಥಿಗಳಾದ ಬಿ.ಕೆ. ಗಾಯತ್ರಿ, ಅಮೃತಾ ಭಾಗವಹಿಸಿ ಮಕ್ಕಳ ಚಟುವಟಿಕೆ ಮತ್ತು ಜವಾಹರ್‌ಲಾಲ್ ನೆಹರೂರವರ ಜೀವನ ಕಥೆಯನ್ನು ತಿಳಿಸಿದರು.

ಶಾಲಾ ಕಾರ್ಯದರ್ಶಿ ಕುಸುಮಾ ಜಗದೀಶ್ ಮಕ್ಕಳಿಗೆ ಹಿತ ನುಡಿದರು.

ಶಿಕ್ಷಕ ಎಸ್. ನಂಜಪ್ಪ ಮಾತನಾಡಿ, ಪಾತರಗಿತ್ತಿ ಕೇವಲ 14 ದಿನ ಬದುಕಿರುತ್ತದೆ. ಆದರೆ ಅದು ಎಂದೂ ದುಃಖಿಸದೇ ಸಂತೋಷದಿಂದ ಜೀವನ ಸಾಗಿಸುತ್ತದೆ. ಅದೇ ರೀತಿ ತಾವುಗಳು ಪ್ರತಿದಿನ ಸಂತೋಷದಿಂದ ನಗು ನಗುತ್ತಾ ಇದ್ದು ವಿದ್ಯಾಭ್ಯಾಸ ಮಾಡಬೇಕು ಎಂದರು. ವಿದ್ಯಾರ್ಥಿನಿಯರಾದ ನಂದಿನಿ ಹಾಗೂ ಸೋನು ಬೇಗಂ ಕಾರ್ಯಕ್ರಮ ನಿರೂಪಿಸಿದರು. ನಿರಂಜನ್ ವಂದಿಸಿದರು.

# ಕುಕ್ಕುವಾಡದಲ್ಲಿ ಇಂದು ಉಚಿತ ಯೋಗ ಕಾರ್ಯಾಗಾರ

ಕುಕ್ಕುವಾಡ ಗ್ರಾಮದಲ್ಲಿರುವ ಸರ್ಕಾರಿ ಶಾಲೆ ಕರ್ನಾಟಕ ಪಬ್ಲಿಕ್ ಸ್ಕೂಲ್‌ನಲ್ಲಿ ಇಂದು ಮಧ್ಯಾಹ್ನ 3 ಗಂಟೆಯಿಂದ ಶಿಕ್ಷಣದಲ್ಲಿ ಯೋಗದ ಮಹತ್ವ ಮಕ್ಕಳ ಮೇಧಾಶಕ್ತಿಯನ್ನು ಹೆಚ್ಚಿಸುವ ಕುರಿತು ಉಚಿತ ಯೋಗ ಪ್ರಾತ್ಯಕ್ಷಿಕೆ ಮತ್ತು ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿದೆ.

ಈ ವಿಶೇಷ ಕಾರ್ಯಾಗಾರವನ್ನು ಆದರ್ಶ ಯೋಗ ಪ್ರತಿಷ್ಠಾನ ಪ್ರಶಸ್ತಿ ಪುರಸ್ಕೃತ ಯೋಗ ತಜ್ಞ ಡಾ॥ ರಾಘವೇಂದ್ರ ಗುರೂಜಿ ನಡೆಸಿ ಕೊಡಲಿದ್ದಾರೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶಾಲೆಯ ಮುಖ್ಯೋಪಾಧ್ಯಾಯ ಎಮ್.ಆರ್. ಲೋಹಿತಾಶ್ವ ವಹಿಸಲಿದ್ದಾರೆ.

# ನಾಳೆ ಅಯ್ಯಪ್ಪಸ್ವಾಮಿ ಮಂಡಲ ಪೂಜೆ



ದಾವಣಗೆರೆ, ನ.18- ನಗರದ ಎಂಸಿಸಿ ಬಿ ಬ್ಲಾಕ್‌ನ ಬಿಐಇಟಿ ಕಾಲೇಜು ರಸ್ತೆಯಲ್ಲಿರುವ ಶರಣಂ ಅಯ್ಯಪ್ಪ ಸ್ವಾಮಿ ದೇವಸ್ಥಾನದಲ್ಲಿ ನಾಡಿದ್ದು ಶನಿವಾರ ಮಂಡಲ ಪೂಜೆ ಆಯೋಜಿಸಲಾಗಿದೆ ಎಂದು ಶರಣಂ ಅಯ್ಯಪ್ಪ ಸ್ವಾಮಿ ದೇವಸ್ಥಾನ ಟ್ರಸ್ಟ್‌ನ ನಿರ್ದೇಶಕ ಎಂ.ರುದ್ರಪ್ಪ ತಿಳಿಸಿದ್ದಾರೆ.

ಮಂಡಲ ಪೂಜೆ ಅಂಗವಾಗಿ ಬೆಳಗ್ಗೆ 5.30ಕ್ಕೆ ಪಂಚ ದೇವರಿಗೆ ಪಂಚಾಮೃತ ಅಭಿಷೇಕ, ಅಯ್ಯಪ್ಪ ಸ್ವಾಮಿಗೆ ತುಪ್ಪದ ಅಭಿಷೇಕ, ನಂತರ ಗಣಪತಿ ಹೋಮ, ಬಳಿಕ ಅಯ್ಯಪ್ಪ ಸ್ವಾಮಿಗೆ ಸಹಸ್ರ ನಾಮಾವಳಿ, ಪುಷ್ಪಾರ್ಚನೆ ನಂತರ ವಿಶೇಷ ಅಲಂಕಾರ, ಮಂತ್ರ ಪುಷ್ಪ, ಮಹಾಮಂಗ ಳಾರತಿ ಬಳಿಕ ತೀರ್ಥ ಪ್ರಸಾದ ಏರ್ಪಡಿಸಲಾಗಿದೆ. ಶಬರಿ ಮಲೈಗೆ ಹೋಗುವ ಭಕ್ತರು ಕಡ್ಡಾಯವಾಗಿ ಒಂದು ಮತ್ತು ಎರಡನೇ ಲಸಿಕೆ ಪಡೆದಿರಬೇಕು. ದರ್ಶನಕ್ಕೆ ಆನ್ ಲೈನ್ ನಲ್ಲಿ ನೋಂದಣಿ ಮಾಡಿಸಬೇಕು ಎಂದು ವಿವರಿಸಿದ್ದಾರೆ.


## ದಾವಣಗೆರೆ ಜಿಲ್ಲಾ ಭೋವಿ ಸಮಾಜದ ಸಭೆ

ದಾವಣಗೆರೆ ಜಿಲ್ಲೆಯಲ್ಲಿ ಭೋವಿ ಸಮಾಜದ ಸಂಘಟನೆಯ ವಿಚಾರವಾಗಿ ಚರ್ಚಿಸಲು ಮತ್ತು ಸಂಘಟನೆಗೆ ಒತ್ತು ಕೊಡಲು ಮುಖಂಡರಿಗೆ ಮತ್ತು ಯುವಕರಿಗೆ ಮಾರ್ಗದರ್ಶನ ನೀಡಲು ಭೋವಿ ಗುರುಪೀಠದ ಪೀಠಾಧ್ಯಕ್ಷರಾದ ಶ್ರೀ ಶ್ರೀ ಶ್ರೀ ಇಮ್ಮಡಿ ಸಿದ್ಧರಾಮೇಶ್ವರ ಶ್ರೀಗಳು ಚಿತ್ರದುರ್ಗದ ಶ್ರೀ ಮಠದಲ್ಲಿ ದಿನಾಂಕ 20.11.2021ರ ಶನಿವಾರ ಬೆಳಿಗ್ಗೆ 10.30ಕ್ಕೆ ಜಿಲ್ಲೆಯ ಎಲ್ಲಾ ತಾಲ್ಲೂಕು ಮತ್ತು ನಗರ ಘಟಕದ ಎಲ್ಲಾ ಸಮಾಜ ಬಾಂಧವರ ಸಭೆಯನ್ನು ಕರೆಯಲಾಗಿದೆ. ಈ ಸಭೆಗೆ ಜಿಲ್ಲಾದ್ಯಂತ ಎಲ್ಲಾ ತಾಲ್ಲೂಕಿನ ಮುಖಂಡರುಗಳು ಮತ್ತು ಪದಾಧಿಕಾರಿಗಳು ಭಾಗವಹಿಸಲು ಶ್ರೀಗಳು ಇಚ್ಛಿಸಿರುವುದರಿಂದ ಸಮಾಜ ಬಾಂಧವರು ಸರಿಯಾದ ಸಮಯಕ್ಕೆ ಆಗಮಿಸಿ ಸಭೆಯನ್ನು ಯಶಸ್ವಿಗೊಳಿಸಬೇಕೆಂದು ಸಮಾಜ ಬಾಂಧವರಲ್ಲಿ ಜಿಲ್ಲಾಧ್ಯಕ್ಷರಾದ ಶ್ರೀ ಬಿ.ಟಿ. ಸಿದ್ದಪ್ಪನವರು ವಿನಂತಿಸಿಕೊಳ್ಳುತ್ತಾರೆ.



ಇಂತಿ ತಮ್ಮ ವಿಶ್ವಾಸಿ: ಬಿ.ಟಿ. ಸಿದ್ದಪ್ಪ, ಜಿಲ್ಲಾಧ್ಯಕ್ಷರು

## ಬೇಕಾಗಿದ್ದಾರೆ

ಶಾಖಾ ವ್ಯವಸ್ಥಾಪಕರು - 01, B.Com/M.Com
ಅಕೌಂಟೆಂಟ್ - 02 BBM
ಸಹಾಯಕರು/ಕ್ಯಾಷಿಯರ್ -02 PUC
ಪಿಗ್ಮಿ ಏಜೆಂಟರ್ -04
(ಸಹಕಾರಿ ಕ್ಷೇತ್ರದಲ್ಲಿ ಅನುಭವ ಹೊಂದಿರುವ ಮಹಿಳಾ ಅಭ್ಯರ್ಥಿಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗುವುದು)

ಸಂಪರ್ಕಿಸಿ: ಶ್ರೀ ಸಾಯಿ ಕ್ರೆಡಿಟ್ ಕೋ-ಆಪ್ ಸೊಸೈಟಿ
ಅಂದನೂರು ಕಾಂಪ್ಲೆಕ್ಸ್, ಪಿ.ಬಿ. ರಸ್ತೆ, ಗಾಂಧಿ ಸರ್ಕಲ್ ಬಳಿ, ದಾವಣಗೆರೆ.
99802 40407

## ಬೇಕಾಗಿದ್ದಾರೆ

Diploma in Hardware Networking / Software ಆದವರು ಬೇಕಾಗಿದ್ದಾರೆ.
ಅನುಭವವುಳ್ಳ ಅಭ್ಯರ್ಥಿಗಳಿಗೆ ಹೆಚ್ಚಿನ ಆದ್ಯತೆ.

ಎ.ಕೆ. ಫಾರ್ಮದಲ್ಲಿ ಸ್ಟಾಕ್ ತೆಗೆಯಲು PUC / Diploma / Degree ಆದ ಉತ್ಸಾಹಿ ಯುವಕರು ಬೇಕಾಗಿದ್ದಾರೆ.
ಆಯ್ಕೆ ಆದ ಅಭ್ಯರ್ಥಿಗಳಿಗೆ, ಆಕರ್ಷಕ ವೇತನ, PF, ESI ಮತ್ತು Gratuity ಸೌಲಭ್ಯಗಳು ಹಾಗೂ ಕಾರ್ಪೋರೇಟ್ ತರಬೇತಿ ಇರುತ್ತದೆ.

ಸಂಪರ್ಕಿಸಿ : ಎ.ಕೆ. ಫಾರ್ಮ
ತರಳಬಾಳು ಶಾಲೆ ಎದುರು, ಹದಡಿ ರಸ್ತೆ, ದಾವಣಗೆರೆ.

## ಭಾವನಾ ಸಹಕಾರ ಸಂಘ ನಿಯಮಿತ (ರಿ)

ಬಿ.ಕೆ. ಹಾಸ್ಟೆಲ್ ಕಟ್ಟಡ, ಜಯದೇವ ಸರ್ಕಲ್ ಹತ್ತಿರ, ದಾವಣಗೆರೆ-2

### 6 ನೇ ವಾರ್ಷಿಕ ಮಹಾಸಭೆ ಆಹ್ವಾನ ಪತ್ರಿಕೆ

ಮೇಲ್ಕಂಡ ಸಹಕಾರ ಸಂಘದ 2020-21ನೇ ಸಾಲಿನ 6ನೇ ವಾರ್ಷಿಕ ಮಹಾಸಭೆಯನ್ನು ದಿನಾಂಕ 20.11.2021ನೇ ಶನಿವಾರ ಬೆಳಿಗ್ಗೆ 11 ಕ್ಕೆ ಸಂಘದ ಅಧ್ಯಕ್ಷರಾದ **ಶ್ರೀ ಕೆ.ಬಿ. ಶಂಕರನಾರಾಯಣರವರ** ಅಧ್ಯಕ್ಷತೆಯಲ್ಲಿ ಸಂಘದ ಕಚೇರಿಯಲ್ಲಿ ಏರ್ಪಡಿಸಲಾಗಿದೆ.

**- ಆಡಳಿತ ಮಂಡಳಿ**


## ಸಾರ್ವಜನಿಕ ಪ್ರಕಟಣೆ

ನನ್ನ ಕಕ್ಷಿದಾರರಾದ ಜಿ.ಟಿ. ದಾನಪ್ಪ ಬಿನ್ ಲೇಟ್ ಹೆಚ್.ಜಿ. ತಿಪ್ಪೇಸ್ವಾಮಿ, ವಯಸ್ಸು ಸುಮಾರು 47 ವರ್ಷ, ವಾಸ : #1724/29, 2ನೇ ಅಡ್ಡರಸ್ತೆ, ಸಿದ್ದವೀರಪ್ಪ ಬಡಾವಣೆ, ದಾವಣಗೆರೆ (ಮೊ. ನಂ. 95353 83759) ಇವರ ಪರವಾಗಿ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ:-

ನನ್ನ ಕಕ್ಷಿದಾರರಿಗೆ ಕೆಳಕಂಡ ಷೆಡ್ಯೂಲ್ ಸ್ವತ್ತಿಗೆ ಸಂಬಂಧಪಟ್ಟಂತೆ ಮಾನ್ಯ 3ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ ಇವರಲ್ಲಿ ಓ.ಎಸ್.ನಂ 297/2021ನ್ನು 1/3ನೇ ಭಾಗದ ಹಿಸ್ಸೆಯ ಹಕ್ಕು ಇದೆ ಎಂದು ಪಾಲು ವಿಭಾಗ ಮತ್ತು ಪ್ರತ್ಯೇಕ ಸ್ವಾಧೀನವನ್ನು ಕೋರಿ ಸಲ್ಲಿಸಿರುತ್ತಾರೆ. ಅದರಂತೆ ಸದರಿ ದಾವೆಯಲ್ಲಿ ಕೆಳಕಂಡ ಷೆಡ್ಯೂಲ್ ಸ್ವತ್ತಿಗೆ ಸಂಬಂಧಪಟ್ಟಂತೆ ಸಿ.ಪಿ.ಸಿ ಆದೇಶ 39 ನಿಯಮ 1 & 2ರ ಅಡಿಯಲ್ಲಿ ದಾವಾ ಷೆಡ್ಯೂಲ್ ಸ್ವತ್ತನ್ನು ಪ್ರತಿವಾದಿಯಾದ ಜಿ. ಓಂಕಾರಪ್ಪ ಮತ್ತು ಇತರರು ಯಾವುದೇ ರೀತಿಯಲ್ಲಿ ಪರಭಾರೆ, ವಗೈರೆ ಮಾಡದಂತೆ ತಾತ್ಕಾಲಿಕ ನಿರ್ಬಂಧಕಾಜ್ಞೆ ಆದೇಶವನ್ನು ಮಾಡಿದ್ದು, ಕೆಳಕಂಡ ಷೆಡ್ಯೂಲ್ ಸ್ವತ್ತಿನಲ್ಲಿ ನನ್ನ ಕಕ್ಷಿದಾರರಿಗೆ 1/3ನೇ ಭಾಗದ ಹಿಸ್ಸೆಯನ್ನು ಹೊಂದಿರುತ್ತಾರೆ. ಸದರಿ ಮೇಲ್ಕಂಡಂತೆ ಅಸಲು ದಾವಾ ನಂ. 297/2021ರ ದಾವೆಯು ಇನ್ನೂ ಮಾನ್ಯ ಘನ ನ್ಯಾಯಾಲಯದಲ್ಲಿ ವಿಚಾರಣಾ ಹಂತದಲ್ಲಿರುತ್ತದೆ. ಆದ್ದರಿಂದ ನನ್ನ ಕಕ್ಷಿದಾರರ ಪರ ನಾನು ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಮೇಲ್ಕಂಡ ನ್ಯಾಯಾಲಯದಲ್ಲಿ ಅಸಲು ದಾವಾ ನಂ. 297/2021ರ ದಾವೆಯು ವಿಚಾರಣೆ ಹಂತದಲ್ಲಿರುವುದರಿಂದ ಷೆಡ್ಯೂಲ್ ಸ್ವತ್ತನ್ನು ಸಾರ್ವಜನಿಕರು ಕ್ರಯ, ದಾನ, ಭೋಗ್ಯ, ಜಂಟಿ ಅಭಿವೃದ್ಧಿ ಕರಾರು ಪತ್ರ ಹಾಗೂ ವಗೈರೆ ಮಾಡಬಾರದೆಂದು ಈ ಮೂಲಕ ತಿಳಿಯಪಡಿಸಲಾಗಿದೆ. ಒಂದು ವೇಳೆ ಸಾರ್ವಜನಿಕರು ಷೆಡ್ಯೂಲ್ ಸ್ವತ್ತನ್ನು ಖರೀದಿಸಿದಲ್ಲಿ ನನ್ನ ಕಕ್ಷಿದಾರರ ಹಕ್ಕಿಗೆ ಯಾವುದೇ ರೀತಿಯಲ್ಲಿ ಬಾಧಕವಾಗುವುದಿಲ್ಲ ಹಾಗೂ ಮುಂದೆ ಆಗುವ ಎಲ್ಲಾ ತೊಂದರೆಗಳಿಗೆ ನೀವೇ ಜವಾಬ್ದಾರರಾಗಿರುತ್ತೀರಿ ತಿಳಿಯಿರಿ ಎಂದು ಈ ಮೂಲಕ ತಿಳಿಯಪಡಿಸಲಾಗಿದೆ.

**ಷೆಡ್ಯೂಲ್**

1. ದಾವಣಗೆರೆ ಸಿಟಿ, ವಿದ್ಯಾನಗರ, ವಿನಾಯಕ ಬಡಾವಣೆಯಲ್ಲಿ ಬರುವ ಸೈಟ್ ನಂ. 27, ಡೋರ್ ನಂ. 1827/27 ರಲ್ಲಿ ವಿಸ್ತೀರ್ಣ 30'+77'/2 x 50' ಅಡಿಯುಳ್ಳ ಖಾಲಿ ನಿವೇಶನ ಸ್ವತ್ತಿಗೆ ಚಕ್ಕುಬಂಧಿ:-

ಪೂರ್ವಕ್ಕೆ: ಅನಿಲ್ ಕುಮಾರ್ ಇವರ ಸ್ವತ್ತು ಪಶ್ಚಿಮಕ್ಕೆ : ಕೆ.ಸಿ. ಸಿದ್ದೇಶ್ ಇವರ ಸ್ವತ್ತು ಉತ್ತರಕ್ಕೆ: ಬೇರೆಯವರ ಸ್ವತ್ತು ದಕ್ಷಿಣಕ್ಕೆ : ರಸ್ತೆ

**ಎಂ.ಎಸ್ ರಾಜಕುಮಾರ್,** ವಕೀಲರು
**ವಾದಿರಾಜ ಭಟ್ ವೈ.** ವಕೀಲರು
ವಿಳಾಸ: #2609/14, ದಾವಣಗೆರೆ ಒನ್/ಸೂಪರ್ ಮಾರ್ಕೆಟ್ ಹಿಂಭಾಗ, ಎಂಸಿಸಿ 'ಎ' ಬ್ಲಾಕ್ ದಾವಣಗೆರೆ-2. ಮೊ: 94489 06865

## ಮಾನ್ಯ 1ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ

**ಅಸಲು ದಾವಾ ನಂ. 225/2019**

ವಾದಿ : ಶ್ರೀ ಕೆ. ಎಂ. ನೀಲಕಂಠಯ್ಯ - ವಿರುದ್ಧ -
ಪ್ರತಿವಾದಿಗಳು : ಶ್ರೀಮತಿ ಕನಕರತ್ನ, ಮೃತ ವಾರಸುದಾರರು: 1.(ಬಿ) ಶ್ರೀಮತಿ ಸಿಂಧೂಜ ಎಸ್. ಕೋಂ ಗುರುರಾಜ, ವಯಸ್ಸು : ಸುಮಾರು 28 ವರ್ಷ, ವಾಸ : 'ಶಾಲಿನಿ ನಿಲಯ', 3ನೇ ಅಡ್ಡರಸ್ತೆ, ವೀಣಾಪಾಣಿ ಶಾಲೆಯ ಹತ್ತಿರ, ನಿಟ್ಟುವಳ್ಳಿ, ದಾವಣಗೆರೆ.

**ಆದೇಶ 5 ನಿಯಮ 20 ರ ವ್ಯವಹಾರ ಪ್ರಕ್ರಿಯಾ ಸಂಹಿತೆ ಪ್ರಕಾರ 1(ಬಿ)ನೇ ಪ್ರತಿವಾದಿಗೆ ಮಧ್ಯಂತರ ಅರ್ಜಿಯ ನೋಟಿಸ್**

ಈ ಮೇಲ್ಕಂಡ ದಾವೆಯನ್ನು ವಾದಿಯು ಪ್ರತಿವಾದಿ ಶ್ರೀಮತಿ ಕನಕರತ್ನ ಅವರ ವಿರುದ್ಧ ದಾವಾ ಆಸ್ತಿಯ ಬಗ್ಗೆ ಕ್ರಯದ ಕರಾರಿನಂತೆ ನೋಂದಾಯಿತ ಕ್ರಯಪತ್ರವನ್ನು ಬರೆದುಕೊಡುವಂತೆ ನಿರ್ದಿಷ್ಟ ಕರಾರು ನೆರವೇರಿಕೆಗಾಗಿ ಕೋರಿ ಸದರಿ ದಾವೆಯನ್ನು ಸಲ್ಲಿಸಿರುತ್ತಾರೆ. ಸದರಿ ದಾವೆಯಲ್ಲಿ ಪ್ರತಿವಾದಿ ಶ್ರೀಮತಿ ಕನಕರತ್ನ ಇವರು ಮೃತರಾಗಿದ್ದು, ನೀವು ಅವರ ವಾರಸುದಾರರಾಗಿರುವುದರಿಂದ ನಿಮ್ಮನ್ನು ಈ ಪ್ರಕರಣದಲ್ಲಿ ಮೃತ ವಾರಸುದಾರರಾಗಿ ಪಕ್ಷಗಾರರನ್ನಾಗಿ ಮಾಡಲು ವಾದಿ ಅರ್ಜಿಯನ್ನು ಸಲ್ಲಿಸಿದ್ದು, ನೀವು ಅರ್ಜಿಯ ನೋಟಿಸ್ ತೆಗೆದುಕೊಳ್ಳದೇ ಇದ್ದುದರಿಂದ ಪತ್ರಿಕೆ ಪ್ರಕಟಣೆಯ ಮೂಲಕ ಈ ನೋಟಿಸ್ ಜಾರಿ ಮಾಡಲು ಆದೇಶವಾಗಿದ್ದು, ನಿಮ್ಮ ಹಾಜರಾತಿಗಾಗಿ ಘನ ನ್ಯಾಯಾಲಯವು ದಿನಾಂಕ : **24-12-2021** ರಂದು ಮುದ್ದತ್ತು ನಿಗದಿಪಡಿಸಿರುತ್ತದೆ. ಆದ್ದರಿಂದ ಸದರಿ ತಾರೀಖಿನಂದು ನೀವು ಖುದ್ದಾಗಲೀ ಅಥವಾ ನಿಮ್ಮ ವಕೀಲರ ಮೂಲಕವಾಗಲೀ ಮೇಲ್ಕಂಡ ಘನ ನ್ಯಾಯಾಲಯದಲ್ಲಿ **ಬೆಳಗ್ಗೆ 11.00 ಘಂಟೆಗೆ** ಹಾಜರಾಗಿ ನಿಮ್ಮ ತಕರಾರು ಇದ್ದರೆ ಸಲ್ಲಿಸತಕ್ಕದ್ದು. ತಪ್ಪಿದ್ದಲ್ಲಿ ಮೇಲ್ಕಂಡ ದಾವೆಯನ್ನು ನಿಮ್ಮ ವಿರುದ್ಧ ಏಕಪಕ್ಷೀಯವಾಗಿ ತೀರ್ಮಾನ ಮಾಡಲಾಗುವುದು.

ನ್ಯಾಯಾಲಯದ ಮೊಹರು ಹಾಗೂ ನನ್ನ ಸಹಿಯೊಂದಿಗೆ ದಿನಾಂಕ:**16-11-2021**ರಂದು ನೀಡಲಾಗಿದೆ.

ಸಹಿ/- (ಎ.ಎಂ. ಹೆಗಡೆ)
ವಾದಿಗಳ ಪರ ವಕೀಲರು

ನ್ಯಾಯಾಲಯದ ಆದೇಶದ ಮೇರೆಗೆ,
ಸಹಿ/- ಶಿರಸ್ತೇದಾರರು
ಮಾನ್ಯ 1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.

ಸ್ಥಳ : ದಾವಣಗೆರೆ
ದಿನಾಂಕ : 15.11.2021

## ಕರ್ನಾಟಕ ಗ್ರಾಮೀಣ ಬ್ಯಾಂಕ್

(ಸರ್ಕಾರಿ ಸ್ವಾಮ್ಯದ ಷೆಡ್ಯೂಲ್ಡ್ ಬ್ಯಾಂಕ್) ಪ್ರವರ್ತಕರು : ಕೆನರಾ ಬ್ಯಾಂಕ್
ಪ್ರಧಾನ ಕಛೇರಿ : ಸಂಗನಕಲ್ಲು ರಸ್ತೆ, ಗಾಂಧಿನಗರ, ಬಳ್ಳಾರಿ-583 103 (ಕರ್ನಾಟಕ)
ಪ್ರಾದೇಶಿಕ ಕಚೇರಿ : ನಂ.496/66, ಸಂಕೋಳ್ ಪ್ಲಾಜಾ, 2ನೇ ಮಹಡಿ ನಾಗನೂರು ರಸ್ತೆ, ಶಾಮನೂರು, ದಾವಣಗೆರೆ-577 004
ಫೋನ್: 08192 - 223913, 233632 e-mail: rodvg@kgbk.in

### ಚಿನ್ನಾಭರಣಗಳ ಬಹಿರಂಗ ಹರಾಜು

ಈ ಕೆಳಕಂಡ ಮಹನೀಯರು ಕರ್ನಾಟಕ ಗ್ರಾಮೀಣ ಬ್ಯಾಂಕ್‌ನ ಬೇತೂರು ಶಾಖೆಯಲ್ಲಿ ತಮ್ಮ ಚಿನ್ನಾಭರಣ ಆಧಾರದ ಸಾಲ ಪಡೆದಿದ್ದು, ವಾಯಿದೆ ಪ್ರಕಾರ ಸಾಲ ಮರುಪಾವತಿ ಮಾಡದೇ ಇದ್ದ ಕಾರಣ, ಇವರಿಗೆ ರಿಜಿಸ್ಟರ್ಡ್ ಅಂಚೆ ಮುಖಾಂತರ ಸಾಲಮರುಪಾವತಿ ಮಾಡುವಂತೆ ಕೋರಿ ಕಳುಹಿಸಿದ ನೋಟಿಸ್ ಜಾರಿಯಾಗಿರುತ್ತದೆ. ಆದರೂ ಸಾಲ ಮರುಪಾವತಿ ಮಾಡಲು ಯಾವುದೇ ಕ್ರಮ ಕೈಗೊಳ್ಳದೇ ಇರುವುದರಿಂದ, ಅವರಿಗೆ ಈ ಮೂಲಕ ತಿಳಿಸುವುದೇನೆಂದರೆ, ತಾರೀಖು 08-12-2021 ರಂದು ಅಥವಾ ಅದಕ್ಕೆ ಮುಂಚೆ ಬ್ಯಾಂಕಿಗೆ ಭೇಟಿ ಕೊಟ್ಟು ಸಂಪೂರ್ಣ ಹಣ, ಬಡ್ಡಿ ಹಾಗೂ ಇತರೆ ಖರ್ಚುಗಳನ್ನು ಮರುಪಾವತಿ ಮಾಡತಕ್ಕದ್ದು, ಇಲ್ಲವಾದಲ್ಲಿ ತಾವು ಒತ್ತೆ ಇಟ್ಟ ಆಭರಣಗಳನ್ನು ತಾರೀಖು 08-12-2021 ರಂದು ಬೆಳಿಗ್ಗೆ 11.00 ಗಂಟೆಗೆ ಅಥವಾ ಬ್ಯಾಂಕಿಗೆ ಸೂಕ್ತವಾದ ಇನ್ನಾವುದೇ ದಿನದಂದು ನೋಟೀಸು ಕೊಡದೇ ಶಾಖೆಯ ಆವರಣದಲ್ಲಿ ಬಹಿರಂಗವಾಗಿ ಯಾ ಖಾಸಗಿಯಾಗಿ ಹರಾಜು ಮಾಡಲಾಗುವುದು. ಸದರಿ ಹರಾಜಿನಿಂದ ಬಂದ ಮೊತ್ತವು ತಮ್ಮ ಸಾಲವನ್ನು ಸಂಪೂರ್ಣ ತೀರುವಳಿ ಮಾಡಲು ವಿಫಲವಾದಲ್ಲಿ ತಾವು ವೈಯಕ್ತಿಕವಾಗಿ ಹೊಣೆಗಾರರಾಗಿರುತ್ತೀರಿ ಹಾಗೂ ಹರಾಜಿಗೆ ತಗಲುವ ಎಲ್ಲಾ ವೆಚ್ಚಕ್ಕೂ ನೀವೇ ಹೊಣೆಗಾರರೆಂದು ತಿಳಿಯಿರಿ.

**ಶಾಖೆ: ಬೇತೂರು, ದಾವಣಗೆರೆ ತಾಲ್ಲೂಕು, ಮೊ: 8971353643, 7892926203**

| ಕ್ರ. ಸಂ. | ಸಾಲಗಾರರ ಹೆಸರು ಮತ್ತು ವಿಳಾಸ | ಸಾಲದ ಸಂಖ್ಯೆ | ಸಾಲದ ಬಾಬ್ತು + ಬಡ್ಡಿ |
|---|---|---|---|
| 1 | ಶ್ರೀ ರವಿನಾಯ್ಕ ಬಿನ್. ಸಿದ್ದಾನಾಯ್ಕ, ಪುಟಗನಾಳ್, ಬೇತೂರು ಪೋಸ್ಟ್ | 55515302002419 | 84,204-50 |
| 2 | ಶ್ರೀಮತಿ ವಿದ್ಯಾ ಎಂ.ಎಸ್. ಕೋಂ. ಸುಧೀರಾನಂದ ಎಂ.ಎಂ., ಬಿ. ಕಲ್ಪನಹಳ್ಳಿ | 55515302005619 | 24,884-50 |
| 3 | ಶ್ರೀ ನಾಗರಾಜ ಬಿನ್.ತಿಪ್ಪಣ್ಣ, # 146, ಪುಟಗನಾಳ್, ಬೇತೂರು ಪೋಸ್ಟ್ | 40555302013919 | 24,090-50 |
| 4 | ಶ್ರೀ ಶಾಂತಕುಮಾರ ಪಿ. ಬಿನ್. ಯಲ್ಲಪ್ಪ, ಪುಟಗನಾಳ್, ಬೇತೂರು ಪೋಸ್ಟ್ | 40555302019619 | 76,313-00 |
| 5 | ಶ್ರೀಮತಿ ಮಂಜಮ್ಮ ಹೆಚ್. ಕೋಂ. ಶಿವಕುಮಾರ ಜೆ.ಪಿ., ಬೇತೂರು | 40555302025019 | 11,344-50 |
| 6 | ಶ್ರೀ ಪ್ರಕಾಶ ಬಿನ್. ವೀರಪ್ಪ, ಬೇತೂರು ಪೋಸ್ಟ್ | 40555301024619 | 48,952-50 |
| 7 | ಶ್ರೀ ಮಲ್ಲಪ್ಪ ಬಿನ್. ನೀಲಪ್ಪ ಜಕ್ಕವ್ವರ, ಬೇತೂರು | 40555302025919 | 1,50,159-50 |
| 8 | ಶ್ರೀಮತಿ ದುರುಗಮ್ಮ ಕೋಂ. ಅಂಜಿನಪ್ಪ, ಬೇತೂರು | 40555302026419 | 1,05,109-50 |
| 9 | ಶ್ರೀ ಗಂಗಾಧರ್ ಬಿ. ಬಿನ್. ಬಸವರಾಜಪ್ಪ ಕೆ.ಬಿ., ಬಿ. ಕಲ್ಪನಹಳ್ಳಿ, ಬೇತೂರು ಪೋಸ್ಟ್ | 40555302042319 | 30,277-00 |
| 10 | ಶ್ರೀ ಮುಕ್ತಿಯಾರ್ ಅಹಮ್ಮದ್ ಬಿನ್. ನಜೀರ್ ಅಹ್ಮದ್, ಬೂದಾಳ್ ರಸ್ತೆ, ದಾವಣಗೆರೆ. | 40555302000420 | 9,752-50 |
| 11 | ಶ್ರೀ ಹೆಚ್. ಎನ್. ಮಧುಸೂದನ್ ಬಿನ್. ನಾಗಪ್ಪ ಹೆಚ್.ಎಂ., ಭರ್ಮಪ್ಪ ದೇವಸ್ಥಾನದ ಹತ್ತಿರ, ಬೇತೂರು ಪೋಸ್ಟ್ | 40555302006320 | 41,907-50 |
| 12 | ಶ್ರೀಮತಿ ಹನುಮಂತಮ್ಮ ಕೋಂ. ಕರಿಬಸಪ್ಪ, ಬೇತೂರು | 40555302012620 | 51,566-00 |
| 13 | ಶ್ರೀಮತಿ ರತ್ನಮ್ಮ ಕೋಂ. ಮಂಜಪ್ಪ, ಬಿ. ಕಲ್ಪನಹಳ್ಳಿ, ಬೇತೂರು ಪೋಸ್ಟ್ | 40555302022420 | 22,685-50 |
| 14 | ಶ್ರೀ ಬಿ. ಅನಿಲ್‌ಕುಮಾರ್ ಬಿನ್. ಕೆ.ಜಿ. ಬಸವನಗೌಡ, ಬೇತೂರು ಪೋಸ್ಟ್ | 40555302023520 | 72,281-50 |
| 15 | ಶ್ರೀ ನಾಗರಾಜ ಹೆಚ್. ಬಿನ್. ಹನುಮಂತಪ್ಪ, ಬಸಾಪುರ | 40555302027720 | 51,859-00 |
| 16 | ಶ್ರೀ ನಾಗರಾಜ ಹೆಚ್. ಬಿನ್. ಹನುಮಂತಪ್ಪ, ಬಸಾಪುರ | 40555302027820 | 45,839-00 |
| 17 | ಶ್ರೀಮತಿ ಫರೀದಾಬಾನು ಕೋಂ. ಮುಸ್ತಾಫ್, ಬೇತೂರು ಪೋಸ್ಟ್ | 40555302028820 | 1,10,558-00 |
| 18 | ಶ್ರೀ ಬಸವರಾಜ ಬಿ. ಬಿನ್. ಬುಳ್ಳಪ್ಪ, ಬಿ.ಕಲ್ಪನಹಳ್ಳಿ, ಬೇತೂರು ಪೋಸ್ಟ್ | 40555302029220 | 71,888-50 |
| 19 | ಶ್ರೀ ಬಸವರಾಜ ಬಿ. ಬಿನ್.ಬುಳ್ಳಪ್ಪ, ಬಿ.ಕಲ್ಪನಹಳ್ಳಿ, ಬೇತೂರು ಪೋಸ್ಟ್ | 40555302029320 | 93,925-50 |
| 20 | ಶ್ರೀ ಕುಮಾರ ಹೆಚ್. ಬಿನ್. ಪೂಜಾರ್ ಹಾಲಪ್ಪ, ಬೇತೂರು ಪೋಸ್ಟ್ | 40555302031920 | 22,134-50 |
| 21 | ಶ್ರೀ ಸಿದ್ದಲಿಂಗಪ್ಪ ಬಿನ್. ಮಲ್ಲೇಶಪ್ಪ, ಬೇತೂರು ಪೋಸ್ಟ್ | 40555302031320 | 40,857-50 |
| 22 | ಶ್ರೀಮತಿ ಲತಾ ಬಿ.ಎಲ್. ಕೋಂ. ಶಿವಕುಮಾರ ಎಂ.ಎಸ್., ಬೇತೂರು ಪೋಸ್ಟ್ | 40555302032220 | 21,979-50 |
| 23 | ಶ್ರೀಮತಿ ಶಾರದಮ್ಮ ಬಿನ್. ಪರಶುರಾಮಪ್ಪ, ಬೇತೂರು ಪೋಸ್ಟ್ | 40555302032120 | 65,999-50 |
| 24 | ಶ್ರೀ ಶಿವಕುಮಾರ್ ಹೆಚ್. ಬಿನ್. ಎಸ್.ಕೆ. ಹನುಮಂತಪ್ಪ, 393, ಬೇತೂರು ಪೋಸ್ಟ್ | 40555302032320 | 17,428-50 |
| 25 | ಶ್ರೀಮತಿ ಹನುಮಂತಮ್ಮ ಕೋಂ. ಕರಿಬಸಪ್ಪ, ಬೇತೂರು. | 40555302046220 | 32,384-50 |
| 26 | ಶ್ರೀಮತಿ ಹನುಮಂತಮ್ಮ ಕೋಂ. ಕರಿಬಸಪ್ಪ, ಬೇತೂರು. | 40555302046320 | 75,427-50 |
| 27 | ಶ್ರೀ ಬಿ.ಎಸ್. ರೇವಣಸಿದ್ದಪ್ಪ ಬಿನ್. ಶೇಖರಪ್ಪ, 218, ಬಸಾಪುರ ರಸ್ತೆ, ಆನೆಕೊಂಡ, ದಾವಣಗೆರೆ. | 40555302054120 | 36,315-50 |
| 28 | ಶ್ರೀ ಮಂಜುನಾಥ ಎಸ್. ಬಿನ್. ಶಿವಮೂರ್ತಿ, 5ನೇ ಕ್ರಾಸ್, ಬೇತೂರು ಪೋಸ್ಟ್ | 40555302054420 | 61,328-50 |
| 29 | ಶ್ರೀ ಬಿ. ಅನಿಲ್‌ಕುಮಾರ್ ಬಿನ್. ಕೆ.ಜಿ. ಬಸವನಗೌಡ, ಬೇತೂರು ಪೋಸ್ಟ್ | 40555302057220 | 26,632-50 |
| 30 | ಶ್ರೀಮತಿ ಸಿದ್ದಮ್ಮ ಕೋಂ. ನಾಗರಾಜ, 465, ಬೇತೂರು ಪೋಸ್ಟ್ | 40555302006221 | 60,915-50 |
| 31 | ಶ್ರೀ ಪರಮೇಶ್ವರಪ್ಪ ಕೆ.ಎಸ್. ಬಿನ್. ಸಿದ್ದಪ್ಪ, ಬೇತೂರು ಪೋಸ್ಟ್ | 40555302029821 | 2,47,757-50 |
| 32 | ಶ್ರೀ ಬಸವರಾಜಪ್ಪ ಬಿನ್. ಭರ್ಮಪ್ಪ, ಬೇತೂರು ಪೋಸ್ಟ್ | 40555302037821 | 30,159-50 |

ಸ್ಥಳ : ದಾವಣಗೆರೆ
ದಿನಾಂಕ : 18-11-2021

ಸಹಿ/- ಕರ್ನಾಟಕ ಗ್ರಾಮೀಣ ಬ್ಯಾಂಕ್
ಪ್ರಾದೇಶಿಕ ಕಛೇರಿ,ದಾವಣಗೆರೆ.



# ಗುರು ಸ್ಥಾನ ಪಲ್ಲಟ - ಯಾವ ರಾಶಿಗೆ ಏನು ಫಲ



## ದಿನಾಂಕ : 20.11.2021 ಶನಿವಾರದಂದು ರಾತ್ರಿ 11.31ಕ್ಕೆ ಧನಿಷ್ಠಾ ನಕ್ಷತ್ರ ಮೂರನೇ ಚರಣ, ಗುರು ಗ್ರಹವು ಮಕರ ರಾಶಿಯಿಂದ ಕುಂಭ ರಾಶಿಗೆ ಪ್ರವೇಶ

**ವ್ಯಕ್ತಿಯನ್ನು ಶ್ರೀಮಂತ ಮತ್ತು ಗೌರವಾನ್ವಿತರನ್ನಾಗಿ ಮಾಡುವ ಗುರು ಗ್ರಹವು 20 ನವೆಂಬರ್ 2021 ರಂದು ರಾಶಿ ಚಕ್ರವನ್ನು ಬದಲಾಯಿಸಲಿದೆ. ಪ್ರಸ್ತುತ, ಗುರುವು ಶನಿ ಗ್ರಹದ ಅಧಿಪತ್ಯವಿರುವ ಮಕರ ರಾಶಿಯಲ್ಲಿ ಕುಳಿತಿದ್ದು, 20 ರಂದು ಶನಿಯ ಎರಡನೇ ರಾಶಿ ಕುಂಭದಲ್ಲಿ ಸಾಗಲಿದೆ. ಗುರು ಗ್ರಹವು ಕುಂಭ ರಾಶಿಯನ್ನು ಪ್ರವೇಶಿಸುವ ಮೊದಲು ಕೆಲವು ಸ್ಥಳೀಯರ ಜೀವನದಲ್ಲಿ ಧನಾತ್ಮಕತೆಯನ್ನು ತರಬಹುದು. ಕೌಟುಂಬಿಕ ಜೀವನದಲ್ಲಿ ಕೆಲವರಿಗೆ, ವೃತ್ತಿಯಲ್ಲಿ ಮತ್ತೆ ಕೆಲವರಿಗೆ ಆರೋಗ್ಯದ ದೃಷ್ಟಿಯಿಂದ, ಗುರು ಸಂತೋಷದ ಫಲಿತಾಂಶಗಳನ್ನು ಪಡೆಯಬಹುದು.**



**ಮೇಷ ರಾಶಿ :**

ಈ ರಾಶಿಯವರಿಗೆ ಗುರು ಗ್ರಹವು ಲಾಭ ಸ್ಥಾನದಲ್ಲಿ ಅಂದರೆ ಹನ್ನೊಂದನೆ ಮನೆಯಲ್ಲಿ ಸಂಚರಿಸುವುದರಿಂದ ಈ ರಾಶಿಯವರು ತಮ್ಮ ಕೆಲಸ, ಕಾರ್ಯಗಳಲ್ಲಿ ಉತ್ತಮ ಸಾಮರ್ಥ್ಯವನ್ನು ತೋರುವರು. ಪ್ರತಿಯೊಂದನ್ನೂ ಚೆನ್ನಾಗಿ ಆಲೋಚಿಸಿಯೇ ನಿರ್ಧಾರ ತೆಗೆದುಕೊಳ್ಳುವರು. ರಾಜಕಾರಣಿಗಳಾಗಿದ್ದಲ್ಲಿ ಉತ್ತಮ ಸ್ಥಾನಮಾನಗಳು ದೊರೆಯಲಿವೆ. ಕಳೆದು ಹೋಗಿರುವ ಬೆಲೆ ಬಾಳುವ ವಸ್ತುಗಳನ್ನು ಮರಳಿ ಪಡೆಯುವರು. ವಿದ್ಯಾರ್ಥಿಗಳು ಅಧ್ಯಯನದಲ್ಲಿ ಉತ್ತಮ ಫಲಿತಾಂಶವನ್ನು ಪಡೆಯುವುದರ ಜೊತೆಗೆ, ವಿದೇಶದಲ್ಲಿ ಅಧ್ಯಯನ ಮಾಡುವುದಕ್ಕೆ, ಸಕಲ ಸೌಲಭ್ಯಗಳನ್ನು ಪಡೆಯುವರು. ಶಾಸ್ತ್ರಕೋವಿದರಿಗೆ, ವಿದ್ವತ್ಸಭೆಗಳಲ್ಲಿ ಸನ್ಮಾನ, ಗುರು-ಹಿರಿಯರಿಗೆ ವಿಧೇಯರಾಗಿದ್ದು, ಅವರಾಣತಿಯಂತೆ ನಡೆದುಕೊಳ್ಳುವರು. ಹೊಸ ವಾಹನ, ಮನೆ ಅಥವಾ ಆಸ್ತಿ ಕೊಳ್ಳುವ ಯೋಗವಿದೆ. ವೈಯಕ್ತಿಕ ನಡಾವಳಿಯಲ್ಲೂ ಸಾಕಷ್ಟು ಬದಲಾವಣೆ ಕಂಡುಬರಲಿದೆ. ಆರ್ಥಿಕ ಸ್ಥಿತಿಗತಿಯಲ್ಲಿ ಹೆಚ್ಚಿನ ಏರಿಕೆ ಕಂಡುಬರಲಿದೆ. ಮಕ್ಕಳಲ್ಲಿ ನಯ ವಿನಯಗಳು ಹೆಚ್ಚಿ, ನೆಮ್ಮದಿ ಕಾಣುವರು. ಅನೇಕ ಧಾರ್ಮಿಕ ಕಾರ್ಯಗಳಲ್ಲಿ ಮುಕ್ತ ಮನಸ್ಸಿನಿಂದ ಭಾಗವಹಿಸುವರು. ಒಟ್ಟಿನಲ್ಲಿ ಹೇಳಬೇಕೆಂದರೆ ಲಾಭಸ್ಥ ಗುರು ಉತ್ತಮ ಫಲವನ್ನೇ ಕೊಡಲಿದ್ದಾನೆ.




**ವೃಷಭ ರಾಶಿ :**

ದಶಮ ಸ್ಥಾನದಲ್ಲಿ ಗುರು ಗ್ರಹವಿರುವುದರಿಂದ ಈ ರಾಶಿಯವರ ಫಲಾಫಲಗಳನ್ನು ಹೀಗೆ ವಿವೇಚಿಸಬಹುದು. ಇಷ್ಟುದಿನಗಳ ಕಾಲ ಇದ್ದಂತಹ ಆರ್ಥಿಕ ಪರಿಸ್ಥಿತಿಯು ಸಾಕಷ್ಟು ಸುಧಾರಿಸಲಿದ್ದು, ಕೈಯಲ್ಲಿ ಹೆಚ್ಚಿನ ವ್ಯವಹಾರಗಳಿಗೆ ಸಹಾಯವಾಗಲಿದೆ. ಹಳೆಮನೆ ರಿಪೇರಿ, ವಿಶೇಷ ಅಲಂಕಾರದೊಂದಿಗೆ ಶೋಭಿಸಲಿದೆ. ಉದ್ಯಮದಲ್ಲಿ ತಂದೆಯನ್ನು ಮೀರಿಸುವಂತೆ ಮಕ್ಕಳು ಬೆಳೆಯುವರು. ಆದರೆ ಅವರಿಂದಾಗಿ, ಸದಾ ಆತಂಕದಲ್ಲೇ ಕಾಲ ಕಳೆಯಬೇಕಾದೀತು. ಮನೆಗೆ ಬಂದು ಹೋಗುವ ಅತಿಥಿಗಳ ಸಂಖ್ಯೆ ಹೆಚ್ಚು, ಶ್ರೇಷ್ಠ ಸಾಧು, ಸಂತರ ಸಮಾಗಮವಾಗಲಿದ್ದು, ಪುಣ್ಯಾಧಿಕ್ಯ ಸಂಪಾದನೆಯಾಗಲಿದೆ. ಮನೆಯಲ್ಲಿ ಧಾರ್ಮಿಕ ಕಾರ್ಯಗಳು, ಹೋಮ ಹವನಾದಿಗಳು ವಿಶೇಷವಾಗಿ ನಡೆಯಲಿವೆ. ಕೌಟುಂಬಿಕ ನೆಮ್ಮದಿ ಸಾಧಾರಣ. ಅನೇಕ ಸಂಘ-ಸಂಸ್ಥೆಗಳಿಗೆ ದತ್ತಿ ದಾನಗಳು ಸಂದಾಯವಾಗಲಿದೆ. ಚಿತ್ರಕಲಾವಿದರಿಗೆ ಬೇಡಿಕೆ ಹೆಚ್ಚಲಿದೆ. ಸ್ತ್ರೀ ಸೌಖ್ಯ ಹೆಚ್ಚಲಿದ್ದು, ಸಂಸಾರದಲ್ಲಿ ನೆಮ್ಮದಿ, ಸಾಮಾಜಿಕ ಗೌರವ, ವಂಶದ ಕೀರ್ತಿ ವೃದ್ಧಿಸುವುದು. ತೀರ್ಥಕ್ಷೇತ್ರಗಳ ಪರ್ಯಟನೆ, ಸಾಧಕರಿಗೆ ಗುರುವಿನಿಂದ ಉತ್ತಮ ಮಾರ್ಗದರ್ಶನ. ಸ್ನೇಹಿತರ ನೆರವು.



**ಮಿಥುನ ರಾಶಿ :**

ನವಮ ಸ್ಥಾನದಲ್ಲಿ ಗುರುಗ್ರಹದ ಸಂಚಾರ ಆರಂಭವಾಗಲಿದ್ದು, ವಿಶೇಷವಾಗಿ ಧರ್ಮ ಕಾರ್ಯಗಳು ಬಂಧುಗಳ ನೆರವಿನಿಂದ ನಡೆಯಲಿವೆ. ಕಷ್ಟದಲ್ಲಿರುವ ಮಿತ್ರರಿಗೆ, ಸಾಧು, ಸಂತರ ಸೇವೆ ನಿರಂತರವಾಗಿ ನಡೆಯಲಿದೆ. ಸತ್ಯಕ್ಕೋಸ್ಕರ ಎಂತಹವರನ್ನೂ ಕೂಡ ಎದುರಿಸಬಲ್ಲೆನೆಂಬ ಆತ್ಮವಿಶ್ವಾಸ, ನಿಮ್ಮಲ್ಲಿ ಮೂಡಲಿದೆ. ಬಂಧು ಜನರಿಂದ ಸಕಲ ಕಾರ್ಯಗಳಿಗೆ ಸಂಪೂರ್ಣ ಸಹಕಾರ ಸಿಗುವುದು ನಿಶ್ಚಿತ. ಮೇಲಾಧಿಕಾರಿಗಳ ಕೃಪಾಕಟಾಕ್ಷದಿಂದ ನೌಕರಿಯಲ್ಲಿ ಪದೋನ್ನತಿಯೊಂದಿಗೆ ವೇತನದಲ್ಲಿ ಹೆಚ್ಚಳ, ಖಾಸಗಿ ಕಂಪನಿ ನೌಕರರು ಉದ್ಯೋಗದಲ್ಲಿ ಬದಲಾವಣೆ ಬಯಸಿದಲ್ಲಿ ಈಡೇರಲಿದೆ. ಹೊಸಮನೆ ಕಟ್ಟಲು ಹಣಕಾಸು ಸಂಸ್ಥೆಗಳಿಂದ ಆರ್ಥಿಕ ನೆರವು, ಹೆಚ್ಚುತ್ತಿರುವ ಕೆಲಸಕಾರ್ಯಗಳಿಂದಾಗಿ ದೈನಂದಿನ ಕರ್ಮಗಳ ಲೋಪವಾಗಲಿದೆ. ವಿದ್ಯಾರ್ಥಿಗಳು ಉನ್ನತಾಧ್ಯಯನದಲ್ಲಿ ವಿಶೇಷ ಆಸಕ್ತಿ ಹೆಚ್ಚಿ, ಉತ್ತಮ ಫಲಿತಾಂಶ ಪಡೆಯುವರು. ಶಾಸ್ತ್ರಾಭ್ಯಾಸ ಮಾಡಲು ಬಯಸುವವರಿಗೆ ಉತ್ತಮ ಗುರುಗಳು ದೊರೆಯಲಿದ್ದಾರೆ. ಹಣಕಾಸಿಗೆ ಸಂಬಂಧಿಸಿದ ವ್ಯವಹಾರಗಳು ಚೆನ್ನಾಗಿಯೇ ನಡೆಯಲಿವೆ. ಹಳೇ ಸಾಲಗಳನ್ನು ತೀರಿಸಲು, ಉತ್ತಮವಾದ ಸದವಕಾಶವೊಂದು ತಾನಾಗಿಯೇ ಒದಗಿ ಬರಲಿದೆ. ಅವಿವಾಹಿತರಿಗೆ ಕಂಕಣಭಾಗ್ಯ ಇಷ್ಟರಲ್ಲೇ ಕೂಡಿಬರಲಿದೆ.




**ಕರ್ಕಾಟಕ ರಾಶಿ :**

ಈ ರಾಶಿಯವರಿಗೆ ಅಷ್ಟಮ ಸ್ಥಾನದಲ್ಲಿ ಗುರು ಗ್ರಹದ ಸಂಚಾರ ಆರಂಭವಾಗಲಿರುವುದರಿಂದ ಮಾಡುವ ಕೆಲಸಗಳಲ್ಲಿ ತೃಪ್ತಿಯಿಲ್ಲದೆ ಉದಾಸೀನತೆ ತೋರುವರು. ಇವರ ಈ ದೌರ್ಬಲ್ಯವನ್ನು ಎದುರಾಳಿಗಳು ದುರುಪಯೋಗ ಪಡಿಸಿಕೊಳ್ಳುವ ಸಂಭವವಿದೆ. ಅತಿಯಾದ ದುರಭಿಮಾನದಿಂದಾಗಿ ಬರಲಿರುವ ಅತ್ಯುತ್ತಮ ಅವಕಾಶಗಳನ್ನು ಕೈ ಚೆಲ್ಲುವರು. ಗುರು-ಹಿರಿಯರೊಂದಿಗೆ ವಿವೇಚನೆಯಿಲ್ಲದೇ ಮಾತನಾಡುವುದರಿಂದ, ಬಂಧುಗಳೊಂದಿಗೆ ನಿಷ್ಠೂರವಾಗಿ ನಡೆದುಕೊಳ್ಳುವುದರಿಂದ ಎಲ್ಲರಿಂದಲೂ ದೂರವಾಗ ಬೇಕಾದೀತು. ತಂದೆ-ತಾಯಿಗಳೊಂದಿಗೆ ಜಗಳವಾಡಿ ಬೇರೆ ಹೋಗಬಹುದು. ಆಗಿಂದಾಗ್ಗೆ ಕಾಡಬಹುದಾದ ಅನಾರೋಗ್ಯ ಸಮಸ್ಯೆ ಬಹಳ ಕಾಲ ಕಾಡಬಹುದು. ಸುದೀರ್ಘ ಕಾಲದಿಂದ ವಯೋಸಹಜ ರೋಗ ರುಜಿನಗಳಿಂದ ನರಳುತ್ತಿರುವ ವಯೋವೃದ್ಧರು ಅವುಗಳಿಂದ ಮುಕ್ತಿ ಪಡೆಯುವರು. ಅನಾವಶ್ಯಕ ಖರ್ಚುಗಳು ಎದುರಾಗಲಿದ್ದು. ಆರ್ಥಿಕ ಪರಿಸ್ಥಿತಿ ಬಿಗಡಾಯಿಸಬಹುದು, ಕೈಮೀರಿ ಹೋದ ಮೇಲೆ ತಮ್ಮ ಕೃತ್ಯಗಳಿಗೆ ಪಶ್ಚಾತ್ತಾಪ ಪಡುವರು. ಸದ್ಯದ ಪರಿಸ್ಥಿತಿ ಹೀಗಿರುವುದ ರಿಂದ ಸಾಧ್ಯವಾದಷ್ಟು ಗುರು ಚರಿತ್ರೆ, ವಿಷ್ಣು ಸಹಸ್ರನಾಮ ಪಾರಾಯಣ ಮತ್ತು ಗುರು ಜಪ ಮಾಡುವುದು ಲೇಸು.



**ಸಿಂಹ ರಾಶಿ :**

ಸಪ್ತಮ ಭಾವದಲ್ಲಿ ಗುರುವಿನ ಸಂಚಾರ ಆರಂಭವಾಗಲಿದ್ದು, ವಿದ್ಯಾರ್ಥಿಗಳು ಅಧ್ಯಯನದಲ್ಲಿ ಹೆಚ್ಚಿನ ಶ್ರದ್ಧೆ ತೋರುವರು. ಅಧ್ಯಾತ್ಮಿಕ ರಂಗದಲ್ಲಿ ಶಾಸ್ತ್ರಾಧ್ಯಯನದಲ್ಲಿ ತೊಡಗಿಕೊಂಡವರಿಗೆ ಮಠಮಾನ್ಯಗಳಿಂದ ಗೌರವ, ಆದರೆ ವಿದ್ಯೆ ವಿನಯಕ್ಕೆ ಕಾರಣವಾಗಬೇಕೇ ವಿನಃ ಅಹಂಕಾರಕ್ಕಲ್ಲ ಎಂಬುದರ ಎಚ್ಚರವಿದ್ದರೆ ಉತ್ತಮ. ಹಲವಾರು ಮೂಲಗಳಿಂದ ಹಣಕಾಸು ಹರಿದುಬರಲಿದ್ದು, ಅದರಿಂದಾಗಿ ಅನೇಕಾರ್ಥಿಕ ಸಮಸ್ಯೆಗಳು ಬಗೆಹರಿಯಲಿವೆ. ಹಳೇ ಸಾಲಗಳನ್ನು ತೀರಿಸಿ, ಸಂತೃಪ್ತ ಭಾವನೆ ಪಡೆಯುವಿರಿ. ಕೌಟುಂಬಿಕ ಸುಖ ಅತ್ಯಲ್ಪವಾದರೂ ಕೂಡ, ವಂಶದ ಹಿರಿಯರೂ ಕೂಡ ಅವರ ಮಾತಿಗೆ ಬೆಲೆ ಕೊಡುವರು. ನವದಂಪತಿಗಳಲ್ಲಿ ಅನ್ಯೋನ್ಯತೆ ಹೆಚ್ಚಲಿದೆ. ಹೆಚ್ಚುಹೆಚ್ಚು ದೇವತಾಕಾರ್ಯಗಳು ಮನೆಯಲ್ಲಿ ನಡೆಯಲಿದ್ದು, ಪುಣ್ಯ ಸಂಪಾದನೆ ಹೆಚ್ಚಲಿದೆ. ಸಿದ್ಧಿ ಕ್ಷೇತ್ರದಲ್ಲಿರುವವರು ವಿಶೇಷ ಜಪತಪಾನುಷ್ಠಾನದಲ್ಲಿ ತೊಡಗುವರು. ಮಕ್ಕಳ ನಡೆ ನುಡಿಯಲ್ಲಿ ವಿನಯವಂತಿಕೆ ಕಂಡುಬರಲಿದೆ. ಸಾಹಿತಿಗಳಿಗೆ ಉತ್ತಮ ದಿನಗಳು. ವ್ಯಾಪಾರ ವ್ಯವಹಾರಗಳಿಗಿದ್ದ ಕಾನೂನಿನ ತೊಡಕುಗಳು ಪರಿಹಾರವಾಗಲಿದ್ದು, ಎಲ್ಲವೂ ಸುಸೂತ್ರವಾಗಿ ನಡೆದುಕೊಂಡು ಹೋಗಲಿವೆ. ಒಟ್ಟಿನಲ್ಲಿ ಅತ್ಯುತ್ತಮ ಸಮಯ.



**ಕನ್ಯಾ ರಾಶಿ:**

ಈ ರಾಶಿಯವರಿಗೆ ಷಷ್ಟಭಾವದಲ್ಲಿ ಗುರುಗ್ರಹದ ಸಂಚಾರವಾಗಲಿದ್ದು, ಅನೇಕ ಶತ್ರುಗಳನ್ನು ತಾವೇ ಹುಟ್ಟುಹಾಕಿಕೊಳ್ಳುವರು, ಎಷ್ಟೇ ಬಲಹೀನಾಗಿದ್ದರೂ ಕೂಡ, ಶತ್ರುಗಳನ್ನು ಮಣಿಸಬಲ್ಲವರಾಗಿರುತ್ತಾರೆ. ರಕ್ಷಣಾ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುವವರಿಗೆ ತಮ್ಮ ಬಲ ಪರಾಕ್ರಮ ತೋರುವ ಸದಾವಕಾಶ ದೊರೆಯಲಿದೆ. ಹಸು, ಎಮ್ಮೆ ಮೊದಲಾದ ಪಶುಸಂಪತ್ತು ಬೆಳೆಯಲಿದೆ. ಮನೆಯಲ್ಲಿ ತಾಯಿಯ ಅನಾರೋಗ್ಯ ಸಮಸ್ಯೆ ಚಿಂತೆಗೀಡು ಮಾಡಲಿದೆ. ತವರು ಮನೆ ಆಸ್ತಿಗೆ ಸಂಬಂಧಪಟ್ಟಂತೆ ಸೋದರ ಮಾವನಿಂದ ಕಾನೂನಾತ್ಮಕವಾದ ಕಿರುಕುಳ ಅನುಭವಿಸಬೇಕಾದೀತು. ಹೆಗಲೇರಲಿರುವ ಕೀರ್ತಿ ಶನಿ, ದುಹಂಕಾರಕ್ಕೆ ಕಾರಣವಾಗಬಹುದು. ಅತ್ಯುತ್ಸಾಹದಿಂದ ಆರಂಭಿಸಿದ್ದ ಕಾರ್ಯಗಳಲ್ಲಿ ಅನೇಕ ತೊಡಕುಗಳು. ಔಷಧಿ ಸಂಶೋಧನಾ ರಂಗದಲ್ಲಿರುವವರು ಮಹತ್ತರ ಸಾಧನೆ ಮಾಡಲಿದ್ದಾರೆ. ಸಂಗೀತಗಾರರು ಆ ಶಾಸ್ತ್ರಕ್ಕೆ ಸಂಬಂಧಪಟ್ಟ ಅಧ್ಯಯನದಲ್ಲಿ ವಿಶೇಷವಾಗಿ ತೊಡಗಿಕೊಳ್ಳುವರು. ಸರ್ಕಾರಿ ನೌಕರರು, ತಾವು ಮಾಡದಿರುವ ತಪ್ಪಿಗೆ ಶಿಕ್ಷೆಯನ್ನು ಅನುಭವಿಸುವುದರೊಂದಿಗೆ ದೂರದೂರುಗಳಿಗೆ ವರ್ಗವಾಗಿ ಹೋಗಬೇಕಾದೀತು. ಮಕ್ಕಳ ವಿದ್ಯಾಭ್ಯಾಸದಲ್ಲಿ ಆರಂಭಿಕ ತೊಡಕಿದ್ದರೂ ಕ್ರಮೇಣ ಅದು ಸರಿಹೋಗಲಿದೆ. ಒಟ್ಟಿನಲ್ಲಿ ದಿನಗಳು ಸಾಧಾರಣ.



**ತುಲಾ ರಾಶಿ:**

ಪಂಚಮಭಾವದಲ್ಲಿ ಶುಭ ಗ್ರಹವಾದ ಗುರುವಿನ ಸಂಚಾರವಾಗಲಿದ್ದು, ಆಚಾರ, ವಿಚಾರಗಳಲ್ಲಿ ವಿಶೇಷ ಆಸಕ್ತಿ ಮೂಡಲಿದೆ. ಹೆಚ್ಚಲಿರುವ ಜಪತಪಾನುಷ್ಠಾಗಳು ಉತ್ತಮ ಕಾರ್ಯಗಳಿಗೆ ನೆರವಾಗಲಿವೆ. ಸಂತಾನಾಪೇಕ್ಷಿಗಳ ಬಯಕೆ ಈ ಬಾರಿ ಖಂಡಿತಾ ನೆರವೇರಲಿದೆ. ವಾಹನಗಳನ್ನು ಖರೀದಿಮಾಡುವಾಗ ತುಸು ಎಚ್ಚರದಿಂದಿರುವುದು ಉತ್ತಮ. ಗಳಿಸಿದ ಆಸ್ತಿ ಹೆಚ್ಚಳವಾಗಲಿದ್ದು, ಜೊತೆಗೆ ಸಂಪಾದನೆಯೂ ಹೆಚ್ಚಲಿದೆ. ಉಳಿತಾಯಕ್ಕೆ ಇದು ಸಕಾಲ. ಕಿರಿಯರು ಆಡುವ ಮಾತಿನಲ್ಲಿ ನಯವಿನಯ ಕಂಡುಬರುವುದು. ವ್ಯಾಪಾರವ್ಯವಹಾರದಲ್ಲಿ ನೀವು ತೋರುವ ಊಹಾಪೋಹಗಳು, ಸರಿಯಾದ ದಾರಿಯಲ್ಲಿ ಸಾಗಲಿವೆ. ಚಿಕ್ಕಮಕ್ಕಳ ಕೈಬರವಣಿಗೆ ಸುಧಾರಿಸಲಿದೆ. ಹಿಡಿದ ಕಾರ್ಯಗಳೆಲ್ಲವೂ ಯಶಸ್ವಿಯಾಗಲಿವೆ. ಸ್ನೇಹಿತರೊಂದಿಗಿದ್ದ ಭಿನ್ನಾಭಿಪ್ರಾಯಗಳು ದೂರವಾಗುವವು. ದುಗುಡಗೊಂಡ ಮನಸ್ಸು ತಿಳಿಯಾಗಲಿದ್ದು, ಬಂಧುಮಿತ್ರರೊಂದಿಗೆ ಸೌಹಾರ್ದತೆಯಿಂದ ನಡೆದುಕೊಳ್ಳುವಿರಿ. ಸಾಧು ಸಜ್ಜನರು, ವಿಶೇಷವಾದ ಸಾಮಾಜಿಕ ಸನ್ಮಾನ ಪಡೆಯುವರು. ಹೊಸಮನೆ ಕಟ್ಟಲು ಎಲ್ಲರಿಂದಲೂ ಎಲ್ಲಾ ರೀತಿಯ ಸಹಾಯ, ಸಹಕಾರ ಸಿಗಲಿದೆ.ಯುವಕರು ಉದ್ಯೋಗ ಪಡೆಯುವುದರಲ್ಲಿ ತುಸು ವಿಳಂಬವಾದರೂ ಮುಂದೆ ಉತ್ತಮ ವೇತನದ ನೌಕರಿ ದೊರೆಯಲಿದೆ. ಒಟ್ಟಿನಲ್ಲಿ ಉತ್ತಮ ದಿನಗಳು.



**ವೃಶ್ಚಿಕ ರಾಶಿ :**

ಈ ರಾಶಿಯವರಿಗೆ ಗುರುವು ಚತುರ್ಥಭಾವದಲ್ಲಿ ಸಂಚರಿಸುವವನಾಗಿದ್ದು, ಮನೆಯಲ್ಲಿ ನಿರಂತರವಾಗಿ ದೇವತಾ ಸ್ತೋತ್ರಗಳು ಕೇಳಿಬರಲಿವೆ. ನಿತ್ಯವೂ ದೊಡ್ಡದೊಡ್ಡ ಶ್ರೀಮಂತರ ಹಾಗು ಪ್ರಭಾವಿ ವ್ಯಕ್ತಿಗಳ ವಾಹನಗಳು ಮನೆಯ ಮುಂದೆ ಹಾದು ಹೋಗಲಿವೆ. ಗೋವು ಮೊದಲಾದ ಪಶುಗಳ ಸಂಚಾರದಿಂದ ವಾತಾವರಣ ಪರಿಶುದ್ಧತೆಯ ಪ್ರಭಾವಳಿಯನ್ನೇ ಸೃಷ್ಟಿಸಲಿದೆ. ಹಿತಶತ್ರುಗಳು ನಿಮ್ಮ ದಾಸರಾಗಿ ಶರಣಾಗುವರು. ಸಮಾಜದಿಂದ ಅನೇಕ ರೀತಿಯಲ್ಲಿ ಅನೇಕ ಕಡೆ ಮಾನಸನ್ಮಾನಗಳಾಗಲಿವೆ. ರಾಜಕೀಯವಾಗಿ ಬಲಿಷ್ಠರಾದವರು ನಿಮ್ಮ ಒಂದು ಇಶಾರೆಯಿಂದಲೇ ಎಲ್ಲಾ ಕೆಲಸಗಳನ್ನು ಮಾಡಿಕೊಡುವರು. ಹಣಕಾಸಿನ ಮೂಲಗಳು ಹೆಚ್ಚಲಿದ್ದು, ಬಂಧುಗಳಿಗೆ ನೆರವಾಗುವಿರಿ. ಹೊಸ ವಾಹನ ಖರೀದಿ ಜೋರಾಗಿಯೇ ನಡೆಯಲಿದೆ. ಹಿರಿಯರಿಂದ ಬರಬೇಕಾಗಿರುವ ಆಸ್ತಿಯಲ್ಲಿ ದೊಡ್ಡ ಪಾಲೇ ನಿಮಗೆ ದೊರಕಲಿದೆ. ಮನೆಯಲ್ಲಿ ಸುಖ-ಸಂತೋಷಗಳು ಸಮೃದ್ಧವಾಗಿ ನೆಲೆಸಲಿವೆ. ಮಕ್ಕಳ ವಿದ್ಯಾಭ್ಯಾಸದಲ್ಲಿದ್ದ ಅಸ್ಥಿರತೆ ದೂರವಾಗಿ, ಮನಸ್ಸಿಗೆ ನೆಮ್ಮದಿ ಮೂಡಲಿದೆ. ಇಷ್ಟೆಲ್ಲಾ ಇದ್ದರೂ ಕೂಡ ನೀವು ನಿಮ್ಮ ಮನಸ್ಸಿನ ಆಲೋಚನೆಗಳನ್ನು ಬೇರೆಯವರಿಗೆ ಬಿಟ್ಟು ಕೊಡದೆ ಗೌಪ್ಯವನ್ನು ಕಾಪಾಡಿಕೊಳ್ಳಲು ಹವಣಿಸುವಿರಿ. ಆತ್ಮವಿಶ್ವಾಸ ಒಳ್ಳೆಯದೇ ಆದರೆ ಅದು ಅತಿಯಾಗದಂತೆ ಎಚ್ಚರವಹಿಸುವುದು ಉತ್ತಮ.



**ಧನುರ್ ರಾಶಿ:**

ಈ ರಾಶಿಯವರಿಗೆ ತೃತೀಯ ಭಾವದಲ್ಲಿ ಗುರುವಿನ ಸಂಚಾರ ಆರಂಭವಾಗಲಿದ್ದು, ಈ ಸಂದರ್ಭದಲ್ಲಿ ನೀವು ಎಷ್ಟೇ ಸಂಪಾದನೆ ಮಾಡಿದರೂ ಕೂಡ ಜಿಪುಣತನ ಹೋಗುವುದಿಲ್ಲ. ಮಡದಿ, ಮಕ್ಕಳ ಮೇಲೆ ಪ್ರೀತಿಯಿದ್ದರೂ ಕೂಡ ಖರ್ಚಿನ ಬಾಬ್ತು ಬಂದಾಗ ಅಥವಾ ಅವರು ಕೋರಿಕೆಗಳನ್ನು ಮುಂದಿಟ್ಟಾಗ ಅದಕ್ಕೆ ವಿರುದ್ಧವಾಗಿ ವರ್ತಿಸುವಿರಿ. ಬಂಧು ವರ್ಗದವರೊಂದಿಗೆ ನಿಷ್ಠೂರವಾಗಿ ನಡೆದುಕೊಳ್ಳುವಿರಿ. ಶ್ವಪಚತನವು ಮೈಗೂಡಲಿದ್ದು. ಆಚಾರ-ವಿಚಾಗಳಲ್ಲಿ ಉದಾಸೀನತೆಯುಂಟಾಗಲಿದೆ. ಯಾರು ಎಷ್ಟೇ ಉಪಕಾರ ಮಾಡಿದರೂ, ಅವರಿಗೇ ಕೃತಘ್ನತೆ ತೋರುವಿರಿ. ಸ್ನೇಹಿತರೊಂದಿಗೆ ವಿನಾಕಾರಣ ಕಲಹ, ವಾಗ್ವಾದಗಳು ಬೇರೆಯವರಿಗೆ ಬೇಸರ ತರಲಿವೆ. ಅದೃಷ್ಟವು ಮನೆಯ ಬಾಗಿಲಿನವರೆಗೆ ಬಂದರೂ ಕೂಡ, ಅದು ನಿಮ್ಮ ಮನೋಚಾಂಚಲ್ಯದಿಂದಾಗಿ ಬೇರೆಯವರ ಪಾಲಾಗಬಹುದು. ರಾಜಕಾರಣಿಗಳಿಗೆ ಆಕಸ್ಮಿಕವೋ ಎಂಬಂತೆ ರಾಜಕೀಯ ಲಾಭವಾಗಲಿದೆ. ಇವರಾಡುವ ಹುಚ್ಚಾಟಗಳನ್ನು ಇಷ್ಟವಿಲ್ಲದೇ ಇದ್ದರೂ, ಸಹಿಸಲೇ ಬೇಕಾದ ಅನಿವಾರ್ಯತೆ ಉಂಟಾಗಲಿದೆ. ಇಷ್ಟೆಲ್ಲಾ ಇದ್ದರೂ ಕೂಡ ಇವರ ಬುದ್ಧಿವಂತಿಕೆಗೆ ಪ್ರತಿಯೊಬ್ಬರೂ ತಲೆದೂಗುವರು ಮತ್ತು ಇವರ ಆತಿಥ್ಯಕ್ಕೆ ಮರುಳಾಗದವರೇ ಇಲ್ಲ. ಅಗ್ನಿಮಾಂದ್ಯಾದಿ ಆರೋಗ್ಯ ಸಮಸ್ಯೆ ಇವರನ್ನು ಕಾಡಲಿದೆ.



**ಮಕರ ರಾಶಿ :**

ಗುರುವು ದ್ವಿತೀಯ ಅಂದರೆ ಧನ-ಭಾವದಲ್ಲಿ ಗುರುವಿನ ಸಂಚಾರ ಆರಂಭವಾಗಲಿದ್ದು, ಈ ರಾಶಿಯವರು ಸಾಹಿತಿಗಳಾಗಿದ್ದಲ್ಲಿ ಉತ್ತಮ ಕೃತಿಗಳು ಇವರಿಂದ ರಚನೆಯಾಗಲಿವೆ. ಅವಕ್ಕೆ ಪ್ರಶಸ್ತಿಯೂ ಸಿಗಲಿದೆ. ಪ್ರತಿಯೊಬ್ಬರನ್ನೂ ಮಾತಿನಲ್ಲಿ ದಂಡಿಸುವರು. ಮಾತ್ರವಲ್ಲದೇ, ತಮ್ಮ ವಾಚಾಳಿತನದಿಂದ ಬೇರೆಯವರನ್ನು ಮಾತಿನಲ್ಲಿ ಕಟ್ಟಿಹಾಕುವರು. ಪರಸ್ತ್ರೀಯರ ವಿಚಾರದಲ್ಲಿ ಅನಾವಶ್ಯಕ ಕುತೂಹಲ ತೋರುವರು. ಇಷ್ಟೆಲ್ಲಾ ಇದ್ದರೂ ಪುಕ್ಕಲುತನ ಸದಾ ಇವರನ್ನು ಕಾಡಲಿದೆ. ಕಂಡವರ ಮಕ್ಕಳನ್ನು ಬಾವಿಗೆ ತಳ್ಳಿ ಆಳ ನೋಡುವ ಚಟ ಇವರದು. ಹಣ ಸಂಪಾದನೆಗಾಗಿ ಹಲವು ರೀತಿಯಲ್ಲಿ ಕಷ್ಟಪಡುವರು. ಆದರೂ ಸಂಪಾದನೆ ಕಷ್ಟವೇ. ವಿದ್ಯಾರ್ಥಿಗಳು ಓದಿನಲ್ಲಿ ಸಾಕಷ್ಟು ಪ್ರಗತಿ ಸಾಧಿಸುವರು. ಅಜಾತಶತ್ರುವಿನಂತಿರುವ ಇವರಿಗೆ ಪ್ರತಿಯೊಬ್ಬರೂ, ಸ್ಪರ್ಧೆಗೆ ಬಿದ್ದವರಂತೆ ಸಹಾಯ ಮಾಡುವರು.ಮಧ್ಯಂತರದಲ್ಲಿ ಅಧ್ಯಾತ್ಮದ ಕಡೆ ತಿರುಗುವ ಇವರಿಗೆ ಉತ್ತಮ ಗುರುವಿನ ನೆರವು ಸಿಗಲಿದೆ. ಪಾಠ-ಪ್ರವಚನಗಳು ನಿರಂತರವಾಗಿ ನಡೆಯಲಿವೆ. ಆದಾಯದ ಮೂಲಗಳು ಹೆಚ್ಚಲಿದ್ದು, ಹೊಸ ಯೋಜನೆಗಳಿಗೆ ಪೂರಕವಾಗಲಿದೆ. ವ್ಯಾಪಾರ ವ್ಯವಹಾರಗಳಲ್ಲಿ ಪಾಲುದಾರರು ನಿಮ್ಮ ಮಾತನ್ನು ಬೆಂಬಲಿಸುವರು. ಅತಿಯಾದ ತಿರುಗಾಟ ಆರೋಗ್ಯದ ಮೇಲೆ ಅಡ್ಡಪರಿಣಾಮ ಬೀರದಂತೆ ಎಚ್ಚರ ವಹಿಸಿ. ಗುರು ಸೇವೆ ಉತ್ತಮ.



**ಕುಂಭ ರಾಶಿ :**

ಗುರು ಗ್ರಹವು ತನುಭಾವದಲ್ಲಿ ಸಂಚಾರ ಮಾಡಲಿದ್ದು, ಈ ರಾಶಿಯವರಿಗೆ ಅತ್ಯುತ್ತಮ ದಿನಗಳೆಂದೇ ಹೇಳಬಹುದು.ಅರ್ಧಕ್ಕೇ ನಿಂತುಹೋಗಿದ್ದ ವಿದ್ಯಾಭ್ಯಾಸವನ್ನು ಮತ್ತೆ ಮುಂದುವರೆಸಲು ಇದು ಸಕಾಲವಾಗಿದೆ. ಸರ್ಕಾರಿ ನೌಕರರು ಮೇಲಾಧಿಕಾರಿಗಳ ಇಂಗಿತರಾಗಿ ಅದಕ್ಕೆ ತಕ್ಕಂತೆ ಕೆಲಸ ಮಾಡುವರು. ಪರರು ಮಾಡಿರುವ ಉಪಕಾರವನ್ನು ಸದಾ ಸ್ಮರಿಸುತ್ತಾ ಅವರಿಗೆ ಕೃತಜ್ಞರಾಗಿರುವರು. ಕಷ್ಟದಲ್ಲಿರುವವರಿಗೆ ಶಕ್ತಿಮೀರಿ ನೆರವಾಗುವರು. ಇದ್ದುದರಲ್ಲೇ ನೆಮ್ಮದಿಯನ್ನು ಕಾಣುವ ಇವರು ನಿಶ್ಚಿಂತ ಪುರುಷರೇ ಸರಿ. ತಮ್ಮಲ್ಲಿ ಎಷ್ಟೇ ಪಾಂಡಿತ್ಯವಿದ್ದರೂ, ವಿನಯವಂತಿಕೆ ಮೈಗೂಡಿಸಿ ಕೊಂಡಿರುತ್ತಾರೆ. ಧರ್ಮ ಕಾರ್ಯಗಳಿಗಾಗಿ ತಮ್ಮ ಸಂಪಾದನೆಯಲ್ಲದೆ ಉಳಿತಾಯದ ಹಣವನ್ನೂ ಖರ್ಚು ಮಾಡಲು ಹಿಂದುಮುಂದು ನೋಡುವುದಿಲ್ಲ. ಆತ್ಮಗೌರವದಿಂದ ಬದುಕಲು ಯತ್ನಿಸುವ ಇವರಿಗೆ, ಸಾಮಾಜಿಕ ಗೌರವಗಳು ಹೆಚ್ಚಲಿವೆ, ಸಂವಾದ ಪ್ರಿಯರಾದ ಇವರಿಗೆ ಉತ್ತಮ ವಾಗ್ಮಿಗಳ ಸ್ನೇಹ ದೊರೆಯಲಿದೆ. ಬ್ಯಾಂಕ್ ನೌಕರರಿಗೆ ಒತ್ತಡದ ವಾತಾವರಣದಲ್ಲಿ ನಿರ್ವಹಿಸುವ ಕೆಲಸಗಳಿಂದಾಗಿ ಮಾನಸಿಕ ಖಿನ್ನತೆಗೆ ಒಳಗಾಗುವರು. ಬಂಧುಗಳಿಗೆ ನೀವು ನೀಡಲಿರುವ ಸಲಹೆ ಸಕಾಲಿಕವಾಗಿ ನೆರವಾಗಲಿದೆ. ಅತಿಥಿಗಳ ಸತ್ಕಾರ ವಿಶೇಷವಾಗಿ ನಡೆಯಲಿದೆ.



**ಮೀನ ರಾಶಿ:**

ಗುರು ಗ್ರಹವು ಈ ರಾಶಿಯವರಿಗೆ ವ್ಯಯ ಸ್ಥಾನದಲ್ಲಿ ಅಂದರೆ ಹನ್ನೆರಡನೇ ಮನೆಯಲ್ಲಿ ಸಂಚರಿಸುವುದರಿಂದ ಅನೇಕ ವಿಧವಾದ ಚಿಂತೆ, ತಾಪತ್ರಯ, ವಿನಾಕಾರಣ ಉದ್ವೇಗಕ್ಕೆ ಒಳಗಾಗುವರು. ಹಲವು ವಿಚಾರಗಳಲ್ಲಿ ಸಾಕಷ್ಟುಗೊಂದಲಕ್ಕೆ ಒಳಗಾಗುವುದಲ್ಲದೇ, ಹಣಕಾಸುಗಳು ದುರ್ವ್ಯಯಕ್ಕೆ ಖರ್ಚಾಗಲಿವೆ. ಆರಂಭಿಸಿರುವ ಕಾರ್ಯಗಳಲ್ಲಿ ಮಂದಗತಿಯಲ್ಲದೇ, ಸಾಕಷ್ಟು ನಷ್ಟವನ್ನೂ ಭರಿಸಬೇಕಾದೀತು. ಬುದ್ಧಿ, ಯಶಸ್ಸು, ವಿಧಿ ಈ ಮೂರಕ್ಕೂ, ತದ್ವಿರುದ್ಧ ಗತಿಯುಂಟಾಗಲಿದೆ. ಪರರ ಸ್ವತ್ತಿಗೆ ಆಸೆಪಡುವ ಬುದ್ಧಿಯುಂಟಾಗಲಿದೆ. ಪ್ರತಿಯೊಂದಕ್ಕೂ ಪರಾಶ್ರಯ ಅನಿವಾರ್ಯವಾಗಿದೆ. ಮತ್ತೊಬ್ಬರಿಗೆ ತೊಂದರೆ ಕೊಡುವುದರಲ್ಲಿ ನಿಷ್ಣಾತರಾಗುವರು. ನೀಚರ ಸಹವಾಸದಲ್ಲಿ ಹಿತ ಕಾಣುವುದಲ್ಲದೇ, ಅವರ ಮಾತುಗಳೇ ಇವರಿಗೆ ವೇದವಾಕ್ಯವಾಗಲಿವೆ. ವೃಥಾ ತಿರುಗಾಟ, ಆರೋಗ್ಯದ ಮೇಲೆ ಅಡ್ಡಪರಿಣಾಮ ಬೀರಲಿದೆ. ವಿದ್ಯಾರ್ಥಿಗಳು ಆಲಸ್ಯವನ್ನು ಮೈಗೂಡಿಸಿಕೊಳ್ಳಬಹುದು. ಸರ್ಕಾರಿ ನೌಕರರು ತಮ್ಮ ಕರ್ತವ್ಯವನ್ನು ಅಲಕ್ಷಿಸಿದರೆ ಮಾಡದ ತಪ್ಪಿಗೆ ಕಠಿಣ ಶಿಕ್ಷೆ ಅನುಭವಿಸಬೇಕಾದೀತು. ಈ ರೀತಿಯಾಗಿ ಅನಿಷ್ಟ ಫಲಗಳೇ ಹೆಚ್ಚಾಗಿ ಕಂಡುಬರುವುದರಿಂದ, ಸಾಕಷ್ಟು ಪುಣ್ಯ ಸಂಪಾದನೆಗೆ ಪ್ರಯತ್ನಿಸಬೇಕು, ದುರ್ಗಾರಾಧನೆ, ವಿಷ್ಣುಸಹಸ್ರನಾಮ ಪಠಣ ಮೊದಲಾದವುಗಳಿಂದ, ಕನಿಷ್ಟ ಅನಿಷ್ಟಗಳುಂಟಾಗಿ ಕಷ್ಟಗಳು ಪರಿಹಾರವಾಗಬಹುದು.

**ವಿ.ಸೂ : ಮೇಲ್ಕಂಡ ದ್ವಾದಶ ರಾಶಿಗಳ ಫಲಾಫಲಗಳ ವಿಮರ್ಶೆಯು ಸರ್ವೇಸಾಮಾನ್ಯವಾಗಿದ್ದು, ಅವರವರ ಜಾತಕಗಳ ದಶಾಭುಕ್ತಿಗೆ ಅನುಗುಣವಾಗಿ ಬದಲಾಗುವ ಸಂಭವವಿದ್ದು, ನಿಮ್ಮ ವಿಶ್ವಸನೀಯ ಜ್ಯೋತಿಷ್ಕರಲ್ಲಿ ವಿಶೇಷ ಫಲಗಳನ್ನು ಕೇಳಿ ತಿಳಿದುಕೊಳ್ಳಿ.**

**- ಜಯತೀರ್ಥಾಚಾರ್ ವಡೇರ್**
ದಾವಣಗೆರೆ.
94486 66678

# 'ಶ್ರೀ ಮಹರ್ಷಿ ವಾಲ್ಮೀಕಿ ವೃತ್ತ' ಹೊಸ ನಾಮಫಲಕ ಅಳವಡಿಕೆ



ಮಲೇಬೆನ್ನೂರು, ನ. 18- ಭಾನುವಳ್ಳಿ ಗ್ರಾಮದ ಏಕಲವ್ಯ ಯುವಕ ಸಂಘದ ವತಿಯಿಂದ ವಾಲ್ಮೀಕಿ ಜಯಂತಿಯ

**ಮಲೇಬೆನ್ನೂರು**

ಪ್ರಯುಕ್ತ ಭಾನುವಳ್ಳಿ ಗ್ರಾಮದ ಮದಕರಿನಾಯಕ ವೃತ್ತದ ಬಳಿ ಇರುವ ಹಳೆ ನಾಮಫಲಕವನ್ನು ತೆರವುಗೊಳಿಸಿ ಆದಿಕವಿ 'ಶ್ರೀ ಮಹರ್ಷಿ ವಾಲ್ಮೀಕಿ ವೃತ್ತ' ಎಂಬ ಹೊಸ ನಾಮಫಲಕವನ್ನು ಅಳವಡಿಸಲಾಯಿತು.

ಈ ಸಂದರ್ಭದಲ್ಲಿ ಗ್ರಾ.ಪಂ. ಅಧ್ಯಕ್ಷೆ ನೇತ್ರಾವತಿ ಕೊಟ್ರೇಶ್, ಉಪಾಧ್ಯಕ್ಷ ಕೆ. ಚಂದ್ರಪ್ಪ, ಸದಸ್ಯರಾದ ಟಿ.ಪಿ. ಧನ್ಯಕುಮಾರ್, ಶಿವರಾಜ್, ಬಿ.ಚಂದ್ರಪ್ಪ, ಮಂಜುಳ ವೀರೇಶ್, ಗಿರಿಜಮ್ಮ ಜಯಪ್ಪ, ಮಹೇಶ್ವರಪ್ಪ ಮತ್ತು ಸಮಾಜದ ಮುಖಂಡರಾದ ನಿವೃತ್ತ ಶಿಕ್ಷಕರಾದ ಪುಟ್ಟಪ್ಪ, ಟಿ.ಆರ್.ಮಹೇಶ್ವರಪ್ಪ, ರಂಗನಾಥ್ ದೊಡ್ಡಮನಿ, ಪ್ರಕಾಶ್ ಡಿ, ಮಹಾಂತೇಶಪ್ಪ, ಚಂದ್ರಪ್ಪ ಕಡೇಮನಿ, ಗೋವಿಂದ್ ಹಾಗೂ ಪಿಡಿಓ ನಾಗರಾಜ್ ಸಾರಥಿ, ಕಾರ್ಯದರ್ಶಿ ಉಮೇಶ್, ಲೆಕ್ಕ ಸಹಾಯಕ ಟಿ.ಆರ್. ಶಿವಪ್ಪ ಮತ್ತಿತರರು ಹಾಜರಿದ್ದರು.

**ಸೈಟು ಮಾರಾಟಕ್ಕಿದೆ**
50x40ಅಳತೆಯ ಜಾಗ ಆಂಜನೇಯ ದೇವಸ್ಥಾನ ರಸ್ತೆ, ನವರಂಗ ಶಾಲೆ ಎದುರು, ನಿಟುವಳ್ಳಿ, ಚಿಕ್ಕನಹಳ್ಳಿ ಹೊಸ ಬಡಾವಣೆ, ದಾವಣಗೆರೆ.
86608 09919

**ಸೈಟ್‌ಗಳು ಮಾರಾಟಕ್ಕಿವೆ**
ದಾವಣಗೆರೆ RTO ಆಫೀಸ್ ಎದುರುಗಡೆ 30x40 ರೆವಿನ್ಯೂ ಸೈಟ್ (ಪ್ರತಿ ಅಡಿಗೆ 1100 ರೂ), 20x30 ಅಲಿನೇಷನ್ ಸೈಟ್ ಮಾರಾಟಕ್ಕಿವೆ.
95383 94042

**ಬಾಡಿಗೆಗೆ**
3,000 ಚ, ಅಡಿ ಮೊದಲನೇ ಮಹಡಿ, ಪಿ.ಜೆ. ಬಡಾವಣೆ, ಕಮರ್ಷಿಯಲ್ 22×55, 2 ಗೋಡೌನ್‌ಗಳು ಬಸಾಪುರ ರಸ್ತೆ.
ಸಂಪರ್ಕಿಸಿ: 94480 28103

**ಪ್ರಕಟಣೆ**
ಶೇಖರ್ ಆಗ್ರೋ ಇಂಡಸ್ಟ್ರೀಸ್ ದಾವಣಗೆರೆ ಇದರ ಮಾಲೀಕರಾದ ಎಂ.ಕೆ. ಚಂದ್ರಶೇಖರಪ್ಪ ಹೆಸರಿನ ಉಗ್ರಾಣ ರಶೀದಿ (ಸಂಖ್ಯೆ 0098512) ಕಳೆದಿದ್ದು, ಯಾರಿಗಾದರೂ ಸಿಕ್ಕಲ್ಲಿ ಈ ಕೆಳಗಿನ ಮೊಬೈಲ್ ನಂಬರ್‌ಗೆ ಸಂಪರ್ಕಿಸಿ ತಲುಪಿಸಲು ಕೋರಿದೆ.
77609 66966

**ಹುಡುಗರು ಬೇಕಾಗಿದ್ದಾರೆ**
ಬ್ರಾಂಡೆಡ್ ಬಟ್ಟೆ ಅಂಗಡಿಯಲ್ಲಿ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ.
98867 57688

**KHB ನಲ್ಲಿ Corner Site ಮಾರಾಟಕ್ಕಿದೆ**
ತುಂಗಭದ್ರಾ ಬಡಾವಣೆ (KHB) ಯಲ್ಲಿ 100ft ರೋಡ್‌ನಲ್ಲಿ 56×79 ಮತ್ತು ಬೋರ್‌ವೆಲ್, ಕಾಂಪೌಂಡ್ ಅಳವಡಿಸಿರುವ ಉತ್ತರ ಪೂರ್ವ ಮುಖವಾಗಿರುವ ಮೂಲೆ ನಿವೇಶನ ಮಾರಾಟಕ್ಕಿದೆ.
ಸಂಪರ್ಕಿಸಿ: 81973 00410

**ದೇಹದ ತೂಕ ಹೆಚ್ಚಿಸಿಕೊಳ್ಳಿ ಅಥವಾ ತೂಕ ಕಡಿಮೆ ಮಾಡಿಕೊಳ್ಳಿ 100% ವೈಜ್ಞಾನಿಕ ಹಾಗೂ ಸುರಕ್ಷಿತ**
GAIN WEIGHT OR LOSE WEIGHT
Contact: 91645 46459

**SITES FOR SALE**
Sites Sales in MCC B' Block, 47×60 & Kuvempu Badavane 40×60
Contact
97424 34049

**ಸೈಟ್ ಮಾರಾಟಕ್ಕಿದೆ**
ಎಂಸಿಸಿ ಬಿ ಬ್ಲಾಕ್ 40×120 ದಕ್ಷಿಣ, ಸಿದ್ದವೀರಪ್ಪ ಬಡಾವಣೆ 40×70 ದಕ್ಷಿಣ, 40×50 ಪಶ್ಚಿಮ, ದಾವಣಗೆರೆ
86181 82332

**Requirement**
SBI Group Company
Development Manager
Davanagere Branch
Age : 28 to 45
Salary : 20 to 35K
Qualification : Degree (Graduation)
Experience : 2 Years Exp.in Sales
9886139595/9739249595

**ಅಣಬೆಗಳು ದೊರೆಯುತ್ತವೆ**
ಡಿ.ಸಿ.ಎಂ. ಟೌನ್ ಶಿಪ್‌ನಲ್ಲಿ ಅಣಬೆಗಳು ದೊರೆಯುತ್ತವೆ.
ಸಂಪರ್ಕಿಸಿ
08192 255433

**ಬೇಕಾಗಿದ್ದಾರೆ**
ದಿನನಿತ್ಯ ವ್ಯಾಯಾಮ ಮಾಡಿಸುವವರು ಬೇಕಾಗಿದ್ದಾರೆ.
ಸಮಯ: ಸಂಜೆ ಅವಧಿ ಮೂರು ತಾಸುಗಳ ಬಲಿಷ್ಠ ಪುರುಷರು
93417 77567

**ಬೇಕಾಗಿದ್ದಾರೆ**
ಮಹಿಳಾ ಅಭ್ಯರ್ಥಿಗಳು
ಟೆಲಿಕಾಲರ್ಸ್, ಟೈಲರಿಂಗ್, ಹೆಲ್ಪರ್ಸ್
ಸಂಪರ್ಕಿಸಿ: ಪ್ರೈವೇಟ್ ಬಸ್‌ಸ್ಟ್ಯಾಂಡ್, ಮಳಿಗೆ ಸಂಖ್ಯೆ 88, ದಾವಣಗೆರೆ.
78923 28599

**ಬೇಕಾಗಿದ್ದಾರೆ**
ಗಾರ್ಮೆಂಟ್ಸ್ ನಲ್ಲಿ ಹೆಲ್ಪರ್ ಕೆಲಸ ಮಾಡಲು ಮಹಿಳೆಯರು ಮತ್ತು ಅಕೌಂಟ್ ಮಾಡಲು B.Com ಪದವೀಧರ ಬೇಕಾಗಿದ್ದಾರೆ.
ಸಂಪರ್ಕಿಸಿ: ಪ್ರಶಾಂತ್ ಕ್ಲಾತ್ ಸೆಂಟರ್ ಅಶೋಕ್ ರೋಡ್.ದಾವಣಗೆರೆ.

**ಸೈಟು ಮಾರಾಟಕ್ಕಿದೆ**
ಅಳತೆ 50x 80 ಬನಶಂಕರಿ ಬಡಾವಣೆ ಸೈಟ್ ನಂ. 8, # 4081 ಬೈಪಾಸ್, ಸಂಪರ್ಕಿಸಿರಿ ಮಧ್ಯವರ್ತಿಗಳಿಗೆ ಅವಕಾಶವಿಲ್ಲ
95380 55959

**HOUSE TO LET**
East Faced Double Bed Room House (First Floor) to Let at S.S.Layout, 'B' Block, Near Little Champs School, Davangere.
98456 99806
91487 31689

**ಕೆಲಸಕ್ಕೆ ಬೇಕಾಗಿದ್ದಾರೆ**
ದಾವಣಗೆರೆ, ಹರಿಹರ, ರಾಣೇಬೆನ್ನೂರು ನಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್ ಮತ್ತು ಲೇಬರ್ಸ್ ಬೇಕಾಗಿದ್ದಾರೆ.
ವಿಳಾಸ: ಸಫಾಜ್ ಸೆಕ್ಯೂರಿಟಿ ಸರ್ವಿಸ್, ಎಸ್.ಎನ್.ಎ, ಪ್ಲಾಜಾ, ವಿನೋಬನಗರ ಪಿ.ಬಿ. ರಸ್ತೆ, ದಾವಣಗೆರೆ.
91130 53483, 08192-296709

ಶ್ರೀ ಗುರು ಮರುಳಸಿದ್ದೇಶ್ವರ ಸ್ವಾಮಿ ಸೇವಾ ಸಂಸ್ಥೆ (ರಿ.)
**ಹಿಂದೂ ವಧು-ವರರ ಮಾಹಿತಿ ಕೇಂದ್ರ**
www.hindusmatrimony.com
ನಮ್ಮಲ್ಲಿ ಎಲ್ಲಾ ತರಹದ ಹಿಂದೂ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ: ಬಾಣಾಪುರಮಠ ಹಾಸ್ಟೆಲ್ ಎದುರು, 8ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ-2.
94481-59303, 94834 63783

**ತಕ್ಷಣ ಬೇಕಾಗಿದ್ದಾರೆ**
ಸ್ಯಾಮ್ಸನ್ ಡಿಸ್ಟಿಲರೀಸ್, ದುಗ್ಗಾವತಿ ಹಾಗೂ SS ಆಸ್ಪತ್ರೆ, ಬಾಪೂಜಿ ಆಸ್ಪತ್ರೆ ಹಾಗೂ ದಾವಣಗೆರೆ ಸುತ್ತಮುತ್ತಲು 8 ಗಂಟೆ ಹಾಗೂ 12 ಗಂಟೆ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್ಸ್ ತಕ್ಷಣ ಬೇಕಾಗಿದ್ದಾರೆ. ESI-PF ಸೌಲಭ್ಯ ಇರುತ್ತದೆ.
ಅಸೋಸಿಯೇಟೆಡ್ ಎಂಟರ್ ಪ್ರೈಸಸ್, ದಾವಣಗೆರೆ.
99169 29713, 90605 45500, 97390 89022

**WANTED LADY TEACHERS**
BA B.Ed, B.Sc B.Ed, D.Ed & NTC, Clerk Post: B.Com with Computer Knowledge. Preference will be given to experienced candidates.
Contact: VINAYAKA CONVENT, Kalikadevi Road DVG.
95356 10817

**ಮನೆ ಬಾಡಿಗೆಗಿದೆ**
ಬೋರ್ ಹಾಗೂ ಕಾರ್ಪೋರೇಷನ್ ನೀರಿನ ಸೌಲಭ್ಯ, ಕಾರ್ ಪಾರ್ಕಿಂಗ್ ಹಾಗೂ ವಾಸ್ತು ಪ್ರಕಾರವಿರುವ 2 ಬೆಡ್ ರೂಂ ಮನೆ ಎಸ್.ಎಸ್. ಲೇಔಟ್ 'ಎ' ಬ್ಲಾಕ್, ವಿ.ವಿ. ರೆಸಿಡೆನ್ಸಿಯಲ್ಲಿ 1st ಫ್ಲೋರ್ ಬಾಡಿಗೆಗೆ ಇದೆ. ಸಂಪರ್ಕಿಸಿ
94487 27266
94481 34340

**ಸೈಟುಗಳು/ಮನೆಗಳು ಮಾರಾಟಕ್ಕಿವೆ**
ದಾವಣಗೆರೆ ನಗರ ಹಾಗೂ ಸುತ್ತ ಸೈಟುಗಳು ಹಾಗೂ ಮನೆಗಳು ಮಾರಾಟಕ್ಕಿವೆ. (20×30, 30×40, 30×50, 40×60). ಸಂಪರ್ಕಿಸಿ
97432 09680, 83101 50590

**ಮನೆ ಬಾಡಿಗೆ / ಲೀಸ್‌ಗೆ ಇದೆ**
ಡಬಲ್ ಬೆಡ್ ರೂಂ ಮನೆ ಬಾಡಿಗೆಗೆ ಮತ್ತು ಲೀಸ್‌ಗೆ ಖಾಲಿ ಇದೆ. ಎಸ್. ಎಸ್. ಹೈಟೆಕ್ ಲೇಔಟ್, ಹೈಟೆಕ್ ಹಾಸ್ಪಿಟಲ್ ಎದುರು, ಧರ್ಮಸ್ಥಳ ಬಿಲ್ಡಿಂಗ್ ಹತ್ತಿರ, ದಾವಣಗೆರೆ
94497 72655

**WANTED**
TELE CALLERS
We are looking for qualified Women for Tele Calling Hindi / English Language Compulsory (any PUC or Degree)
SM Wealth Solutions : Kondajji Road, Vijayanagara, Davangere
84316 62686

**Q-JOBS**
SSLC, PUC, BA, B. Com,BBM,B.Sc.,B.Ed.,Etc
ಹುಡುಗರಿಗೆ,ಹುಡುಗಿಯರಿಗೆ,ನಿಮಗೆ ಬೇಕಾಗಿರುವ ಕೆಲಸದ ಬಗ್ಗೆ ಮಾಹಿತಿಗಾಗಿ ಸಂಪರ್ಕಿಸಿ, ದಿನಾಂಕ :19.11.2021 ರಂದು ಮೂರು ದಿನ ಉಚಿತ ನೊಂದಣಿ ಮಾಡಲಾಗುತ್ತಿದೆ.
76250 89210

**ಬೇಕಾಗಿದ್ದಾರೆ**
ಪ್ರಖ್ಯಾತ ಬಂಗಾರದ ಅಂಗಡಿಯಲ್ಲಿ ಕೆಲಸ ಮಾಡಲು ಅನುಭವವಿರುವ ಪುರುಷರು ಬೇಕಾಗಿದ್ದಾರೆ.
99649 32113
88808 89524

**ಭೂಮಿಕಾ ಮ್ಯಾಟ್ರಿಮೊನಿ**
ಲಿಂಗಾಯಿತ ವಧು-ವರರ ಕೇಂದ್ರ
H.O : Near Coffee day, Nutana College Road, Vidyanagara, 2nd Main, Davangere
77603 16576
90080 55813

**House For Rent Long Term & Short Term Available**
With all Amenities cot, bed, fan, light, UPS, internet, T.V Dining table, Geyser, Kitchen, Stove, Gas etc.
94800 73451

**ಸೈಟ್‌ಗಳು ಮಾರಾಟಕ್ಕಿವೆ**
2 ಸೈಟ್‌ಗಳು ಮಾರಾಟಕ್ಕಿವೆ.
ಅಳತೆ: 30x60 ಎಂ.ಬಿ. ಸಿಟಿ ಪಕ್ಕದಲ್ಲಿ, ಹೌಸಿಂಗ್ ಬೋರ್ಡ್ ಎದುರು
97430 73102

**ಹೊಸ ಕಟ್ಟಡ ಮಾರಾಟಕ್ಕಿದೆ**
ನಿಜಲಿಂಗಪ್ಪ ಬಡಾವಣೆ, ಆಂಜನೇಯ ದೇವಸ್ಥಾನ ಹತ್ತಿರ, ಮೂಲೆ ನಿವೇಶನದಲ್ಲಿ ಹೊಸದಾಗಿ ಕಟ್ಟಿರುವ 3 ಮನೆ ಮತ್ತು 2 ಅಂಗಡಿಗಳುಳ್ಳ 3 ಅಂತಸ್ತಿನ ಕಟ್ಟಡ ಮಾರಾಟಕ್ಕಿದೆ. ಸಂಪರ್ಕಿಸಿ
90088 78676

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, ಕೆ.ಎಸ್.ಆರ್.ಟಿ.ಸಿ. ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ. 4 ಮತ್ತು 18ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಶ್ವಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋನ್ : 96322 95561
ಸಮಯ: ಬೆಳಿಗ್ಗೆ 10ರಿಂದ ಮಧ್ಯಾಹ್ನ 2 ರವರೆಗೆ.

**AVOID MOSQUITOES**
Mosquito Net for Doors and windowsh, MDF Design Boards available.
SRI GOWRI ENTERPRISES
# 7C2, 4th Cross, Karur Industrial Area, Near D.C Office, P.B Road, Davangere.
72049 94628

**PARTNER WITH ME**
Are you looking for a Second incom? Do you want to help others? No Experience Needed? No Age Bar? Working Womens? House Wives? Contact Me Now !
95351 11195

ಓಂ ಶ್ರೀ ದತ್ತಾತ್ರೇಯ ಜ್ಯೋತಿಷಯಾಲಯ
**ಪಂ.ಶ್ರೀರಾಮ್ ಭಟ್**
ಜ್ಯೋತಿಷ್ಯ ಶಾಸ್ತ್ರ ನಮ್ಮ ಪೂರ್ವಿಕರು ನಮಗೆ ಕೊಟ್ಟಂತ ಅವರ ನಿಮ್ಮಒಂದು ದಿವ್ಯ ಕರೆ ನಿಮ್ಮಜೀವನ ಬದಲಾಯಿಸುತ್ತದೆ. ಸಕಲ ಇಷ್ಟಾರ್ಥ ಸಿದ್ದಿಗಾಗಿ ಇಂದೇ ಕರೆ ಮಾಡಿ. ನಿಮ್ಮ ಯಾವುದೇ ಗುಪ್ತ ವಿಚಾರಗಳನ್ನು ಗುಪ್ತವಾಗಿ ಇಡಲಾಗುವುದು. ಕೇರಳ ಮತ್ತು ಕೊಳ್ಳೆಗಾಲದಿಂದ ನೇರ ಪರಿಹಾರ.
98862 30791

**WANTED STAFF**
1) Principal and Head Master : 2
M.A.,B.Ed.,/M.Sc, B.Ed.,
2) Science & Maths Teachers : 2
M.A.,B.Ed.,/B.Sc, B.Ed.,
3) English & Social Teachers : 2
M.A.,B.Ed.,/B.A, B.Ed.,
92428 60714
82177 16533

**ತಕ್ಷಣ ಬೇಕಾಗಿದ್ದಾರೆ**
ನಮ್ಮ ಹೋಟೆಲ್ ಪೂಜಾ ಇಂಟರ್‌ನ್ಯಾಷಲ್ ದಾವಣಗೆರೆಯಲ್ಲಿ Electrician ಬೇಕಾಗಿದ್ದಾರೆ. ಅನುಭವ ಇದ್ದವರಿಗೆ ಆದ್ಯತೆ ಕೊಡಲಾಗುವುದು. ಸಂಪರ್ಕಿಸಿ
99029 35937
96060 96698

**ನೇರ ಪರೀಕ್ಷೆಗಳು**
ಉನ್ನತ ಶಿಕ್ಷಣಕ್ಕೆ ಮತ್ತು ಸರ್ಕಾರಿ ಕೆಲಸಕ್ಕೆ ಉಪಯೋಗ
SSLC, PUC Technical & Non Tecnical Courses Pharmacy & BHMS (Goverment & Private College)
ಶ್ರೀ ಸಾಯಿ ಕರೆಸ್ಪಾಂಡೆನ್ಸ್ ಕಾಲೇಜ್
ಸೋಮ ಮೆಡಿಕಲ್ಸ್ ಮೇಲೆ ಗಣೇಶ ದೇವಸ್ಥಾನದ ಹಿಂಭಾಗ, ರಾಂ&ಕೋ ಸರ್ಕಲ್, ದಾವಣಗೆರೆ.
87490 24789, 82173 02649

# ಬೆಳ್ಳಿ ಹಬ್ಬದ ಮಹೋತ್ಸವಕ್ಕೆ ಹೆಜ್ಜೆಯನ್ನಿಡುತ್ತಿರುವ ಕನಕ ಪಟ್ಟಣ ಸಹಕಾರ ಬ್ಯಾಂಕ್

## ಬ್ಯಾಂಕಿನ 24ನೇ ವರ್ಷದ ಸರ್ವ ಸದಸ್ಯರ ಮಹಾಸಭೆಯಲ್ಲಿ ಬ್ಯಾಂಕಿನ ಅಧ್ಯಕ್ಷ ಲೋಕಿಕೆರೆ ಟಿ.ಹೆಚ್.ಸಿದ್ದಪ್ಪ ಹರ್ಷ

ದಾವಣಗೆರೆ, ನ.18- ಸ್ಥಳೀಯ ಪ್ರತಿಷ್ಠಿತ ಸಹಕಾರಿ ಬ್ಯಾಂಕುಗಳಲ್ಲೊಂದು ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ಕನಕ ಪಟ್ಟಣ ಸಹಕಾರ ಬ್ಯಾಂಕ್ ತನ್ನ ಸ್ಥಾಪನೆಯ 25ನೇ ವರ್ಷದ ಬೆಳ್ಳಿ ಹಬ್ಬ ಮಹೋತ್ಸವಕ್ಕೆ ಹೆಜ್ಜೆಯನ್ನಿಡುತ್ತಿದೆ ಎಂದು ಹಿರಿಯ ನ್ಯಾಯವಾದಿಯೂ ಆಗಿರುವ ಬ್ಯಾಂಕಿನ ಆಡಳಿತ ಮಂಡಳಿ ಅಧ್ಯಕ್ಷ ಲೋಕಿಕೆರೆ ಟಿ. ಹೆಚ್.ಸಿದ್ದಪ್ಪ ಹರ್ಷ ವ್ಯಕ್ತಪಡಿಸಿದರು.

ವಿಡಿಯೋ ಕಾನ್ಫರೆನ್ಸ್ ಮೂಲಕ ಮೊನ್ನೆ ನಡೆದ ಕನಕ ಪಟ್ಟಣ ಸಹಕಾರ ಬ್ಯಾಂಕ್‌ನ 24ನೇ ವರ್ಷದ ವಾರ್ಷಿಕ ಸರ್ವ ಸದಸ್ಯರ ಮಹಾಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ರಾಷ್ಟ್ರೀಕೃತ ಮತ್ತು ಖಾಸಗಿ ಬ್ಯಾಂಕುಗಳ ಪೈಪೋಟಿಯಲ್ಲಿ ಸಹಕಾರಿ ಬ್ಯಾಂಕುಗಳ ಅಸ್ತಿತ್ವ ಉಳಿಸಿಕೊಳ್ಳುವುದು ಕಠಿಣವಾಗಿರುವುದರ ಜೊತೆಗೆ, ಕೊರೊನಾದಲ್ಲಿ ಲಾಕ್‌ಡೌನ್ ಆದ ಪರಿಣಾಮ ಹಣಕಾಸಿನ ವ್ಯವಹಾರದ ಸಂಕಷ್ಟದ ನಡುವೆಯೂ ಕನಕ ಪಟ್ಟಣ ಸಹಕಾರ ಬ್ಯಾಂಕ್ ಅಭಿವೃದ್ಧಿ ಪಥದಲ್ಲಿ ಸಾಗಿರುವುದು ಸಮಾಧಾನಕರ ವಿಷಯ ಎಂದು ಅವರು ತಿಳಿಸಿದರು.

ಗ್ರಾಹಕರಿಗೆ ಶೀಘ್ರ ಸೇವೆ ಒದಗಿಸುವ ನಿಟ್ಟಿನಲ್ಲಿ ತಮ್ಮ ಬ್ಯಾಂಕ್‌ನಲ್ಲಿ ಅನೇಕ ಸೇವಾ ಸೌಲಭ್ಯಗಳನ್ನು ನೀಡಲಾಗಿದೆ ಎಂದು ತಿಳಿಸಿದ ಅವರು, ಷೇರುದಾರರ ಮತ್ತು ಬ್ಯಾಂಕಿನ ಸಿಬ್ಬಂದಿ ವರ್ಗದವರಿಗೆ ಅಗತ್ಯ ಸೌಲಭ್ಯಗಳನ್ನು ಕಲ್ಪಿಸಲಾಗಿದೆ ಎಂದು ಹೇಳಿದರು.

ಬ್ಯಾಂಕಿನ ಪ್ರಗತಿಯನ್ನು ಪ್ರಸ್ತಾಪಿಸಿದ ಅವರು, 2021 ಮಾರ್ಚ್ ಅಂತ್ಯಕ್ಕೆ 24 ಲಕ್ಷ ರೂ. ಲಾಭ ಗಳಿಸಿದೆಯಾದರೂ, ಕಡಿತ - ಆದಾಯ ತೆರಿಗೆ ಪಾವತಿಸಿದ ನಂತರ 14 ಲಕ್ಷ ರೂ. ನಿವ್ವಳ ಲಾಭ ಗಳಿಸಿದ್ದು, ತನ್ನ ಸದಸ್ಯರಿಗೆ ಶೇ. 8 ರಂತೆ ಲಾಭಾಂಶ ನೀಡಲು ಬ್ಯಾಂಕಿನ ಆಡಳಿತ ತೀರ್ಮಾನ ಕೈಗೊಂಡಿದೆ ಎಂದು ಅವರು ಷೇರುದಾರರ ಚಪ್ಪಾಳೆಯ ಮಧ್ಯೆ ಘೋಷಿಸಿದರು.

81 ಲಕ್ಷ ರೂ. ಷೇರು ಬಂಡವಾಳ ಹೊಂದಿರುವ ಈ ಬ್ಯಾಂಕ್, 15 ಕೋಟಿ ರೂ. ಠೇವಣಿ ಸಂಗ್ರಹಿಸಿದೆ. ಇದು ಕಳೆದ ಸಾಲಿಗಿಂತ ಶೇ.7.70 ರಷ್ಟು ಹೆಚ್ಚಾಗಿರುತ್ತದೆ. ಸದಸ್ಯರ ಅಗತ್ಯಗಳಿನುಗುಣವಾಗಿ 10 ಕೋಟಿ ರೂ. ಸಾಲ ಸೌಲಭ್ಯ ಒದಗಿಸಲಾಗಿದೆ. ಬ್ಯಾಂಕಿನ ಹಿತದೃಷ್ಟಿಯಿಂದ 4 ಕೋಟಿ ರೂ. ಸರ್ಕಾರಿ ಭದ್ರತಾ ಠೇವಣಿಯಲ್ಲಿ ಹೂಡಿಕೆ ಮಾಡಲಾಗಿದೆ ಎಂದು ಅವರು ಬ್ಯಾಂಕಿನ ಪ್ರಗತಿ ವಿವರಿಸಿದರು.



ಬ್ಯಾಂಕಿನ ಆಸ್ತಿಗಳಿಗೆ ಬಂಡವಾಳ ರೂಪಿಸುವ ನಿಟ್ಟಿನಲ್ಲಿ ಭಾರತೀಯ ರಿಸರ್ವ್ ಬ್ಯಾಂಕ್ ಸಿಆರ್‌ಎಆರ್ ಮಿತಿಯನ್ನು ಶೇ.9 ಕ್ಕೆ ನಿಗದಿ ಪಡಿಸಿದೆ. ಬ್ಯಾಂಕಿನ ಸಿಆರ್‌ಎಆರ್ ಪ್ರಮಾಣವು ಶೇ.14.87 ರಷ್ಟು ಇದ್ದು, ಇದು ಕನಿಷ್ಠ ಪ್ರಮಾಣ ಮೀರಿದೆ. ಇದರಿಂದ ಬ್ಯಾಂಕ್ ಸದೃಢಗೊಂಡಿದೆ ಎಂದರು.

ಒಟ್ಟಿನಲ್ಲಿ ಕನಕ ಪಟ್ಟಣ ಸಹಕಾರ ಬ್ಯಾಂಕ್ 2020-21ನೇ ಸಾಲಿನ ಆಡಿಟ್ ವರ್ಗೀಕರಣದಲ್ಲಿ ಶೇ. 76.75 ಅಂಕಗಳನ್ನು ಪಡೆಯುವುದರ ಮೂಲಕ 'ಎ' ಶ್ರೇಣಿಯ ಬ್ಯಾಂಕ್ ಎಂಬ ಹೆಗ್ಗಳಿಕೆ ಪಡೆದಿದೆ ಎಂದು ಸಿದ್ದಪ್ಪ ಸಂತಸ ವ್ಯಕ್ತಪಡಿಸಿದರು.

ಗ್ರಾಹಕರ ಮತ್ತು ಠೇವಣಿದಾರರ ವಿಶ್ವಾಸ - ನಂಬಿಕೆ, ಷೇರುದಾರರು ನೀಡುತ್ತಿರುವ ಪ್ರೋತ್ಸಾಹ, ಸಿಬ್ಬಂದಿ ವರ್ಗದವರ ಕಾಳಜಿ - ಶ್ರಮ, ಆಡಳಿತ ಮಂಡಳಿ ಸದಸ್ಯರ ಇಚ್ಛಾಶಕ್ತಿಯಿಂದಾಗಿ ಕನಕ ಪಟ್ಟಣ ಸಹಕಾರ ಬ್ಯಾಂಕ್ ಪ್ರಗತಿಯಲ್ಲಿ ಮುನ್ನಡೆದಿದೆ ಎಂದು ತಿಳಿಸಿದ ಅವರು, ಬ್ಯಾಂಕ್ ಅಭಿವೃದ್ಧಿಗೆ ಸಹಕಾರ ನೀಡುತ್ತಿರುವ ಎಲ್ಲರನ್ನು ಸ್ಮರಿಸಿ, ಕೃತಜ್ಞತೆ ಸಲ್ಲಿಸಿದರು.

ಉಪಾಧ್ಯಕ್ಷರಾದ ಶ್ರೀಮತಿ ಕೆ.ಜಿ. ತಾಯಮ್ಮ ಮಾತನಾಡಿ, ಬ್ಯಾಂಕಿನ ಸ್ಥಾಪಕರುಗಳ ಸೇವೆಯನ್ನು ಮೆಲುಕು ಹಾಕಿ, ಅವರುಗಳ ಆಶಯಗಳನ್ನು ಈಡೇರಿಸುವ ನಿಟ್ಟಿನಲ್ಲಿ ಬ್ಯಾಂಕಿನ ಆಡಳಿತ ಮಂಡಳಿ ಶ್ರಮಿಸುತ್ತಿದೆ ಎಂದು ತಿಳಿಸಿದರು.

ಸದಸ್ಯರುಗಳಾದ ಪ್ರಥಮ ದರ್ಜೆ ಗುತ್ತಿಗೆದಾರ ಬಿ.ಹೆಚ್.ಪರಶುರಾಮಪ್ಪ, ಪದವಿ ಕಾಲೇಜಿನ ನಿವೃತ್ತ ಪ್ರಾಂಶುಪಾಲ ಪದ್ಮಪ್ಪ ಮತ್ತಿತರರು ಮಾತನಾಡಿ, ಬ್ಯಾಂಕ್ ಅಭಿವೃದ್ಧಿಗೆ ಅಗತ್ಯವಾಗಿರುವ ಠೇವಣಿ ಸಂಗ್ರಹ ಮತ್ತು ಸಾಲ ವಿತರಣೆ ಹಾಗೂ ವಸೂಲಾತಿಯಲ್ಲಿ ನಿಗಾ ವಹಿಸುವಂತೆ ಸಲಹೆ ನೀಡಿದರು.

ಬ್ಯಾಂಕಿನ ಮಾಜಿ ಅಧ್ಯಕ್ಷರಾಗಿರುವ ಹಾಲಿ ಹಿರಿಯ ನಿರ್ದೇಶಕರಲ್ಲೊಬ್ಬರಾದ ಹೆಚ್.ಜಿ.ಸಂಗಪ್ಪ, ನಿರ್ದೇಶಕರುಗಳಾದ ಕೆ.ಆರ್.ಭರ್ಮಪ್ಪ, ಕೆ.ಎನ್.ನೀಲಪ್ಪ, ಆರ್.ಆನಂದ್, ಪಿ.ಚೌಡಪ್ಪ, ಹೆಚ್. ಎಂ.ಗೋಣೆಪ್ಪ, ಎಸ್.ಸಂಗೇಗೌಡ, ಕೆ. ಪರಶುರಾಮ್, ಎಸ್.ಹೆಚ್.ಕಾಂತೇಶ್, ಶ್ರೀಮತಿ ಕೆ.ಸುಧಾ, ಟಿ.ಎನ್.ಪ್ರಕಾಶ್, ವಿಶೇಷ ಆಹ್ವಾನಿತರಾದ ಕೆ.ರೇವಣಸಿದ್ದಪ್ಪ ಮತ್ತಿತರರು ಸಮಾರಂಭದ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಬ್ಯಾಂಕಿನ ಮಾಜಿ ಅಧ್ಯಕ್ಷರೂ ಆದ ಹಾಲಿ ಹಿರಿಯ ನಿರ್ದೇಶಕರಲ್ಲೊಬ್ಬರಾದ ಪಿ.ರಾಜಕುಮಾರ್ ಸ್ವಾಗತಿಸಿದರು. ಹಿರಿಯ ನಿರ್ದೇಶಕ ಬಿ.ದಿಳ್ಯೆಪ್ಪ ವಂದಿಸಿದರು.

ಬ್ಯಾಂಕಿನ ವ್ಯವಸ್ಥಾಪಕ ಬಿ.ಎಲ್.ಗೌಡ, ಹಿರಿಯ ಲೆಕ್ಕಾಧಿಕಾರಿ ರಮೇಶ್ ದೇವಜ್ಜಿ ಅವರುಗಳು ಕಾರ್ಯಕ್ರಮದ ಉಸ್ತುವಾರಿ ವಹಿಸಿದರು. ಹಿರಿಯ ಸಹಾಯಕರಾದ ಶ್ರೀಮತಿ ಬಿ.ಕೆ.ವಿಜಯ, ಡಿ.ಹೆಚ್. ಮಾರುತಿ ಮತ್ತಿತರರು ಸಭೆಯ ವಿವಿಧ ಕಾರ್ಯ ಕಲಾಪಗಳಲ್ಲಿ ಕಾರ್ಯ ನಿರ್ವಹಿಸಿದರು.

## ನಗರದಲ್ಲಿ ಇಂದು ಲೋಕ ಕಲ್ಯಾಣಕ್ಕಾಗಿ ಶ್ರೀರಾಮ ತಾರಕ ಯಜ್ಞ

ಲೋಕ ಕಲ್ಯಾಣಕ್ಕಾಗಿ ಶ್ರೀರಾಮ ತಾರಕ ಯಜ್ಞ, ಶ್ರೀ ಗಾಯತ್ರಿ ಮಹಾಯಜ್ಞ, ಸಾಮೂಹಿಕ ಶ್ರೀ ಸತ್ಯನಾರಾಯಣ ವ್ರತ, ಶ್ರೀ ಕೃಷ್ಣ ನಾಮ ಕೀರ್ತನೆ, ಶ್ರೀ ದಾಮೋಧರ ದೀಪೋತ್ಸವ, ಶ್ರೀ ತುಳಸಿ ಕಲ್ಯಾಣ, ಅಧ್ಯಾತ್ಮ ಉತ್ಸವ ಇಂದು ಮಧ್ಯಾಹ್ನ 12.30 ಕ್ಕೆ ರಾಜನಹಳ್ಳಿ ಹನುಮಂತಪ್ಪ ಧರ್ಮಶಾಲೆಯಲ್ಲಿ ನಡೆಯಲಿದೆ.

ಅಧ್ಯಕ್ಷತೆಯನ್ನು ಡಾ. ಸುಶೀಲಮ್ಮ ವಹಿಸುವರು. ಕಾರ್ಯಕ್ರಮವನ್ನು ದೇವರಮನೆ ಶಿವಕುಮಾರ್ ಉದ್ಘಾಟಿಸುವರು. ಮುಖ್ಯ ಅತಿಥಿಗಳಾಗಿ ಮೇಯರ್ ಎಸ್.ಟಿ. ವೀರೇಶ್, ಶ್ರೀ ತ್ಯಾಗೀಶಾನಂದ ಮಹಾರಾಜ್, ಅವಧೂತ ಚಂದ್ರಹಾಸ್, ಆರ್.ಆರ್. ರಮೇಶ್‌ಬಾಬು ಆಗಮಿಸುವರು.

ಸ್ಫೂರ್ತಿ ಸೇವಾ ಟ್ರಸ್ಟ್ (ದಾವಣಗೆರೆ), ಅಭಯಾಶ್ರಮ (ಶಾಸ್ತ್ರೀಹಳ್ಳಿ), ಶ್ರೀ ಗಾಯತ್ರಿ ಪರಿಹಾರ ಹಾಗೂ ಇಸ್ಕಾನ್ (ದಾವಣಗೆರೆ) ಇವರುಗಳ ಸಂಯುಕ್ತಾಶ್ರಯದಲ್ಲಿ ಈ ಕಾರ್ಯಕ್ರಮ ಏರ್ಪಾಡಾಗಿದೆ.

## ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಟಿ.ಸಿ ಲೇಔಟ್, ಎಲ್‌ಐಸಿ ಆಫೀಸ್, ಕೆಆರ್ ರಸ್ತೆ, ಜಗಳೂರು ಬಸ್‌ಸ್ಟಾಪ್, ಅರಳಿಮರ ಸರ್ಕಲ್, ನೂರಾನಿ ಆಟೋಸ್ಟ್ಯಾಂಡ್, ವೆಂಕಟೇಶ್ವರ ದೇವಸ್ಥಾನದ ಪಕ್ಕ, ಆನೆಕೊಂಡ ಹೊಸ ಲೇಔಟ್, ಉರ್ದು ಸ್ಕೂಲ್ ಹಿಂಭಾಗ, ಆಜಾದ್‌ನಗರ 10 ರಿಂದ 16ನೇ ಕ್ರಾಸ್‌ವರೆಗೆ, ಅಕ್ಸ ಮಸೀದಿ ಹಿಂಭಾಗ, ಬೀಡಿ ಲೇಔಟ್, ಆಜಾದ್ ನಗರ ಪೊಲೀಸ್ ಸ್ಟೇಷನ್, ಹೆಗಡೆ ನಗರ, ರಜಾವುಲ್ಲಾ ಮುಸ್ತಾಫ ನಗರ ಸ್ವಲ್ಪಭಾಗ, ಅಮ್ಮಜಾನ್, ಬಾಬಾಜಾನ್ ಜೋಗಲ್‌ಬಾಬಾ ಲೇಔಟ್, ಮಾಗಾನಹಳ್ಳಿ ರಸ್ತೆ ಹಳ್ಳದವರೆಗೆ, ಕೆಆರ್ ರಸ್ತೆ, ಜಗಳೂರು ಬಸ್‌ಸ್ಟ್ಯಾಂಡ್, ಜಗಳೂರು ರಸ್ತೆ ಎಆರ್‌ಬಿ ಮಿಲ್, ಚಾಮರಾಜಪೇಟೆ, ವಾಟರ್ ಟ್ಯಾಂಕ್, ಎಸ್‌ಎಸ್ ಆಸ್ಪತ್ರೆ, ಅರಳಿಮರದ ಸರ್ಕಲ್, ಬೇತೂರ್ ರಸ್ತೆ, ಚರ್ಚ್ ರಸ್ತೆ, ಮುನ್ಸಿಪಲ್ ಕಾಲೇಜ್, ಕೊಹಿನೂರ್ ಹೋಟೆಲ್ ಹಿಂಭಾಗ, ಮಾಗಾನಹಳ್ಳಿ ರಸ್ತೆ, ಹಾಸಬಾವಿ ಸರ್ಕಲ್, ಮಿಲ್ಲತ್ ಸ್ಕೂಲ್ ಸುತ್ತಮುತ್ತ ಹಾಗೂ ಇತರೆ ಪ್ರದೇಶಗಳಲ್ಲಿ ಈ ಭಾಗಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 5 ರವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ.

# ಕಲೆ ಆಸ್ವಾದನೆ, ಕಲೆಗೆ ವೇದಿಕೆ ಮುಖ್ಯ



ದಾವಣಗೆರೆ, ನ. 18 - ಕಲಾವಿದರಿಗೆ ಪ್ರೋತ್ಸಾಹಿಸಿ, ಅವರ ಕಲೆಗೆ ವೇದಿಕೆ ಕೊಡುವ ಜೊತೆಗೆ, ಕಲೆಯನ್ನು ಆಸ್ವಾದಿಸುವುದು ಹಾಗೂ ಗ್ರಹಿಸುವುದು ಮಹತ್ವದ್ದಾಗಿದೆ ಎಂದು ದಾವಣಗೆರೆ ವಿ.ವಿ. ಕುಲಪತಿ ಪ್ರೊ. ಶರಣಪ್ಪ ವಿ. ಹಲಸೆ ಹೇಳಿದ್ದಾರೆ.

ನಗರದ ದೃಶ್ಯಕಲಾ ಮಹಾವಿದ್ಯಾಲಯದಲ್ಲಿ ಆಯೋಜಿಸಲಾಗಿರುವ ಕಲಬುರಗಿಯ ಕಲಾವಿದೆ ಜಲಜಾಕ್ಷಿ ಪಿ. ಕುಲಕರ್ಣಿ ಅವರ ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನದ ಉದ್ಘಾಟನೆ ನೆರವೇರಿಸಿ ಅವರು ಮಾತನಾಡುತ್ತಿದ್ದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಪ್ರದರ್ಶನ ಆಯೋಜಿಸಲಾಗಿದೆ. ನ.20ರವರೆಗೆ ಚಿತ್ರ ಪ್ರದರ್ಶನ ಇರಲಿದೆ.

ಪ್ರತಿಯೊಂದು ಕಲೆಯೂ ಮಹತ್ವ ಪಡೆದಿದೆ. ಈ ಹಿನ್ನೆಲೆಯಲ್ಲಿ ವಿಶ್ವವಿದ್ಯಾನಿಲಯದ ವತಿಯಿಂದ ದೃಶ್ಯಕಲಾ ಮಹಾವಿದ್ಯಾಲಯಕ್ಕೆ ನಿರಂತರ ಪ್ರೋತ್ಸಾಹ ಕೊಡುತ್ತಾ ಬರಲಾಗಿದೆ ಎಂದವರು ಹೇಳಿದರು.

**ದಾವಣಗೆರೆ ವಿ.ವಿ. ಕುಲಪತಿ ಪ್ರೊ. ಶರಣಪ್ಪ ವಿ. ಹಲಸೆ**

ಪ್ರತಿಯೊಬ್ಬ ಕಲಾವಿದರಲ್ಲೂ ಪ್ರತಿಭೆ ಸುಪ್ತವಾಗಿರುತ್ತದೆ. ಅದರ ಪ್ರದರ್ಶನಕ್ಕೆ ಅವಕಾಶ ಕೊಟ್ಟರೆ ಕಲಾವಿದರಿಗೆ ಇನ್ನಷ್ಟು ಪ್ರೋತ್ಸಾಹ ಸಿಗುತ್ತದೆ. ವಿದ್ಯಾರ್ಥಿಗಳಲ್ಲಿರುವ ಪ್ರತಿಭೆಯನ್ನು ಹೊರ ತಂದು, ಅದನ್ನು ಶ್ರೇಷ್ಠತೆಗೆ ತೆಗೆದುಕೊಂಡು ಹೋಗುವ ಹೊಣೆ ಬೋಧಕರ ಮೇಲಿದೆ ಎಂದವರು ಕಿವಿಮಾತು ಹೇಳಿದರು.

ಗುಣಮಟ್ಟದ ಶಿಕ್ಷಣ ಬಹಳ ಮುಖ್ಯವಾಗಿದ್ದು, ಇದರಿಂದ ದೇಶ ಬೆಳೆಯುತ್ತದೆ. ಗುಣಮಟ್ಟದ ಶಿಕ್ಷಣ ಇರದೇ ಹೋದರೆ ದೇಶ ಉಳಿಯುವುದಿಲ್ಲ ಎಂದು ಹಲಸೆ ಎಚ್ಚರಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಕಲಾವಿದೆ ಜಲಜಾಕ್ಷಿ, ಕಲೆಗೆ ವೇದಿಕೆ ಬೇಕೆಂದು ಕಾಯುತ್ತಾ ಕೂರದೇ, ನಮ್ಮ ಪ್ರತಿಭೆಯನ್ನೇ ವೇದಿಕೆ ಮಾಡಿಕೊಳ್ಳಬೇಕು. ಕಲಾಸಕ್ತರು ಯಾವ ರೀತಿ ಕಲೆಯನ್ನು ಆಸ್ವಾದಿಸುತ್ತಾರೆ ಹಾಗೂ ವಿಮರ್ಶೆ ಮಾಡುತ್ತಾರೆ ಎಂಬುದನ್ನು ಕಲಾವಿದರು ಮುಖ್ಯವಾಗಿ ಪರಿಗಣಿಸಬೇಕು ಎಂದರು.

ಪ್ರಕೃತಿ ಹಾಗೂ ಪ್ರಾಣಿ - ಪಕ್ಷಿಗಳು ತಮ್ಮ ಚಿತ್ರಕಲೆಯ ಕೇಂದ್ರ ಬಿಂದುವಾಗಿವೆ. ನವ್ಯ ಶೈಲಿಯಲ್ಲಿ ರೇಖಾ ವರ್ಣ, ಅಕ್ರೋಲಿಕ್, ಮಿಕ್ಸಡ್ ಮೀಡಿಯಾ ಮುಂತಾದ ಶೈಲಿಗಳಲ್ಲಿ ಚಿತ್ರ ರಚನೆ ಮಾಡಿರುವುದಾಗಿ ಅವರು ಹೇಳಿದರು.

ಕಲಾ ವಿಭಾಗದ ವಿದ್ಯಾರ್ಥಿಗಳು ಅಲ್ಪ ತೃಪ್ತರಾಗದೇ ಉನ್ನತ ಹಂತದವರೆಗೆ ಕಲಿಕೆಯಲ್ಲಿ ತೊಡಗಬೇಕು. ಕಲಾಕೃತಿಗಳ ಪ್ರದರ್ಶನ ಹಾಗೂ ಸ್ಪರ್ಧೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕು. ಆಗ ಬೆಳವಣಿಗೆಯ ವೇದಿಕೆ ಸಿಗುತ್ತದೆ ಎಂದವರು ತಿಳಿಸಿದರು.

ದೃಶ್ಯಕಲಾ ಮಹಾವಿದ್ಯಾಲಯದ ಸಂಯೋಜನಾಧಿಕಾರಿ ಡಾ. ಸತೀಶಕುಮಾರ್ ಪಿ. ವಲ್ಲೇಪುರೆ ಅವರು ಸ್ವಾಗತಿಸಿದರು.

ಮಧು ಮತ್ತು ಹೇಮಲತ ಪ್ರಾರ್ಥಿಸಿದರೆ, ಉಪನ್ಯಾಸಕ ದತ್ತಾತ್ರೇಯ ಭಟ್ ನಿರೂಪಿಸಿದರು.

## ರಾಜಾಸಾಬ್‌ಗೆ ರಾಜ್ಯ ಪ್ರಶಸ್ತಿ



ದಾವಣಗೆರೆ,ನ.18- ಕರ್ನಾಟಕ ಸಿರಿ ಸಂಘಟನೆ ವತಿಯಿಂದ ನಗರದ ರೋಟರಿ ಬಾಲ ಭವನದಲ್ಲಿ ನಿನ್ನೆ ಹಮ್ಮಿಕೊಂಡಿದ್ದ ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಕಾರ್ಮಿಕ ಮತ್ತು ಸಹಕಾರಿ ಕ್ಷೇತ್ರದ ಸಾಧಕ, ಜೆಡಿಎಸ್ ಕಾರ್ಮಿಕ ವಿಭಾಗದ ರಾಜ್ಯ ಕಾರ್ಯಾಧ್ಯಕ್ಷರು ಹಾಗೂ ಬೀಡಿ ಕಾರ್ಮಿಕರ ಕಲ್ಯಾಣ ಸಹಕಾರ ಸಂಘದ ಅಧ್ಯಕ್ಷ ಎಂ ರಾಜಾಸಾಬ್ ಅವರಿಗೆ ಕರ್ನಾಟಕ ಆದರ್ಶ ರತ್ನ ರಾಜ್ಯ ಪ್ರಶಸ್ತಿ ನೀಡಿ ಸನ್ಮಾನಿಸಿ, ಗೌರವಿಸಲಾಯಿತು.

ಈ ಸಂದರ್ಭದಲ್ಲಿ ಚಲನ ಚಿತ್ರ ಹಾಸ್ಯ ನಟ ಬಿರಾದಾರ್, ಧರ್ಮದರ್ಶಿ ನೀಲಕಂಠ ಸಾಪಿ. ಆಡಿ, ಕರ್ನಾಟಕ ಸಿರಿ ಸಂಘಟನೆ ರಾಜ್ಯಾಧ್ಯಕ್ಷ ಎಲ್. ಜಯಣ್ಣ ಸೇರಿದಂತೆ ಮತ್ತು ಇತರರು ಉಪಸ್ಥಿತರಿದ್ದರು.

## ನಗರದಲ್ಲಿ ಇಂದು ಕನ್ನಡ ರಾಜ್ಯೋತ್ಸವ, ಪುನೀತ್ ಸವಿನೆನಪಿಗಾಗಿ ಗೀತನಮನ

ಕೆ.ಟಿ.ಜೆ. ನಗರ 2ನೇ ಮೇನ್, 10ನೇ ಕ್ರಾಸ್‌ನಲ್ಲಿ ಇಂದು ಬೆಳಿಗ್ಗೆ 10 ಗಂಟೆಗೆ ಪುನೀತ್ ರಾಜಕುಮಾರ್ ಅಭಿಮಾನಿಗಳ ಆಶ್ರಯದಲ್ಲಿ ಡಾ. ಬಿ. ಆರ್. ಅಂಬೇಡ್ಕರ್ ಸ್ನೇಹ ಬಳಗ ಹಾಗೂ ಕೆ.ಟಿ.ಜೆ. ನಗರ ಪುನೀತ್ ರಾಜಕುಮಾರ್ ಅಭಿಮಾನಿಗಳ ಸಂಘ ಇವರ ಆಶ್ರಯದಲ್ಲಿ ಕರ್ನಾಟಕದ ಅಧಿಪತಿ ಪವರ್ ಸ್ಟಾರ್ ಪುನೀತ್ ರಾಜಕುಮಾರ್ ಅವರ ಸವಿನೆನಪಿಗಾಗಿ ನಗು ಮುಖದ ಒಡೆಯ ಅಪ್ಪುವಿಗೆ ಅಭಿಮಾನದ ಗೀತ ನಮನ ಹಾಗೂ ಕನ್ನಡ ರಾಜ್ಯೋತ್ಸವ ಆಚರಿಸಲಾಗುವುದು. ನಂತರ 11 ಗಂಟೆಗೆ ಅನ್ನ ಸಂತರ್ಪಣೆ ನಡೆಯುವುದು ಹಾಗೂ ಸಂಜೆ 6 ಗಂಟೆಗೆ ಗೀತನಮನ ಕಾರ್ಯಕ್ರಮ ನಡೆಯುವುದು.

## ಇ-ಸ್ವತ್ತಿನ ಸಮಸ್ಯೆ ಬಗೆಹರಿಸದಿದ್ದರೆ 25 ರಂದು ಪ್ರತಿಭಟನೆ

### ರಾಣೇಬೆನ್ನೂರಿನಲ್ಲಿ ರವೀಂದ್ರಗೌಡ ಎಫ್. ಪಾಟೀಲ



ರಾಣೇಬೆನ್ನೂರು, ನ.18- ಗ್ರಾಮೀಣ ಭಾಗದ ಆಸ್ತಿ, ನಿವೇಶನ, ಮನೆಗಳ ಖರೀದಿಗೆ ಸಂಬಂಧಿಸಿದಂತೆ ಅತ್ಯಂತ ಅವಶ್ಯಕವಾಗಿ ಬೇಕಾದ ಇ-ಸ್ವತ್ತು (ಋಣ ಭಾರ) ಪ್ರಮಾಣ ಪತ್ರ ಪೂರೈಕೆ ಕಳೆದ 20 ದಿನಗಳಿಂದ ಇಡೀ ರಾಜ್ಯದಲ್ಲಿ ದೊರಕದೇ ಇರುವುದರಿಂದ ಗ್ರಾಮೀಣ ಜನರಿಗೆ ತುಂಬಾ ತೊಂದರೆಯಾಗಿದೆ ಎಂದು ರವೀಂದ್ರಗೌಡ ಎಫ್. ಪಾಟೀಲ ಗ್ರಾಮೀಣಾಭಿವೃದ್ಧಿ ಇಲಾಖೆ ಮುಖ್ಯ ಕಾರ್ಯದರ್ಶಿಗಳಿಗೆ ಗಂಭೀರವಾಗಿ ಪತ್ರ ಬರೆದಿದ್ದಾರೆ.

ಸಮಸ್ಯೆಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಬೇಜವಾಬ್ದಾರಿತನವೇ ಕಾರಣವಾಗಿದೆ. ಲಾಗಿನ್ ತೊಂದರೆ ಮತ್ತು ಸಾಫ್ಟ್‌ವೇರ್ ಅಪ್‌ಡೇಟ್‌ಗಳ ಕಾರಣ ಹೇಳುತ್ತಾ, ಇಂದು ಸರಿ ಪಡಿಸುತ್ತೇವೆ, ನಾಳೆ ಸರಿಪಡಿಸುತ್ತೇವೆಂದು ಹೇಳುತ್ತಾ, ಇದುವರೆಗೆ ಸಮಸ್ಯೆ ಬಗೆಹರಿಸಿಲ್ಲ. ಇಲಾಖೆಗೆಂದೇ ಒಬ್ಬ ಕ್ಯಾಬಿನೆಟ್ ಮಂತ್ರಿ, ಅನೇಕ ಐಎಎಸ್, ಕೆಎಎಸ್ ಅಧಿಕಾರಿಗಳ ತಂಡವೇ ಇದ್ದರೂ ಕೂಡಾ ಇಂತಹ ದೊಡ್ಡ ಪ್ರಮಾಣದ ಸಮಸ್ಯೆ ಬಗೆ ಹರಿಸಲು ವಿಫಲರಾಗಿರುವುದು ಸರ್ಕಾರದ ಆಡಳಿತಕ್ಕೆ ಹಿಡಿದ ಕೈಗನ್ನಡಿಯಾಗಿದೆ ಎಂದು ಹೇಳಿದ್ದಾರೆ.

ಇಲಾಖೆಯವರೇ ಹೇಳುತ್ತಿರುವ ಲಾಗಿನ್ ಸಮಸ್ಯೆ ಮತ್ತು ಸಾಫ್ಟ್‌ವೇರ್ ಸಮಸ್ಯೆಯನ್ನು ಬಗೆಹರಿಸಿ ಗ್ರಾಮೀಣ ಜನರ ಸೇವೆಗೆ ಅನುಕೂಲ ಕಲ್ಪಿಸಿಕೊಡದಿದ್ದರೆ ಇದೇ ದಿನಾಂಕ 25ರ ಗುರುವಾರ ಜಿಲ್ಲೆಯ ಎಲ್ಲಾ ತಾಲ್ಲೂಕು ಪಂಚಾಯತ್ ಮತ್ತು ಜಿಲ್ಲೆಯ ಎಲ್ಲಾ ಗ್ರಾಮ ಪಂಚಾಯತ್‌ಗಳಿಗೆ ಏಕಕಾಲಕ್ಕೆ ಬೀಗ ಜಡಿದು ಇಲಾಖೆ ಮತ್ತು ಸರ್ಕಾರದ ನಿರ್ಲಕ್ಷ್ಯತನವನ್ನು ಖಂಡಿಸಲಾಗುವುದೆಂದು ಅವರು ಪತ್ರ ಬರೆದು ಎಚ್ಚರಿಸಿದ್ದಾರೆ.

## ಕರಾಮುವಿ ಸರ್ಟಿಫಿಕೇಟ್ ಕೋರ್ಸ್ ಪ್ರವೇಶಾತಿ ಅವಧಿ ವಿಸ್ತರಣೆ

ದಾವಣಗೆರೆ, ನ.18- ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ 2021-22ರ ಜುಲೈ (ನವೆಂಬರ್) ಸಾಲಿನ ಪ್ರಥಮ ವರ್ಷದ ಬಿಎ, ಬಿಕಾಂ, ಬಿಎಲ್‌ಐ.ಎಸ್‌ಸಿ, ಬಿಬಿಎ, ಬಿಎಸ್‌ಸಿ, ಬಿಸಿಎ, ಎಂ.ಎ, ಎಂಕಾಂ, ಎಂಬಿಎ, ಎಂಎಲ್.ಐ.ಎಸ್‌ಸಿ, ಡಿಪ್ಲೋಮಾ, ಡಿಪ್ಲೋಮಾ ಸರ್ಟಿಫಿಕೇಟ್ ಕೋರ್ಸ್‌ನ ಅಧ್ಯಯನ ವಿಷಯಗಳ ಪ್ರವೇಶಾತಿಗೆ ಯಾವುದೇ ದಂಡ ಶುಲ್ಕವಿಲ್ಲದೆ ಪ್ರವೇಶಾತಿ ಪಡೆಯಲು ಡಿಸೆಂಬರ್10 ರವರೆಗೆ ಅವಧಿ ವಿಸ್ತರಿಸಲಾಗಿದೆ.

ಮಾಹಿತಿಗಾಗಿ ವಿಶ್ವವಿದ್ಯಾನಿಲಯ ವೆಬ್‌ಸೈಟ್ ಅಥವಾ ದೂ.8095939359, 9008905457 ಕ್ಕೆ ಸಂಪರ್ಕಿಸಬಹುದು.

## ಮುಕ್ತ ವಿವಿ ಪ್ರವೇಶಕ್ಕೆ ಆಹ್ವಾನ

ದಾವಣಗೆರೆ, ನ.18- ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ 2018-19, 2019-20 ಮತ್ತು 2020-21ನೇ (ಜುಲೈ ಆವೃತ್ತಿ) ಸಾಲಿನಲ್ಲಿ ಸ್ನಾತಕ, ಸ್ನಾತಕೋತ್ತರ ಪದವಿಗಳಿಗೆ ಪ್ರವೇಶಾತಿ ಪಡೆದಿರುವ ವಿದ್ಯಾರ್ಥಿಗಳು 2021-22 ನೇ ಶೈಕ್ಷಣಿಕ ಸಾಲಿಗೆ ಸ್ನಾತಕ ಪದವಿಯ ದ್ವಿತೀಯ ಮತ್ತು ತೃತೀಯ ಬಿಎ, ಬಿಕಾಂ ಹಾಗೂ ಸ್ನಾತಕೋತ್ತರ ಪದವಿಯ ಎಂ.ಎ., ಎಂ.ಕಾಂ ಪದವಿಗಳಿಗೆ ಯಾವುದೇ ದಂಡ ಶುಲ್ಕವಿಲ್ಲದೆ ಪ್ರವೇಶಾತಿ ಹೊಂದಲು ಇದೇ ದಿನಾಂಕ 20 ಕೊನೆಯ ದಿನವಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ವಿಶ್ವವಿದ್ಯಾಲಯದ ವೆಬ್‌ಸೈಟ್ www.ksoumysuru.ac.in ಅಥವಾ ಮೊ.ನಂ. 99160 09318, 98449 26125ಕ್ಕೆ ಸಂಪರ್ಕಿಸಬಹುದು ಎಂದು ಪ್ರಾದೇಶಿಕ ನಿರ್ದೇಶಕ ಡಾ.ವಿಜಯಪ್ರಕಾಶ್ ತಿಳಿಸಿದ್ದಾರೆ.

## ಲೋಕ ಕಲ್ಯಾಣಕ್ಕಾಗಿ ಅಧ್ಯಾತ್ಮ ಉತ್ಸವ



ದಾವಣಗೆರೆ, ನ.18 - ಸ್ಫೂರ್ತಿ ಸೇವಾ ಟ್ರಸ್ಟ್, ಶ್ರೀ ಗಾಯತ್ರಿ ಪರಿವಾರ, ಅಭಯಾಶ್ರಮ, ಇಸ್ಕಾನ್ ದಾವಣಗೆರೆ ಇವರ ಸಂಯುಕ್ತ ಆಶ್ರಯದಲ್ಲಿ ದಾವಣಗೆರೆಯ ಆರ್.ಹೆಚ್. ಛತ್ರದಲ್ಲಿ ಹಮ್ಮಿಕೊಂಡಿದ್ದ ಲೋಕ ಕಲ್ಯಾಣಕ್ಕಾಗಿ ಅಧ್ಯಾತ್ಮ ಉತ್ಸವ ಶ್ರೀ ಗಾಯತ್ರಿ ಪರಿವಾರದ ಅಧ್ಯಕ್ಷರಾದ ಡಾ.ಸುಶೀಲಮ್ಮ ಶ್ರೀ ಗರುಡ ಧ್ವಜಾರೋಹಣ ನೆರವೇರಿಸಿದರು.

ಶ್ರೀ ಗಾಯತ್ರಿ ಪರಿವಾರದ ಪ್ರಧಾನ ಕಾರ್ಯದರ್ಶಿ ಸಾಲಿಗ್ರಾಮ ಗಣೇಶ್ ಶೆಣೈ ಸೇರಿದಂತೆ, ಪದಾಧಿಕಾರಿಗಳು ಉಪಸ್ಥಿತರಿದ್ದರು

## ಸಂಘ - ಸಂಸ್ಥೆಗಳ ನವೀಕರಣಕ್ಕೆ ಕೊನೆಯ ಅವಕಾಶ

ದಾವಣಗೆರೆ, ನ.18- ಐದು ವರ್ಷಗಳಿಗೂ ಮೇಲ್ಪಟ್ಟು ನವೀಕರಣಗೊಳ್ಳದೇ ಇರುವ ಸಂಘ - ಸಂಸ್ಥೆಗಳ ನವೀಕರಣಕ್ಕಾಗಿ ಕೊನೆಯ ಅವಕಾಶ ನೀಡಲಾಗಿದೆ.

ಜಿಲ್ಲಾ ವ್ಯಾಪ್ತಿಯಲ್ಲಿನ ಸಂಘ-ಸಂಸ್ಥೆಗಳು ಪ್ರತಿ ವರ್ಷಕ್ಕೆ ಹೆಚ್ಚುವರಿ ರೂ 2 ಸಾವಿರ ರೂ. ದಂಡ ಪಾವತಿಸಿ ಮತ್ತು ಅವಶ್ಯ ದಾಖಲೆಗಳನ್ನು ಸಲ್ಲಿಸಿ ಡಿಸೆಂಬರ್ 31ರ ಒಳಗಾಗಿ ನವೀಕರಣ ಮಾಡಿಸಿಕೊಳ್ಳಬಹುದಾಗಿರುತ್ತದೆ ಎಂದು ಜಿಲ್ಲಾ ಸಂಘಗಳ ನೋಂದಣಾಧಿಕಾರಿಗಳು ಹಾಗೂ ಸಹಕಾರ ಸಂಘಗಳ ಉಪನಿಬಂಧಕ ಬಿ.ಜಯಪ್ರಕಾಶ್ ತಿಳಿಸಿದ್ದಾರೆ.


**ಮಾನ್ಯ ಭೂ ಮಾಪನ ತಾಂತ್ರಿಕ ಸಹಾಯಕರು ಹಾಗೂ ಪದನಿಮಿತ್ತ ಭೂ ದಾಖಲೆಗಳ ಉಪ-ನಿರ್ದೇಶಕರ ನ್ಯಾಯಾಲಯ, ದಾವಣಗೆರೆ**

ಭೂಮಿ ಅಪೀಲು ನಂ.483/2020-21
ಅಪೀಲುದಾರರು: ಶ್ರೀ ಎಂ.ಪಿ. ಕುಮಾರಸ್ವಾಮಿ
ವಿರುದ್ಧ
ಎದುರುದಾರರು: ಭೂ ದಾಖಲೆಗಳ ಸಹಾಯಕ ನಿರ್ದೇಶಕರು, ದಾವಣಗೆರೆ ತಾಲ್ಲೂಕು ಮತ್ತು ಇತರರು.

6. ಶ್ರೀಮತಿ ಲತಾ ಕೋಂ ಲೇಟ್ ಸಿದ್ಧಾರ್ಥ ಎಂ.ಪಿ. 7. ಶ್ರೀಮತಿ ಎಂ.ಎಸ್. ಅಕ್ಷತಾ ಬಿನ್ ಲೇಟ್ ಸಿದ್ಧಾರ್ಥ ಎಂ.ಪಿ. 8. ಶ್ರೀ ಎಂ.ಎಸ್. ಆಶ್ರೀತ್ ಬಿನ್ ಲೇಟ್ ಸಿದ್ಧಾರ್ಥ ಎಂ.ಪಿ. ಮೇಲ್ಕಂಡ 6 ರಿಂದ 8ನೇಯವರ ವಾಸ: # 241/2 'ಸಿದ್ಧಾರ್ಥ ಸದನ', 4ನೇ ಮುಖ್ಯರಸ್ತೆ, 4ನೇ ಅಡ್ಡ ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ.
12. ಶ್ರೀ ಎಂ. ಸತೀಶ್ ಬಿನ್ ಲೇಟ್ ಮುನಿಯಪ್ಪ, ವಾಸ: #1645/10, ಟೀಚರ್ಸ್ ಲೇಔಟ್, ವಿದ್ಯಾನಗರ, ದಾವಣಗೆರೆ-577005.
17.ಶ್ರೀ ಶಿವಾನಂದಪ್ಪ ಎಸ್.ಜಿ. ಬಿನ್ ಪಟೇಲ್ ಸಿದ್ದಪ್ಪ 18. ಶ್ರೀ ಜಿ.ಬಸವರಾಜಪ್ಪ ಬಿನ್ ಎಸ್.ಜಿ. ರಾಮಚಂದ್ರಪ್ಪ 19. ಶ್ರೀ ಎಂ.ಸಿ. ನಾಗರಾಜ ಬಿನ್ ಅಪೀಲುದಾರರಿಗೆ ತಿಳಿದಿರುವುದಿಲ್ಲ. ಮೇಲ್ಕಂಡ 17 ರಿಂದ 19ನೇಯವರ ವಾಸ: ಶಿರಮಗೊಂಡನಹಳ್ಳಿ ಗ್ರಾಮ, ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆ.

**ಆದೇಶ 5 ನಿಯಮ 20 ರ ವ್ಯವಹಾರ ಪ್ರಕ್ರಿಯಾ ಸಂಹಿತೆ ಪ್ರಕಾರ 6 ರಿಂದ 8, 12 ಮತ್ತು 17 ರಿಂದ 19ನೇ ಎದುರುದಾರರಿಗೆ ಅಪೀಲು ನೋಟೀಸ್**

ಈ ಮೇಲ್ಕಂಡ ಅಪೀಲುದಾರರು ಸದರಿ ಅಪೀಲನ್ನು ದಾವಣಗೆರೆ ತಾಲ್ಲೂಕು, ಆನಗೋಡು ಹೋಬಳಿ, ಪಾಮೇನಹಳ್ಳಿ ಗ್ರಾಮದ ಸ.ನಂ. 54 ರಲ್ಲಿ ಈ ಹಿಂದೆ ಆಗಿರುವಂತಹ ದೋಷಯುಕ್ತ ಪೋಡು ದುರಸ್ತುಗಳನ್ನು ರದ್ದುಪಡಿಸಿ, ಹೊಸದಾಗಿ ಪೋಡು ದುರಸ್ತು ಮಾಡಲು ಕೋರಿ ಅಪೀಲನ್ನು ಸಲ್ಲಿಸಿದ್ದು, ಸದರಿ ಸರ್ವೇ ನಂಬರ್‌ನಲ್ಲಿ ನಿಮ್ಮಗಳ ಹೆಸರಿಗೆ ಖಾತೆ ಇರುವ ಕಾರಣ ನಿಮ್ಮಗಳನ್ನು ಎದುರುದಾರರನ್ನಾಗಿ ಮಾಡಲಾಗಿರುತ್ತದೆ. ಸದರಿ ಅಪೀಲಿನಲ್ಲಿ ನೋಂದಾಯಿತ ಅಂಚೆಯ ಮೂಲಕ ನ್ಯಾಯಾಲಯದಿಂದ ನೋಟೀಸ್ ಕಳುಹಿಸಿದ್ದರೂ ಸಹ ನೀವು ನೋಟೀಸನ್ನು ತೆಗೆದುಕೊಳ್ಳದೇ ಇರುವ ಕಾರಣ ನಿಮ್ಮ ಹಾಜರಾತಿಗಾಗಿ ಮಾನ್ಯ ನ್ಯಾಯಾಲಯವು ದಿನಾಂಕ 2.12.2021 ರಂದು ಮುದ್ದತ್ತು ನಿಗದಿಪಡಿಸಿರುತ್ತದೆ. ಆದ್ದರಿಂದ ಸದರಿ ತಾರೀಖಿನಂದು ನೀವು ಖುದ್ದಾಗಿಯಾಗಲೀ ಅಥವಾ ನಿಮ್ಮ ವಕೀಲರ ಮೂಲಕವಾಗಲೀ ಮೇಲ್ಕಂಡ ಘನ ನ್ಯಾಯಾಲಯದಲ್ಲಿ ಮಧ್ಯಾಹ್ನ 3 ಗಂಟೆಗೆ ಹಾಜರಾಗಿ ನಿಮ್ಮ ತಕಾರರು ಇದ್ದರೆ ಸಲ್ಲಿಸತಕ್ಕದ್ದು. ತಪ್ಪಿದಲ್ಲಿ ಮೇಲ್ಕಂಡ ಅರ್ಜಿಯನ್ನು ನಿಮ್ಮಗಳ ವಿರುದ್ಧ ಪ್ರಕರಣದ ಅರ್ಹತೆಯ ಆಧಾರದ ಮೇಲೆ ಏಕಪಕ್ಷೀಯವಾಗಿ ತೀರ್ಮಾನ ಮಾಡಲಾಗುವುದು.
ನ್ಯಾಯಾಲಯದ ಮೊಹರು ಹಾಗೂ ನನ್ನ ಸಹಿಯೊಂದಿಗೆ ದಿನಾಂಕ 18.11.2021ರಂದು ನೀಡಲಾಗಿದೆ.

ಅಪೀಲುದಾರರ ಪರ ವಕೀಲರು
(ಆರ್.ಟಿ ವಿನಯ ಕುಮಾರ್)
ಸ್ಥಳ: ದಾವಣಗೆರೆ, ದಿನಾಂಕ 18.11.2021

ನ್ಯಾಯಾಲಯದ ಆದೇಶದ ಮೇರೆಗೆ,
ಭೂ ದಾಖಲೆಗಳ ಉಪನಿರ್ದೇಶಕರು
ದಾವಣಗೆರೆ ಜಿಲ್ಲೆ, ದಾವಣಗೆರೆ.


# ಪರಿಷತ್‌ನ 15ಕ್ಕೂ ಹೆಚ್ಚು ಸ್ಥಾನಗಳಲ್ಲಿ ಗೆಲುವು : ಶೆಟ್ಟರ್



ದಾವಣಗೆರೆ, ನ. 18 - 25 ಸ್ಥಾನಗಳಿಗೆ ನಡೆಯಲಿರುವ ವಿಧಾನ ಪರಿಷತ್ ಚುನಾವಣೆಯಲ್ಲಿ ಬಿಜೆಪಿ 15ಕ್ಕೂ ಹೆಚ್ಚು ಸ್ಥಾನಗಳಲ್ಲಿ ಗೆಲ್ಲಲಿದೆ ಹಾಗೂ ಪರಿಷತ್ತಿನಲ್ಲಿ ಬಹುಮತ ವನ್ನೂ ಪಡೆಯಲಿದೆ ಎಂದು ಮಾಜಿ ಮುಖ್ಯಮಂತ್ರಿ ಹಾಗೂ ಬಿಜೆಪಿ ಹಿರಿಯ ನಾಯಕ ಜಗದೀಶ್ ಶೆಟ್ಟರ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ನಗರದಲ್ಲಿ ಇಂದು ಕರೆಯಲಾಗಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡುತ್ತಿದ್ದ ಅವರು, ನಾಲ್ಕು ತಂಡಗಳಲ್ಲಿ 31 ಜಿಲ್ಲೆಗಳಲ್ಲೂ ಜನಸ್ವರಾಜ್ ಸಮಾವೇಶ ನಡೆಸುತ್ತಿದ್ದೇವೆ. ಗ್ರಾಮ ಪಂಚಾಯಿತಿ ಸದಸ್ಯರು ಹಾಗೂ ಪಕ್ಷದ ಕಾರ್ಯಕರ್ತರೊಂದಿಗೆ ಸಮಾಲೋಚನೆ ನಡೆಸುವ ಮೂಲಕ ಪಕ್ಷವನ್ನು ಬೇರು ಮಟ್ಟದಲ್ಲಿ ಕಟ್ಟಲಾಗುವುದು ಎಂದಿದ್ದಾರೆ.

ಪ್ರತಿ ಪರಿಷತ್ ಕ್ಷೇತ್ರದ ಟಿಕೆಟ್‌ಗಾಗಿ ಹಲವು ಆಕಾಂಕ್ಷಿಗಳಿದ್ದಾರೆ. ಈಗಾಗಲೇ ಕೋರ್ ಕಮಿಟಿ ಸಭೆಯಲ್ಲಿ ಅಭ್ಯರ್ಥಿಗಳ ಹೆಸರುಗಳನ್ನು ಅಂತಿಮಗೊಳಿಸಿ, ವರಿಷ್ಠರಿಗೆ ಕಳಿಸಲಾಗಿದೆ. ಶುಕ್ರವಾರದ ಒಳಗೆ ಅಭ್ಯರ್ಥಿಗಳ ಪಟ್ಟಿ ಬಿಡುಗಡೆ ನಿರೀಕ್ಷೆ ಇದೆ ಎಂದರು.

ಕಳೆದ ಉಪ ಚುನಾವಣೆ ಹಾಗೂ ಈಗಿನ ಪರಿಷತ್ ಚುನಾವಣೆಯ ಫಲಿತಾಂಶಗಳನ್ನು ಜನಾದೇಶ ಎಂದು ಪರಿಗಣಿಸಬೇಕಾಗಿಲ್ಲ. ಸಿಂಧಗಿ ಉಪ ಚುನಾವಣೆಯಲ್ಲಿ ಜೆಡಿಎಸ್‌ನ ಸ್ಥಾನವನ್ನು ನಾವು ಗೆದ್ದುಕೊಂಡಿದ್ದೇವೆ. ಹಾನಗಲ್‌ನಲ್ಲಿ ಗೆಲ್ಲಲು ಸಾಧ್ಯವಾಗ ದಿದ್ದರೂ ಹೆಚ್ಚಿನ ಮತಗಳನ್ನು ಪಡೆಯುವ ಮೂಲಕ ಶಕ್ತಿಯನ್ನು ತೋರಿಸಿದ್ದೇವೆ. ಉಪ ಚುನಾವಣೆಯಲ್ಲಿ ಸೋಲು–ಗೆಲುವು ಸಹಜ. ಸಾರ್ವತ್ರಿಕ ಚುನಾವಣೆ ಫಲಿತಾಂಶಕ್ಕೆ ಮಾತ್ರ ಮುಖ್ಯಮಂತ್ರಿ ಹೊಣೆಗಾರ ರಾಗಿರುತ್ತಾರೆ ಎಂದವರು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

ಬಿಜೆಪಿ ಆಡಳಿತದ ಬಗ್ಗೆ ಟೀಕಿಸಲು ಯಾವುದೇ ವಿಷಯ ಇಲ್ಲದಿರುವುದರಿಂದ ಕಾಂಗ್ರೆಸ್‌ನವರು ಬಿಟ್ ಕಾಯಿನ್ ಬಗ್ಗೆ ಆರೋಪ ಮಾಡುತ್ತಿದ್ದಾರೆ ಎಂದು ಮತ್ತೊಂದು ಪ್ರಶ್ನೆಗೆ ಉತ್ತರಿಸಿದ ಶೆಟ್ಟರ್, ಸಿದ್ದರಾಮಯ್ಯ ಅವರಿಗೆ ನಿಜವಾಗಿಯೂ ಕಾಳಜಿ ಇದ್ದಿದ್ದರೆ, 2016ರಿಂದ ಮುಖ್ಯಮಂತ್ರಿಯಾಗಿದ್ದಾಗ ಬಿಟ್ ಕಾಯಿನ್ ಪ್ರಕರಣದ ಬಗ್ಗೆ ಕ್ರಮ ಕೈಗೊಳ್ಳಬೇಕಿತ್ತು ಎಂದಿದ್ದಾರೆ.

ಮುಂದಿನ ಚುನಾವಣೆಯಲ್ಲಿ ಸ್ಪರ್ಧಿಸುವ ಕುರಿತ ಪ್ರಶ್ನೆಗೆ ಉತ್ತರಿಸಿದ ಬಿಜೆಪಿ ಉಪಾಧ್ಯಕ್ಷ ಬಿ.ವೈ. ವಿಜಯೇಂದ್ರ, ಸ್ಪರ್ಧೆಯ ಬಗ್ಗೆ ರಾಜ್ಯಾಧ್ಯಕ್ಷರು ಹಾಗೂ ಪಕ್ಷ ನಿರ್ಧರಿಸಲಿದೆ ಎಂದರು.

ಸಚಿವರಾದ ಭೈರತಿ ಬಸವರಾಜ, ಕೆ. ಗೋಪಾಲಯ್ಯ, ಸಂಸದ ಜಿ.ಎಂ. ಸಿದ್ದೇಶ್ವರ, ಶಾಸಕರಾದ ಎಸ್.ವಿ.ರಾಮಚಂದ್ರ, ಪ್ರೊ.ಎನ್. ಲಿಂಗಣ್ಣ, ಬಿಜೆಪಿ ರಾಜ್ಯ ಉಪಾಧ್ಯಕ್ಷರಾದ ಬಿ.ವೈ.ವಿಜಯೇಂದ್ರ, ಎಂ.ರಾಜೇಂದ್ರ, ಪ್ರಧಾನ ಕಾರ್ಯದರ್ಶಿ ಮಹೇಶ್ ತೆಂಗಿನಕಾಯಿ, ಕೆ. ಎಸ್. ನವೀನ್, ತುಳಸಿ ಮುನಿರಾಜುಗೌಡ, ಮೇಯರ್ ಎಸ್.ಟಿ. ವೀರೇಶ್, ದೂಡಾ ಅಧ್ಯಕ್ಷ ದೇವರಮನಿ ಶಿವಕುಮಾರ್, ಬಿಜೆಪಿ ಜಿಲ್ಲಾ ಘಟಕದ ಅಧ್ಯಕ್ಷ ವೀರೇಶ್ ಹನಗವಾಡಿ, ಪ್ರಧಾನ ಕಾರ್ಯದರ್ಶಿ ಬಿ.ಎಸ್. ಜಗದೀಶ್ ಮತ್ತಿತರರು ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.


**ಶ್ರೀ ಮುರುಘರಾಜೇಂದ್ರ ಕೋ-ಆಪರೇಟಿವ್ ಬ್ಯಾಂಕ್ ಲಿ.**

#1058/3-4, ಜಯದೇವ ಸರ್ಕಲ್ ಹತ್ತಿರ, ಲಾಯರ್ ರೋಡ್, ಕೆ.ಬಿ. ಬಡಾವಣೆ, ದಾವಣಗೆರೆ-577 002.
ಫೋನ್ : 08192 257901/255875, 230304, e-mail : muruga.bank@yahoo.com

**ಮಾನ್ಯ ಸದಸ್ಯರುಗಳ ಗಮನಕ್ಕೆ**

**ದಿನಾಂಕ 26.11.2021ನೇ ಶುಕ್ರವಾರ ಮಧ್ಯಾಹ್ನ 12 ಗಂಟೆಗೆ ವಿಡಿಯೋ ಕಾನ್ಫರೆನ್ಸ್/ ವರ್ಚ್ಯುವಲ್ ಮಾಧ್ಯಮದ ಮೂಲಕ ಬ್ಯಾಂಕಿನ 2020-21 ನೇ ಸಾಲಿನ 47 ನೇ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ**ಯನ್ನು ಕರೆಯಲಾಗಿದ್ದು, ಸರ್ವ ಸದಸ್ಯರುಗಳಿಗೂ ವಾರ್ಷಿಕ ವರದಿಯನ್ನು ಅಂಚೆ ಮೂಲಕ ಕಳುಹಿಸಿ ಕೊಟ್ಟಿರುತ್ತದೆ. ಅವುಗಳ ಪೈಕಿ ಕೆಲವು ವಿಳಾಸ ಬದಲಾದ/ ಸರಿಯಾದ ವಿಳಾಸವಿಲ್ಲದ ಕಾರಣ ವಾಪಸ್ ಬಂದಿರುತ್ತವೆ. ಅಂತಹ ಸದಸ್ಯರುಗಳು ಬದಲಾದ/ಸರಿಯಾದ ವಿಳಾಸವನ್ನು ನೀಡಿ ಸರಿಪಡಿಸಿಕೊಳ್ಳುವುದು. ಹಾಗೂ 'ಕೋವಿಡ್-19' ಸಾಂಕ್ರಾಮಿಕ ರೋಗ ಇರುವ ಕಾರಣ ವಾರ್ಷಿಕ ಮಹಾಸಭೆಗೆ ಸದಸ್ಯರುಗಳು ವಿಡಿಯೋ ಕಾನ್ಫರೆನ್ಸ್/ ವರ್ಚ್ಯುವಲ್ ಮಾಧ್ಯಮದ ಮೂಲಕ ಹಾಜರಾಗಬೇಕಾಗಿರುವುದರಿಂದ **'ZOOM APP'** ಅಪ್ಲಿಕೇಷನ್ ನಲ್ಲಿ ಲಾಗಿನ್ ಆಗಿ ಭಾಗವಹಿಸಬೇಕಾಗಿರುತ್ತದೆ, ಕಾರಣ ಸದಸ್ಯರುಗಳು ಬ್ಯಾಂಕಿಗೆ ಆದಷ್ಟು ಬೇಗನೆ ನಿಮ್ಮ ಮೊಬೈಲ್ ನಂಬರ್‌ಗಳನ್ನು ಹಾಗೂ ಇ-ಮೇಲ್ ಐಡಿ ಇದ್ದವರು ಇ-ಮೇಲ್ ಐಡಿ ಗಳನ್ನು ಒದಗಿಸಬೇಕೆಂದು ಹಾಗು ಎಲ್ಲಾ ಸದಸ್ಯರುಗಳ ಹಾಜರಾತಿ ಕಡ್ಡಾಯವಾಗಿರುವುದರಿಂದ **ದಿನಾಂಕ:26.11.2021ನೇ ಶುಕ್ರವಾರ ಮಧ್ಯಾಹ್ನ 12 ಗಂಟೆಗೆ 'ZOOM APP'** ಲಿಂಕ್ ಒತ್ತುವುದರ ಮೂಲಕ ತಪ್ಪದೇ ಸಭೆಯಲ್ಲಿ ಭಾಗವಹಿಸಿ ಸಭೆಯನ್ನು ಯಶಸ್ವಿಗೊಳಿಸಬೇಕೆಂದು ಕೋರಲಾಗಿದೆ.

ಹೆಚ್ಚಿನ ಮಾಹಿತಿಗಾಗಿ, **WWW.AGM.SHREEMURUGHARAJENDRACOOPBANK.COM**ನಲ್ಲಿ ಲಾಗಿನ್ ಆಗುವ ಮೂಲಕ ವೀಕ್ಷಿಸಬಹುದು ಅಥವಾ **ದೂರವಾಣಿ ಸಂಖ್ಯೆ: 08192-257901/230304 ಮೊಬೈಲ್ ನಂ: 9482142386 ಗೆ ಸಂಪರ್ಕಿಸಬಹುದು.**

| ಸಹಿ/- | ಸಹಿ/- | ಸಹಿ/- |
|---|---|---|
| **ಎಂ. ಜಯಕುಮಾರ್** | **ಎಸ್. ಓಂಕಾರಪ್ಪ** | **ಎಸ್.ಪಿ. ವೀರಭದ್ರಪ್ಪ** |
| ಅಧ್ಯಕ್ಷರು | ಉಪಾಧ್ಯಕ್ಷರು | ವ್ಯವಸ್ಥಾಪಕರು |

# ಮಕ್ಕಳಿಗೆ ತಪ್ಪದೇ ಪಿಸಿವಿ ಲಸಿಕೆ ಹಾಕಿಸಿ

## ನ್ಯುಮೋನಿಯಾ, ನ್ಯೂಮೊಕಾಕಲ್ ಕಾಯಿಲೆಗಳಿಂದ ರಕ್ಷಿಸಿ: ಡಿಸಿ



ದಾವಣಗೆರೆ, ನ. 18- ಕೊರೊನಾ ಸಂಭಾವ್ಯ 3ನೇ ಅಲೆ ತಡೆಗಟ್ಟಲು ಹಾಗೂ ಮಕ್ಕಳಲ್ಲಿ ಕಂಡುಬರುವ ನ್ಯುಮೋನಿಯಾ, ನ್ಯೂಮೊಕಾಕಲ್ ನಂತಹ ಮಾರಕ ಕಾಯಿಲೆಗಳಿಂದ ಮಕ್ಕಳನ್ನು ರಕ್ಷಿಸಲು ನ್ಯೂಮೋಕಾಕಲ್ ಕಾಂಜುಗೇಟ್ ಲಸಿಕೆಯನ್ನು (ಪಿಸಿವಿ) ತಪ್ಪದೇ ಹಾಕಿಸುವಂತೆ ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ ಮನವಿ ಮಾಡಿದರು.

ನಗರದ ಚಿಗಟೇರಿ ಜಿಲ್ಲಾಸ್ಪತ್ರೆಯಲ್ಲಿ ಗುರುವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇವರುಗಳ ಸಂಯುಕ್ತಾಶ್ರಯ ದಲ್ಲಿ ಹಮ್ಮಿಕೊಂಡಿದ್ದ ನ್ಯುಮೋನಿಯಾ, ನ್ಯುಮೋಕಾಕಲ್ ಮತ್ತು ಮೆನಿಂಟೈಟಸ್ ವಿರುದ್ಧ ರಕ್ಷಣೆಗೆ ನ್ಯೂಮೋಕಾಕಲ್ ಕಾಂಜುಗೇಟ್ ಲಸಿಕೆ (ಪಿಸಿವಿ) ಕಾರ್ಯಕ್ರಮದ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಪಿಸಿವಿ ನೂತನ ಲಸಿಕೆಯನ್ನು ಉಚಿತವಾಗಿ ಜಿಲ್ಲೆಯ ಸರ್ಕಾರಿ ಆಸ್ಪತ್ರೆ ಹಾಗೂ ಎಲ್ಲಾ ತಾಲ್ಲೂಕು ಆಸ್ಪತ್ರೆಗಳಲ್ಲಿ ಹಾಕಲಾಗುತ್ತಿದ್ದು, ಪಾಲಕರು ತಮ್ಮ ಮಕ್ಕಳಿಗೆ ಲಸಿಕೆ ಹಾಕಿಸುವ ಮೂಲಕ ಕಾರ್ಯಕ್ರಮದ ಸದುಪಯೋಗ ಪಡೆದುಕೊಳ್ಳಬೇಕು ಎಂದರು.

ಮಗುವಿನ ಆರೋಗ್ಯಕರ ಬೆಳವಣಿಗೆಗೆ ರೋಗ ನಿರೋಧಕ ಶಕ್ತಿ ಅಗತ್ಯ. ಹುಟ್ಟಿದ ದಿನದಿಂದ 5 ವರ್ಷಗಳ ತನಕ ಮಕ್ಕಳಿಗೆ ಹಲವು ಲಸಿಕೆಗಳನ್ನು ಹಾಕಲಾಗುತ್ತದೆ. ಈ ಲಸಿಕೆಗಳ ಜೊತೆ ಹೆಚ್ಚುವರಿಯಾಗಿ 1.5 ತಿಂಗಳ ಮಗುವಿಗೆ ಮೊದಲ ಡೋಸ್, 3.5 ತಿಂಗಳಿಗೆ 2ನೇ ಡೋಸ್ ಹಾಗೂ 9 ತಿಂಗಳಿಗೆ ಬೂಸ್ಟರ್ ಡೋಸ್ ನ್ಯೂಮೋಕಾಕಲ್ ಕಾಂಜುಗೇಟ್ (ಪಿಸಿವಿ) ಲಸಿಕೆಯನ್ನು ನೀಡಲಾಗುತ್ತದೆ. ಈ ಲಸಿಕೆಯು ಮಕ್ಕಳ ಶ್ವಾಸಕೋಶ ಹಾಗೂ ಮೆದುಳು ಸುರಕ್ಷಿತವಾಗಿರಲು, ಉಸಿರಾಟದ ತೊಂದರೆಗಳಿಗೆ ಸಹಕಾರಿಯಾಗುತ್ತದೆ ಎಂದರು.

ಲಸಿಕಾ ಕಾರ್ಯಕ್ರಮ ರಾಜ್ಯಾದ್ಯಂತ ಪ್ರಾರಂಭವಾಗಿದ್ದು, ಜಿಲ್ಲೆಯ ಎಲ್ಲಾ ತಾಲ್ಲೂಕು ಆಸ್ಪತ್ರೆಗಳು ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಈ ಲಸಿಕೆ ನೀಡಲಾಗುತ್ತಿದೆ. ಜಿಲ್ಲೆಯಲ್ಲಿ ಈ ಲಸಿಕೆ ನೀಡಲು 2256 ಫಲಾನುಭವಿ ಮಕ್ಕಳನ್ನು ಗುರುತಿಸಲಾಗಿದ್ದು, ಎಲ್ಲಾ ತಾಯಂದಿರು ತಮ್ಮ ಮಕ್ಕಳ ರಕ್ಷಣೆಗೆ ಹತ್ತಿರದ ಸರ್ಕಾರಿ ಆಸ್ಪತ್ರೆಗಳಲ್ಲಿ ಈ ಲಸಿಕೆ ಹಾಕಿಸಬೇಕು ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ನ್ಯೂಮೋಕಾಕಲ್ ಕಾಂಜುಗೇಟ್ ಲಸಿಕೆ ಸಂಬಂಧ ಕರಪತ್ರ ಹಾಗೂ ಭಿತ್ತಿಪತ್ರಗಳನ್ನು ಬಿಡುಗಡೆ ಮಾಡಲಾಯಿತು.

ಕಾರ್ಯಕ್ರಮದಲ್ಲಿ ಡಿಹೆಚ್‌ಓ ಡಾ.ನಾಗರಾಜ್, ಜಿಲ್ಲಾ ಸರ್ಜನ್ ಡಾ.ಜಯಪ್ರಕಾಶ್, ಜಿಲ್ಲಾ ಆರ್.ಸಿ.ಹೆಚ್ ಅಧಿಕಾರಿ ಡಾ.ಮೀನಾಕ್ಷಿ, ಡಾ.ಶಶಿಧರ್, ಡಾ. ರೇಣುಕಾರಾಧ್ಯ, ಡಾ.ಎಲ್.ಡಿ.ವೆಂಕಟೇಶ್ ಸೇರಿದಂತೆ ಪಾಲಕರು, ಮಕ್ಕಳು ಪಾಲ್ಗೊಂಡಿದ್ದರು.

# ಪುಸ್ತಕಗಳು ಸಾರಸ್ವತ ಲೋಕದ ಆತ್ಮಗಳು

## 'ನಮ್ಮ ನಡಿಗೆ ಪುಸ್ತಕದ ಕಡೆಗೆ' ಕಾರ್ಯಕ್ರಮದಲ್ಲಿ ಡಾ. ಎಂ.ಜಿ. ಈಶ್ವರಪ್ಪ ವಿಶ್ಲೇಷಣೆ

ದಾವಣಗೆರೆ, ನ.18- ಪುಸ್ತಕ ಗಳು ಸಾರಸ್ವತ ಲೋಕದ ಆತ್ಮಗಳು. ಅಂತಹ ಆತ್ಮಗ ಳನ್ನು ಮತ್ತೆ ಮತ್ತೆ ದರ್ಶನ ಮಾಡುವುದು ಪುಣ್ಯದ ಕೆಲಸ ಎಂದು ಬಾಪೂಜಿ ವಿದ್ಯಾಸಂಸ್ಥೆಯ ಆಡಳಿತ ನಿರ್ದೇಶ ಕರೂ, ಜಾನಪದ ತಜ್ಞರೂ ಆದ ಡಾ.ಎಂ.ಜಿ. ಈಶ್ವರಪ್ಪ ಹೇಳಿದರು.

ನಗರದ ಎ.ವಿ. ಕಮಲಮ್ಮ ಮಹಿಳಾ ಕಾಲೇಜಿನಲ್ಲಿ ಗುರುವಾರ ರಾಷ್ಟ್ರೀಯ ಗ್ರಂಥಾ ಲಯ ಸಪ್ತಾಹದ ಅಂಗವಾಗಿ ಹಮ್ಮಿಕೊಂಡಿದ್ದ 'ನಮ್ಮ ನಡಿಗೆ ಪುಸ್ತಕದ ಕಡೆಗೆ' ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ವ್ಯಕ್ತಿಯ ಕೈಯಲ್ಲಿ ಪುಸ್ತಕವಿದ್ದರೆ ಆತ ವಿದ್ಯಾರ್ಥಿ ಎಂದರ್ಥ. ಆದ್ದರಿಂದ ಶಾಲಾ-ಕಾಲೇಜಿನ ವಿದ್ಯಾರ್ಥಿಗಳು ಯಾವಾಗಲೂ ಪುಸ್ತಕವನ್ನು ಜೊತೆಯಲ್ಲಿಟ್ಟು ಕೊಂಡಿರಬೇಕು. ಪುಸ್ತಕಂ ಹಸ್ತ ಲಕ್ಷಣಂ ಎನ್ನುವ ಮಾತಿನಂತೆ ವಿದ್ಯಾರ್ಥಿಗಳಿಗೆ ನಿಜವಾದ ಶೋಭೆ ತರುವುದು ಪುಸ್ತಕ ಮಾತ್ರ ಎಂದು ಪ್ರತಿಪಾದಿಸಿದರು.

ಒಂದು ಪುಸ್ತಕದ ಒಡೆಯ ನಾಗಿದ್ದರೆ ಅವನು ಸರಸ್ವತಿಯ ಆರಾಧಕ ಎಂದರ್ಥ. ಬೇರೆಯವರ ಬಳಿ ಪುಸ್ತಕ ಅಥವಾ ಪೆನ್ನು ಪಡೆಯುವುದು ಶೋಭೆಯಲ್ಲ. ವಿದ್ಯಾರ್ಥಿಗಳು ತರಗತಿಯಲ್ಲಿ ಪುಸ್ತಕಗಳನ್ನು ಓದುವ ಜೊತೆಗೆ, ತರಗತಿಗಳ ಹೊರತಾಗಿಯೂ ಓದುವ ಹವ್ಯಾಸ ರೂಢಿಸಿಕೊಳ್ಳ ಬೇಕು. ಕಂಬೈನ್ಡ್ ಸ್ಟಡಿ ಮೂಲಕ ಜ್ಞಾನ ಹೆಚ್ಚಿಸಿಕೊಳ್ಳಬೇಕು ಎಂದು ಕಿವಿ ಮಾತು ಹೇಳಿದರು.



ನೆಹರೂ ಅವರ ಜನ್ಮ ದಿನದ ಅಂಗವಾಗಿ ಗ್ರಂಥಾಲಯ ಸಪ್ತಾಹ ಆಚರಿಸಲಾಗುತ್ತಿದೆ. ನೆಹರೂ ಅವರು ಬಹುದೊಡ್ಡ ವಿದ್ವಾಂಸರು. ಆದ್ದರಿಂದಲೇ ಅವರನ್ನು ಪಂಡಿತ್ ಜವಾಹರ್ ಲಾಲ್ ನೆಹರೂ ಎನ್ನಲಾಗುತ್ತದೆ. ತಮ್ಮ ಅಮೋಘ ಪಾಂಡಿತ್ಯದಿಂದ ಅನೇಕ ಪುಸ್ತ ಗಳನ್ನು ಬರೆಯುವ ಮೂಲಕ ಭಾರತವನ್ನು ಪ್ರಪಂಚಕ್ಕೆ ಪರಿಚಯಿ ಸಿದ ದೊಡ್ಡ ವಿದ್ವಾಂಸರು ಹಾಗೂ ಆಡಳಿತಗಾರರಾದ ನೆಹರೂ ಅವರ ಪುಸ್ತಕಗಳು ಕಾಲೇಜಿನ ಲೈಬ್ರರಿಗಳಲ್ಲಿ ಲಭ್ಯವಿದ್ದು, ಅದನ್ನು ಓದುವಂತೆ ಈಶ್ವರಪ್ಪ ವಿದ್ಯಾರ್ಥಿಗಳಿಗೆ ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಪ್ರಾಂಶುಪಾಲ ಡಾ.ಬಿ.ಪಿ. ಕುಮಾರ್ ಮಾತನಾಡುತ್ತಾ, ಪ್ರಸ್ತುತ ದಿನಗಳಲ್ಲಿ ಮೊಬೈಲ್‌ಗಳ ಅತಿಯಾದ ಬಳಕೆಯಿಂದಾಗಿ ಸಂಸ್ಕೃತಿ, ಸಂಸ್ಕಾರ, ವೈಚಾರಿಕತೆ ಒಳಗೊಂಡ ಪುಸ್ತಕಗಳನ್ನು ಓದುವ ಹವ್ಯಾಸ ಕಡಿಮೆಯಾಗುತ್ತಿದೆ. ಗ್ರಂಥಾಲಯಗಳು ಪುಸ್ತಕಗಳ ಜೈಲುಗಳಾಗಿವೆ ಎಂದರು.

ಸೀಮಿತವಾಗಿ ಮೊಬೈಲ್ ಬಳಸಿ, ಭವಿಷ್ಯ ಉಜ್ವಲಗೊಳಿಸಿಕೊಳ್ಳಲು ಪ್ರತಿ ದಿನ ಕನಿಷ್ಟ ಒಂದು ತಾಸು ಪುಸ್ತಕ ಓದಿ. ಇದರಿಂದಾಗಿ ಜ್ಞಾನಾರ್ಜನೆ ಹೆಚ್ಚಾಗುತ್ತದೆ. ಆ ಮೂಲಕ ಪ್ರಜ್ಞಾವಂತರಾಗಿ, ನಾಡಿಗೆ, ಹೆತ್ತವರಿಗೆ ಆದರ್ಶ ವ್ಯಕ್ತಿಗಳಾಗಿ ಬಾಳಿ ಎಂದು ಆಶಿಸಿದರು.

ಗ್ರಂಥಪಾಲಕ ಹೆಚ್.ಸತೀಶ್ ಮಾತನಾಡಿ, ನೆಹರೂ ಅವರ ಜನ್ಮ ದಿನದ ಅಂಗವಾಗಿ ಪ್ರತಿ ವರ್ಷ ನ.14 ರಿಂದ 20ರವರೆಗೆ ರಾಷ್ಟ್ರೀಯ ಗ್ರಂಥಾಲಯ ಸಪ್ತಾಹ ಆಚರಿಸಲಾಗುತ್ತಿದೆ. ಗ್ರಂಥಾಲಯಗಳಿಂದ ದೂರ ಉಳಿಯುತ್ತಿರುವ ಓದುಗರನ್ನು ಹತ್ತಿರ ಸೆಳೆಯಲು 1968 ರಿಂದ ಈ ಕಾರ್ಯಕ್ರಮ ಆಚರಿಸಲಾಗುತ್ತಿದೆ ಎಂದರು. ಉಪನ್ಯಾಸಕರಾದ ಆರ್.ಜಿ.ಕವಿತಾ ಅತಿಥಿಗಳನ್ನು ಸ್ವಾಗತಿಸಿದರು.


### ಪುಸ್ತಕಗಳನ್ನು ಕೊಳ್ಳೆ ಹೊಡೆಯಿರಿ

ನಿಮ್ಮ ಕಾಲೇಜಿನ ಗ್ರಂಥಾಲಯಗಳಲ್ಲಿನ ಪುಸ್ತಕಗಳನ್ನು ಕೊಳ್ಳೆ ಹೊಡಿಯಿರಿ ಎಂದು ಡಾ.ಎಂ.ಜಿ. ಈಶ್ವರಪ್ಪ ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ಗ್ರಂಥಾಲಯಗಳ ಒಳಗೆ ಕುಳಿತುಕೊಳ್ಳಲು ಜಾಗವಿರದಂತೆ ವಿದ್ಯಾರ್ಥಿಗಳು ತುಂಬಿಕೊಂಡಿರಬೇಕು . ಅಲ್ಲಿನ ಪುಸ್ತಕಗಳನ್ನು ಓದಿ ಅಲ್ಲಿನ ಲೇಖಕರನ್ನು ನಿಮ್ಮವರನ್ನಾಗಿ ಮಾಡಿಕೊಳ್ಳಿ. ಕಾಲೇಜಿನಲ್ಲಿರುವ ನಿಮ್ಮ ಓಡಾಡುವ ಲೈಬ್ರರಿಗಳಾದ ಅಧ್ಯಾಪಕರುಗಳ ಸಲಹೆ, ಮಾರ್ಗದರ್ಶನ ಪಡೆಯಿರಿ ಎಂದು ಸಲಹೆ ನೀಡಿದರು.

ವಿದ್ಯಾರ್ಥಿಗಳು ತರಗತಿಗಳಲ್ಲಿ ಎಂದರೆ ಮುಖ್ಯವಾಗಿ ಗ್ರಂಥಾಲಯದಲ್ಲಿರಬೇಕು. ಇಲ್ಲವೇ ಆಟದ ಅಂಕಣದಲ್ಲಿರಬೇಕು ಎಂದರು.

# ನಗರದ ಮಾತಾ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ಇಂದು ಗೌರಿ ಹುಣ್ಣಿಮೆ



ದೇವರಾಜ ಅರಸು ಬಡಾವಣೆ 'ಎ' ಬ್ಲಾಕ್‌ನಲ್ಲಿರುವ ಶ್ರೀ ಮಾತಾ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ಗೌರಿ ಹುಣ್ಣಿಮೆ ಪ್ರಯುಕ್ತ ಇಂದು ವಿಶೇಷ ಪೂಜಾ ಕಾರ್ಯಕ್ರಮಗಳು ಆಯೋಜನೆಗೊಂಡಿವೆ. ನವಗ್ರಹ ಹೋಮ, ಶ್ರೀ ಸತ್ಯನಾರಾಯಣ ಸ್ವಾಮಿ ಪೂಜಾ ಕಥಾ, ಪ್ರಧಾನ ದೇವತೆ ಶ್ರೀ ಮಾತಾ ಅನ್ನಪೂರ್ಣೇಶ್ವರಿಗೆ ಮಹಾಮಂಗಳಾರತಿ ಮತ್ತು ತೀರ್ಥ ಪ್ರಸಾದ ವಿನಿಯೋಗ ಜರುಗಲಿದೆ ಎಂದು ದೇವಸ್ಥಾನ ಸಮಿತಿ ಅಧ್ಯಕ್ಷ ಆರ್.ಜಿ. ನಾಗೇಂದ್ರ ಪ್ರಕಾಶ್ ತಿಳಿಸಿದ್ದಾರೆ.

# ಕುಣಿಬೆಳಕೆರೆಯಲ್ಲಿ ಇಂದು ದೊಡ್ಡ ಎಡೆ ಜಾತ್ರೆ

ಮಲೇಬೆನ್ನೂರು ಸಮೀಪದ ಕುಣಿಬೆಳಕೆರೆ ಗ್ರಾಮದ ಶ್ರೀ ಬೀರಲಿಂಗೇಶ್ವರ ಸ್ವಾಮಿಯ ದೊಡ್ಡ ಎಡೆ ಜಾತ್ರೆ ಮತ್ತು ಸಾಮೂಹಿಕ ವಿವಾಹ ಇಂದು ಬೆಳಗ್ಗೆ 10 ಗಂಟೆಗೆ ಜರುಗಲಿದೆ

# ಹರಪನಹಳ್ಳಿ ತಾಲ್ಲೂಕಿನಲ್ಲಿ ಅಕಾಲಿಕ ಮಳೆಗೆ ನೀರು ಪಾಲಾದ ಭತ್ತ

ಹರಪನಹಳ್ಳಿ, ನ.18- ಭತ್ತ ಒಣಗಿಸಲು ಹಾಕಿದ ವೇಳೆ ಅಕಾಲಿಕ ಮಳೆಯಿಂದಾಗಿ ತಾಲ್ಲೂಕಿನ ತುಂಗಭದ್ರಾ ನದಿ ಪಾತ್ರಕ್ಕೆ ಹೊಂದಿಕೊಂಡಿರುವ ತಾವರಗುಂದಿ ಗ್ರಾಮದ ಬಳಿ ಇದ್ದಕ್ಕಿದ್ದಂತೆ ನದಿ ನೀರಿನ ಹರಿವು ಹೆಚ್ಚಾದ ಪರಿಣಾಮ, ಭತ್ತ ನೀರಿನಲ್ಲಿ ಕೊಚ್ಚಿಕೊಂಡು ಹೋದ ಘಟನೆ ಜರುಗಿದೆ.

ಎಂ.ಪಿ. ಪ್ರಕಾಶ್ ಸಮಾಜಮುಖಿ ಟ್ರಸ್ಟ್ ಅಧ್ಯಕ್ಷೆ ಹಾಗೂ ಕಾಂಗ್ರೆಸ್ ಮಾಧ್ಯಮ ವಿಶ್ಲೇಷಕಿ ಎಂ.ಪಿ. ವೀಣಾ ಮಹಾಂತೇಶ್ ಭೇಟಿ ನೀಡಿದ ವೇಳೆ ರೈತ ವಿರೂಪಾಕ್ಷಿ ಗೌಡ ಮಾತನಾಡಿ, ಮಧ್ಯರಾತ್ರಿ ವೇಳೆ ನದಿಯ ನೀರಿನ ಹರಿವು ಹೆಚ್ಚಾಗಿದ್ದು, ನದಿ ಪಾತ್ರದಲ್ಲಿ ಒಣಗಿಸಲು ಹಾಕಿದ್ದ ಭತ್ತದ ಫಸಲು ನದಿ ನೀರಿನಲ್ಲಿ ಕೊಚ್ಚಿಕೊಂಡು ಹೋಗಿದೆ. ಕಳೆದ 6 ತಿಂಗಳಿನಿಂದ ಶ್ರಮ ವಹಿಸಿ ಬೆಳೆದ ಭತ್ತದ ಫಸಲು ಕೈ ಸೇರದೆ ನದಿ ಪಾಲಾಗಿರುವುದು ಜೀವನ ನಿರ್ವಹಣೆ ಮಾಡಲು ಕಷ್ಟವಾಗಿದೆ ಎಂದು ತಮ್ಮ ಅಳಲು ತೋಡಿಕೊಂಡರು.



ಎಂ.ಪಿ. ವೀಣಾ ಮಹಾಂತೇಶ್ ಮಾತನಾಡಿ, ತಾವರಗೊಂದಿ ಗ್ರಾಮದ ಸುಮಾರು 200 ರೈತರ 3000 ಚೀಲಗಳಷ್ಟು ಅಧಿಕ ಭತ್ತದ ರಾಶಿಗಳು ನೀರಿನಲ್ಲಿ ಕೊಚ್ಚಿ ಹೋಗಿವೆ. ರೈತರು ನದಿ ಪಾತ್ರಕ್ಕೆ ತೆರಳಿ ತಾಡಪಾಲು, ಗೋಣಿ ಚೀಲ ಸೇರಿದಂತೆ ವಿವಿಧ ಮಾರ್ಗದಲ್ಲಿ ಭತ್ತ ಸಂಗ್ರಹಿಸಲು ಹರಸಾಹಸ ಪಟ್ಟಿದ್ದು, ಅಲ್ಪ ಸ್ವಲ್ಪ ಕಾಪಾಡಿ ಕೂಡಿಟ್ಟ ಭತ್ತ ಕೂಡ ಫಲ ಒಡೆದು ಮೊಳಕೆ ಬಂದಿದೆ. ರೈತರು ಸಂಕಷ್ಟಕ್ಕೆ ಸಿಲುಕಿದ್ದು, ಸರ್ಕಾರ ಕೂಡಲೇ ರೈತರಿಗೆ ಸೂಕ್ತ ಪರಿಹಾರ ನೀಡಬೇಕು ಎಂದು ಸರ್ಕಾರವನ್ನು ಒತ್ತಾಯಿಸಿದರು.

ಭದ್ರಾ ನದಿಯಿಂದ ಸುಮಾರು 6 ರಿಂದ 7 ಸಾವಿರ ಕ್ಯೂಸೆಕ್ಸ್ ನೀರು ಹರಿದು ಬಂದಿದೆ ಎನ್ನಲಾಗಿದೆ. ಘಟನಾ ಸ್ಥಳಕ್ಕೆ ಜಿಲ್ಲಾ ಉಪ ಕೃಷಿ ನಿರ್ದೇಶಕರಾದ ಮಂಜುಳಾ ಬಸವರೆಡ್ಡಿ, ಸಹಾಯಕ ಕೃಷಿ ನಿರ್ದೇಶಕ ಮಂಜುನಾಥ ಗೊಂದಿ ಭೇಟಿ ನೀಡಿ ಪರಿಶೀಲನೆ ನಡೆಸಿ ತಹಶೀಲ್ದಾರರಿಗೆ ವರದಿ ಸಲ್ಲಿಸುವುದಾಗಿ ಹೇಳಿದರು.

# ಕೇರ್ನ್ ಪೂರ್ವಾನ್ವಯ ತೆರಿಗೆ ಇತ್ಯರ್ಥಕ್ಕೆ ಕೇಂದ್ರದ ಸಮ್ಮತಿ

ನವದೆಹಲಿ, ನ. 18 – ಭಾರತಕ್ಕೆ ಅತಿ ದೊಡ್ಡ ತೈಲ ನಿಕ್ಷೇಪ ಕೊಟ್ಟ ಕೇರ್ನ್ ವಿರುದ್ಧದ ಪೂರ್ವಾನ್ವಯ ತೆರಿಗೆ ಪ್ರಕರಣವನ್ನು ತ್ವರಿತವಾಗಿ ಅಂತ್ಯಗೊಳಿಸಲು ಮುಂದಾಗಿರುವ ಕೇಂದ್ರ ಸರ್ಕಾರ, ಕೇರ್ನ್ ಎನರ್ಜಿ ಪಿ.ಎಲ್.ಸಿ.ಯ ಪ್ರಸ್ತಾವನೆಗೆ ಸಮ್ಮತಿಸಿದೆ.

ಪೂರ್ವಾನ್ವಯ ತೆರಿಗೆಯನ್ನು ರದ್ದುಗೊಳಿಸುವ ನೂತನ ಶಾಸನದ ಅನ್ವಯ ಕ್ರಮ ತೆಗೆದುಕೊಂಡಿರುವ ಕಂಪನಿ, ಮುಂದಿನ ದಿನಗಳಲ್ಲಿ ಭಾರತ ಸರ್ಕಾರದ ಆಸ್ತಿಗಳ ವಿರುದ್ಧ ಯಾವುದೇ ಕ್ರಮ ತೆಗೆದುಕೊಳ್ಳುವುದಿಲ್ಲ ಎಂದು ಮುಚ್ಚಳಿಕೆ ಬರೆದುಕೊಟ್ಟಿದೆ.

ಸರ್ಕಾರ ಈ ಪ್ರಸ್ತಾವನೆಗೆ ಸಮ್ಮತಿಸಿದೆ ಹಾಗೂ ಕೇರ್ನ್‌ಗೆ ತೆರಿಗೆ ಮರು ಪಾವತಿಸುವುದಾಗಿ ಹೇಳಿದೆ ಎಂದು ಮೂಲಗಳು ತಿಳಿಸಿವೆ.

ಕೇಂದ್ರ ಸರ್ಕಾರದ ಅನುಮತಿಯ ನಂತರ, ಕೇರ್ನ್ ಅಂತರರಾಷ್ಟ್ರೀಯ ನ್ಯಾಯಾಲಯಗಳಲ್ಲಿ ದಾಖಲಿಸಿರುವ ಪ್ರಕರಣಗಳನ್ನು ಮೂರರಿಂದ ನಾಲ್ಕು ವಾರಗಳಲ್ಲಿ ವಾಪಸ್ ಪಡೆಯಲಿದೆ. ಕೇರ್ನ್, ವೊಡಫೋನ್, ಸನೋಫಿ ಹಾಗೂ ಸ್ಯಾಬ್‌ಮಿಲ್ಲರ್ ರೀತಿಯ ಕಂಪನಿಗಳು 1.1 ಲಕ್ಷ ಕೋಟಿ ರೂ. ತೆರಿಗೆ ಪಾವತಿಸಬೇಕು ಎಂಬ ಬೇಡಿಕೆಯನ್ನು ಕೈ ಬಿಡುವ ಶಾಸನಕ್ಕೆ ಕೇಂದ್ರ ಸರ್ಕಾರ ಆಗಸ್ಟ್ ತಿಂಗಳಲ್ಲಿ ಅನುಮೋದನೆ ಪಡೆದುಕೊಂಡಿತ್ತು.

ಕಂಪನಿಗಳು ಸರ್ಕಾರದ ವಿರುದ್ಧ ದಾಖಲಿಸಿರುವ ಪ್ರಕರಣಗಳನ್ನು ವಾಪಸ್ ಪಡೆದರೆ, ಕೇಂದ್ರ ಸರ್ಕಾರ ಕಂಪನಿಗಳಿಂದ ಪಡೆಯಲಾದ 8,100 ಕೋಟಿ ರೂ.ಗಳ ತೆರಿಗೆಯನ್ನು ವಾಪಸ್ ಕೊಡಲಿದೆ. ಇದರಲ್ಲಿ 7,900 ಕೋಟಿ ರೂ.ಗಳು ಕೇರ್ನ್ ಕಂಪನಿಗೆ ಸಂಬಂಧಿಸಿದವುಗಳಾಗಿವೆ.

# ವೈದ್ಯಕೀಯ ಶಿಕ್ಷಣದಲ್ಲಿ ಶಿಸ್ತು, ನಿಷ್ಠೆ, ಸಮರ್ಪಣಾ ಭಾವ ಮೈಗೂಡಿಸಿಕೊಳ್ಳಬೇಕು

## ಎಸ್ಸೆಸ್ ವೈದ್ಯಕೀಯ ಮಹಾವಿದ್ಯಾಲಯದ ಸಾಂಸ್ಕೃತಿಕ ಸಮಾರಂಭದಲ್ಲಿ ಡಾ. ಸತ್ಯಮೂರ್ತಿ



ದಾವಣಗೆರೆ, ನ. 18- ವೈದ್ಯಕೀಯ ವೃತ್ತಿ ಯಲ್ಲಿ ಕ್ರೀಡಾ ಮತ್ತು ಸಾಂಸ್ಕೃತಿಕ ಚಟುವಟಿಕೆ ಗಳು ವಿದ್ಯಾರ್ಥಿಗಳಲ್ಲಿ ಮಾನಸಿಕ ಸಮತೋಲನ ಕಾಪಾಡುತ್ತವೆ. ವೈದ್ಯಕೀಯ ಶಿಕ್ಷಣದಲ್ಲಿ ಶಿಸ್ತು, ನಿಷ್ಠೆ, ಸೇವಾ ಹಾಗೂ ಸಮರ್ಪಣಾ ಭಾವಗಳನ್ನು ಮೈಗೂಡಿಸಿಕೊಳ್ಳಬೇಕೆಂದು ಬೆಂಗಳೂರಿನ ರಾಜರಾಜೇಶ್ವರಿ ವೈದ್ಯಕೀಯ ವಿದ್ಯಾಲಯದ ಡೀನ್ ಡಾ. ಸತ್ಯ ಮೂರ್ತಿ ಅವರು ತಮ್ಮ ವಿದ್ಯಾರ್ಥಿ ಜೀವನದ ಅನುಭವದ ಉದಾಹರಣೆಗಳ ಮೂಲಕ ತಿಳಿಸಿದರು.

ನಗರದ ಎಸ್ಸೆಸ್ ವೈದ್ಯಕೀಯ ಮಹಾವಿದ್ಯಾ ಲಯ ಮತ್ತು ಸಂಶೋಧನಾ ಕೇಂದ್ರದ ನಿನ್ನೆ ಹಮ್ಮಿಕೊಂಡಿದ್ದ ವಾರ್ಷಿಕ ಸಾಂಸ್ಕೃತಿಕ ಕಾರ್ಯ ಕ್ರಮ 'ಮನ್ವಂತರ'ದಲ್ಲಿ ಮುಖ್ಯ ಅತಿಥಿಯಾಗಿ ಉಪಸ್ಥಿತರಿದ್ದು ಅವರು ಮಾತನಾಡಿದರು.

ವೈದ್ಯ ವಿದ್ಯಾರ್ಥಿಗಳು ಸಾಮಾಜಿಕ ಕಾಳಜಿಯಿಂದ ಕಾರ್ಯನಿರ್ವಹಿಸಿ, ಅವರ ತಂದೆ-ತಾಯಿ, ವಿದ್ಯಾಲಯ ಹಾಗೂ ಸಮಾಜದ ಮೌಲ್ಯಗಳನ್ನು ಎತ್ತಿ ಹಿಡಿಯಲು ದೇಶದ ಉತ್ತಮ ನಾಗರಿಕರಾಗಬೇಕೆಂದು ಆಶಿಸಿದರು.

ವಿಶೇಷ ಆಹ್ವಾನಿತರಾಗಿ ಆಗಮಿಸಿದ್ದ ಬಾಪೂಜಿ ವಿದ್ಯಾಸಂಸ್ಥೆಯ ಆಡಳಿತ ಮಂಡಳಿ ಸದಸ್ಯ ಡಾ.ಸಂಪನ್ನ ಮುತಾಲಿಕ್ ಮಾತನಾಡಿ, ವೈದ್ಯರ ಸಾಮಾಜಿಕ ಜವಾಬ್ದಾರಿಗಳನ್ನು ಉದ್ದೇಶಿಸಿ ತಮ್ಮ ವಿದ್ಯಾರ್ಥಿ ಜೀವನದ ಕೆಲವು ಅನುಭವದ ಮೆಲುಕು ಹಾಕುತ್ತಾ, ಹಾಸ್ಯ ಚಟಾಕಿ ಮತ್ತು ಕನ್ನಡ ಶಾಯಿರಿ ಮೂಲಕ ಉಪದೇಶಿಸಿದರು.

ಎಸ್ಸೆಸ್ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಕೇಂದ್ರದ ಪ್ರಾಂಶುಪಾಲ ಡಾ. ಬಿ.ಎಸ್. ಪ್ರಸಾದ್ ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಮಾತನಾಡಿ, ವೈದ್ಯಕೀಯ ಜೀವನದಲ್ಲಿ ಶೈಕ್ಷಣಿಕ ಚಟುವಟಿಕೆಯ ಜೊತೆಗೆ ಕ್ರೀಡೆ ಮತ್ತು ಸಾಂಸ್ಕೃತಿಕ ಚಟುವಟಿಕೆಗಳು ಬಹುಮುಖ್ಯ ಪಾತ್ರ ವಹಿಸುವುದರ ಬಗ್ಗೆ ಭವಿಷ್ಯದ ವೈದ್ಯರೊಂದಿಗೆ ಹಂಚಿಕೊಂಡರು.

ವೈದ್ಯಕೀಯ ನಿರ್ದೇಶಕ ಡಾ.ಎನ್.ಕೆ. ಕಾಳಪ್ಪನವರ್, ಉಪ ಪ್ರಾಂಶುಪಾಲರುಗಳಾದ ಡಾ.ಅರುಣ ಅಜ್ಜಪ್ಪ, ಡಾ. ಶಶಿಕಲಾ ಪಿ. ಕೃಷ್ಣ ಮೂರ್ತಿ, ವಿದ್ಯಾರ್ಥಿ ಸಂಘದ ಛೇರ್ಮನ್ ಡಾ. ಎಮ್. ಬಸವರಾಜಪ್ಪ, ಉಪ ಛೇರ್ಮನ್ ಡಾ. ವಿಜಯಕುಮಾರ ಜತ್ತಿ, ಡಾ.ಹರೀಶ್ ಕುಮಾರ, ವಿದ್ಯಾರ್ಥಿ ಕಾರ್ಯದರ್ಶಿ ಡಾ. ಬಿ.ಎಂ ತುಷಾರ್, ಡಾ. ಕ್ಲೆಮೆಂಟಿನಾ, ಶ್ರವಣ, ಸೃಷ್ಟಿ ಮತ್ತು ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ಜಿಲ್ಲೆಯಲ್ಲಿ 10.ಮೀ.ಮೀ. ಮಳೆ: 75.48 ಲಕ್ಷ ರೂ.ನಷ್ಟು ಹಾನಿ

ದಾವಣಗೆರೆ, ನ.18 - ಜಿಲ್ಲೆಯಲ್ಲಿ ಬುಧವಾರ 10 ಮಿ.ಮೀ ಸರಾಸರಿ ಮಳೆಯಾಗಿದ್ದು, 75.48 ಲಕ್ಷ ರೂ. ನಷ್ಟದ ಅಂದಾಜು ಮಾಡಲಾಗಿದೆ.

ದಾವಣಗೆರೆ ತಾಲ್ಲೂಕು ವ್ಯಾಪ್ತಿಯಲ್ಲಿ 135 ಎಕರೆ ಭತ್ತ, 2 ಎಕರೆ ಬಾಳೆ ಮತ್ತು 10 ಎಕರೆ ಮೆಕ್ಕೆಜೋಳದ ಬೆಳೆ ಹಾನಿಯಾಗಿದ್ದು, 6.50 ಲಕ್ಷ ರೂ., ಹರಿಹರ ತಾಲ್ಲೂಕು ವ್ಯಾಪ್ತಿಯಲ್ಲಿ 787 ಎಕರೆ ಭತ್ತ, 2 ಎಕರೆ ರಾಗಿ ಬೆಳೆ ಹಾನಿಯಾಗಿದ್ದು, 48.33 ಲಕ್ಷ ರೂ., ಹೊನ್ನಾಳಿ ತಾಲ್ಲೂಕಿನಲ್ಲಿ 1 ಪಕ್ಕಾ ಮನೆಗೆ ಆದ ಹಾನಿಯಿಂದ 3 ಲಕ್ಷ ರೂ. ಮತ್ತು 2 ಪಕ್ಕಾ ಮನೆಗಳ ಭಾಗಶಃ ಹಾನಿಯಿಂದ 1.30 ಲಕ್ಷ ರೂ.ಸೇರಿ ಒಟ್ಟು4.30 ಲಕ್ಷ ರೂ. ಅಂದಾಜು ನಷ್ಟ ಸಂಭವಿಸಿದೆ.

ನ್ಯಾಮತಿ ತಾಲ್ಲೂಕಿನಲ್ಲಿ 1 ಪಕ್ಕಾ ಮನೆಗೆ ಹಾನಿಯಾಗಿದ್ದು, 1 ಲಕ್ಷ ರೂ. ಮತ್ತು 6 ಪಕ್ಕಾ ಮನೆಗಳಿಗೆ ಭಾಗಶಃ ಹಾನಿಯಾಗಿದ್ದು, 3 ಲಕ್ಷ ರೂ., 1 ದನದ ಕೊಟ್ಟಿಗೆಗೆ ಹಾನಿಯಾಗಿದ್ದು, 15 ಸಾವಿರ ರೂ. ಮತ್ತು 7 ಎಕರೆ ಭತ್ತದ ಬೆಳೆ ಹಾನಿಯಾಗಿದ್ದು, 3 ಲಕ್ಷ ರೂ. ಸೇರಿ ಒಟ್ಟು 7.15 ಲಕ್ಷ ರೂ. ನಷ್ಟ ಸಂಭವಿಸಿದೆ.

ಚನ್ನಗಿರಿ ತಾಲ್ಲೂಕು ವ್ಯಾಪ್ತಿಯಲ್ಲಿ 1 ಪಕ್ಕಾ ಮನೆಗೆ ತೀವ್ರ ಹಾನಿಯಾಗಿದ್ದು, 3 ಲಕ್ಷ ರೂ., 2 ಪಕ್ಕಾ ಮನೆಗಳಗೆ ಭಾಗಶಃ ಹಾನಿಯಾಗಿದ್ದು 1.20 ಲಕ್ಷ ರೂ. ಮತ್ತು 2 ಕಚ್ಚಾ ಮನೆಗಳಿಗೆ ತೀವ್ರ ಹಾನಿಯಾಗಿದ್ದು 3 ಲಕ್ಷ ರೂ. ಒಟ್ಟು 7.20 ಲಕ್ಷ ಅಂದಾಜು ನಷ್ಟ ಸಂಭವಿಸಿದೆ.


## 14ನೇ ವರ್ಷದ ಪುಣ್ಯಸ್ಮರಣೆ



ವೇದಮೂರ್ತಿ ಶ್ರೀ ಚನ್ನಯ್ಯ ಒಡೆಯರ್

ಮಾಜಿ ಸಂಸದರು, ದಾವಣಗೆರೆ.

ನೀವು ನಮ್ಮನ್ನು ಅಗಲಿ ಇಂದಿಗೆ 14 ವರ್ಷಗಳಾದವು ಸದಾ ನಿಮ್ಮ ಸ್ಮರಣೆಯಲ್ಲಿ....

- ಶ್ರೀಮತಿ ಹಾಲಮ್ಮ ಚನ್ನಯ್ಯ ಒಡೆಯರ್ ಮತ್ತು ಮಕ್ಕಳು, ಅಳಿಯಂದಿರು, ಸೊಸೆಯಂದಿರು.
- ಶ್ರೀಮತಿ ಹನುಮಮ್ಮ ನಾಗಯ್ಯ ಒಡೆಯರ್ ಮತ್ತು ಮಕ್ಕಳು ಹಾಗೂ ಅಳಿಯಂದಿರು, ಸೊಸೆಯಂದಿರು.
- ಶ್ರೀಮತಿ ಮಂಜುಳಾ ಶಿವಾನಂದಪ್ಪ, ಮಾಜಿ ಅಧ್ಯಕ್ಷರು, ತಾಲ್ಲೂಕು ಪಂಚಾಯ್ತಿ, ಜಗಳೂರು.


# ನಗರದಲ್ಲಿಂದು ಇಂದಿರಾ ಜನ್ಮ ದಿನಾಚರಣೆ



ಜಿಲ್ಲಾ ಕಾಂಗ್ರೆಸ್ ವತಿಯಿಂದ ಮಾಜಿ ಪ್ರಧಾನಿ ಶ್ರೀಮತಿ ಇಂದಿರಾಗಾಂಧಿಯವರ 101ನೇ ಜನ್ಮ ದಿನಾಚರಣೆಯನ್ನು ಇಂದು ಬೆಳಿಗ್ಗೆ 11-30 ಗಂಟೆಗೆ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹೆಚ್.ಬಿ.ಮಂಜಪ್ಪ ಅವರ ಅಧ್ಯಕ್ಷತೆಯಲ್ಲಿ ಜಿಲ್ಲಾ ಕಾಂಗ್ರೆಸ್ ಪಕ್ಷದ ಕಚೇರಿಯಲ್ಲಿ ಏರ್ಪಡಿಸಲಾಗಿದೆ ಎಂದು ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ ತಿಳಿಸಿದ್ದಾರೆ.

# ಲೈಂಗಿಕ ಉದ್ದೇಶದಿಂದ ಮಗುವನ್ನು ಮುಟ್ಟುವುದು ಅಪರಾಧ : ಸುಪ್ರೀಂ

ನವದೆಹಲಿ, ನ. 18 – ಮಗುವಿನ ದೇಹದ ಗುಪ್ತಾಂಗಗಳನ್ನು ಮುಟ್ಟುವುದು ಇಲ್ಲವೇ ಲೈಂಗಿಕ ಉದ್ದೇಶದಿಂದ ದೇಹ ಸ್ಪರ್ಷಿಸುವುದು ಪೋಕ್ಸೋ ಕಾಯ್ದೆಯ ಸೆಕ್ಷನ್ 7ರ ಅಡಿಯಲ್ಲಿ ಲೈಂಗಿಕ ಹಲ್ಲೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಲೈಂಗಿಕ ಉದ್ದೇಶದಿಂದ ಮುಟ್ಟಿರುವುದು ಅಪರಾಧವಾಗಿದೆ. ಇದರಲ್ಲಿ ಮಗುವಿನ ಚರ್ಮಕ್ಕೆ ಹಲ್ಲೆಕೋರನ ಚರ್ಮ ತಗುಲಿರಲೇಬೇಕು ಎಂಬುದು ಕಡ್ಡಾಯವಲ್ಲ ಎಂದು ಕೋರ್ಟ್ ಹೇಳಿದೆ. ಚರ್ಮಕ್ಕೆ ಚರ್ಮ ತಗುಲಿದ್ದರೆ ಮಾತ್ರ ಅಪರಾಧವಾಗುತ್ತದೆ ಎಂದು ಬಾಂಬೆ ಹೈಕೋರ್ಟ್ ಎರಡು ಪ್ರಕರಣಗಳಲ್ಲಿ ತೀರ್ಪು ನೀಡಿರುವುದನ್ನು ಸುಪ್ರೀಂ ಕೋರ್ಟ್ ತಳ್ಳಿ ಹಾಕಿದೆ. 53 ಪುಟಗಳ ತೀರ್ಪು ನೀಡಿರುವ ನ್ಯಾಯಾಲಯ, ಕಾಯ್ದೆಯ ಯಾವುದೇ ಅಂಶಗಳನ್ನು ದುರ್ಬಲಗೊಳಿಸಿದರೆ ಅದರ ಉದ್ದೇಶಕ್ಕೆ ಸೋಲಾಗುತ್ತದೆ. ಈ ರೀತಿಯ ಕ್ರಮಗಳನ್ನು ಒಪ್ಪಲಾಗದು ಎಂದು ತಿಳಿಸಿದೆ.

# ಕರುಣಾ ಟ್ರಸ್ಟಿನಿಂದ 'ಕಾಡೊಳಗೊಂದು ಗೂಡು'

ದಾವಣಗೆರೆ, ನ.18- ನಗರದ ಸುತ್ತಮುತ್ತ 8 ರಿಂದ 10 ಕಿ. ಮೀ. ದೂರದಲ್ಲಿ 10 ಎಕರೆ ಭೂಮಿಯಲ್ಲಿ ಸುಂದರ ಆಶ್ರಮ ನಿರ್ಮಿಸಿ 30 ಸದಸ್ಯರಿಗೆ 'ಕಾಡೊಳಗೊಂದು ಗೂಡು' ನಿರ್ಮಿಸಿ, ಬಡ ಮಕ್ಕಳಿಗೆ ಊಟ, ವಸತಿ ಮತ್ತು ವಿಧವೆಯರಿಗೆ ಸ್ವಯಂ ಉದ್ಯೋಗ ನೀಡಿ ಆಶ್ರಯ ನೀಡಬೇಕೆಂಬ ಉದ್ದೇಶವನ್ನು ನಗರದ ಕರುಣಾ ಕಲ್ಯಾಣ ಟ್ರಸ್ಟ್ ಹೊಂದಿದೆ.

ಇದೊಂದು ಜೀವಪರ, ಜನಪರ ಸಮಾಜಮುಖಿ ಅರಿವು ಆಧಾರಿತ ಸಹಜಾನಂದದ ಸಹಪಯಣ. ಈ ಆಶ್ರಮದಲ್ಲಿ ಅತೀ ಕಡಿಮೆ ಖರ್ಚಿನ 6 ಚದುರದ ಸರಳ, ಸುಂದರ ಮನೆಗಳನ್ನು ನಿರ್ಮಾಣ ಮಾಡಬಯಸಿದ್ದೇವೆ. ಮುಖ್ಯವಾಗಿ ಸರಳತೆ, ಶ್ರಮ, ಪರಿಸರಪೂರಕ, ಯಥೇಚ್ಛ ಹೂ, ಹಣ್ಣಿನ ಮರಗಳನ್ನು ಬೆಳೆಸಿ ಆಶ್ರಮಕ್ಕೆ ಬೇಕಾದ ತರಕಾರಿ, ಹಣ್ಣು ನಾವೇ ಸಾವಯವ ಪದ್ಧತಿಯ ಮೂಲಕ ಬೆಳೆಯಬೇಕೆಂದಿದ್ದೇವೆ. ಈಗಾಗಲೇ ಕೆಲವು ವೈದ್ಯರು, ಇಂಜಿನಿಯರ್‌ಗಳು, ಪ್ರೊಫೆಸರ್‌ಗಳು, ಕೃಷಿಕರು, ಮಾಸ್ತರ್‌ಗಳು ಸದಸ್ಯರಾಗಲು ಬಯಸಿದ್ದಾರೆ.ಆಶ್ರಮದ ನಿರ್ಮಾಣಕ್ಕೆ ಇನ್ನೂ 20 ಜನ ಸಹೃದಯ ಸದಸ್ಯರು ಬೇಕಾಗಿದ್ದಾರೆ. ಹೆಚ್ಚಿನ ಮಾಹಿತಿಗೆ ಕರುಣಾ ಕಲ್ಯಾಣ ಕಾರ್ಯಕರ್ತರಾದ ವೀಣಾಕುಮಾರ್ ಅವರನ್ನು (9110455199) ಸಂಪರ್ಕಿಸಿದರೆ, ಆಶ್ರಮದ ರೂಪುರೇಷೆಗಳ ಬಗ್ಗೆ ತಿಳಿಸಲಾಗುವುದು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.


REQUIRED

LIAISON EXECUTIVE (SSLC QUALIFIED); ELECTRICIAN (DIPLOMA HOLDER) AND HORTICULTURIST (PREFERABLY GRADUATE) TO WORK AT RANEBENNUR AREA.

CONTACT: 8431286626 6364862762 / 08049222216

ಬೇಕಾಗಿದೆ

ದಾವಣಗೆರೆಯಿಂದ ರಾಣೆಬೆನ್ನೂರಿನವರೆಗೆ 10 ಕಿ.ಮೀ. ವ್ಯಾಪ್ತಿಯಲ್ಲಿ 10 ರಿಂದ 100 ಎಕರೆವರೆಗೆ ಕೆಂಪು ಮಣ್ಣು & ನೀರಿನ ಸೌಕರ್ಯವಿರುವ ಕೃಷಿ ಭೂಮಿ ಹಾಗೂ ಕೈಗಾರಿಕೆ ಉದ್ದೇಶಕ್ಕಾಗಿ ಭೂಮಿ ಬೇಕಾಗಿದೆ.

Mr. Vijaya Kumar 8431286626

Mr. Nagaraju C A 6364862762

Mr. Lingaraj 8453521357

WANTED TEACHERS

B.A/M.A - B.Ed- English

B.A-B.P.Ed/M.P.Ed- P.E

Experienced with Communication skills and Subject Knowledge is must

*Contact*

99806 29965, 70220 04109


JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte